
ಕರ್ನಾಟಕದ ಮಹಿಳಾ ಶಿಲ್ಪಕಲಾವಿದರು

ಒಂದು ಅಧ್ಯಯನ

(ಶಿಲ್ಪಕಲಾ ಅಕಾಡೆಮಿಯ 2017-18 ನೇ ಸಾಲಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವಿಶೇಷ ಘಟಕ ಯೋಜನೆ ಅಡಿ ಫೆಲೋಶಿಪ್‌ಗಾಗಿ ಸಲ್ಲಿಸುತ್ತಿರುವ ಸಂಶೋಧನಾ ಪ್ರಬಂಧ)









ಸಂಶೋಧಕರು

ನಯನಾ ಬಾಬುರಾವ್

ಮಾರ್ಗದರ್ಶಕರು

ಡಾ. ಎಸ್.ಸಿ. ಪಾಟೀಲ

ವಿಶ್ರಾಂತ ವಿಶೇಷಾಧಿಕಾರಿಗಳು

ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ, ಬೆಂಗಳೂರು

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು

ಕನ್ನಡ ಭವನ, [illegible] ಮಹಡಿ, [illegible], ಜೆ.ಸಿ. ರಸ್ತೆ, ಬೆಂಗಳೂರು

ಕರ್ನಾಟಕದ ಮಹಿಳಾ ಶಿಲ್ಪಕಲಾವಿದರು ಒಂದು ಅಧ್ಯಯನ

(ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ೨೦೧೭-೧೮ನೇ ಸಾಲಿನ ವಿಶೇಷ ಘಟಕ ಯೋಜನೆಯಡಿಯಲ್ಲಿ ಸಂಶೋಧನಾ ಫೆಲೋಷಿಪ್‌ಗಾಗಿ ಸಲ್ಲಿಸುತ್ತಿರುವ ಸಂಶೋಧನಾ ಪ್ರಬಂಧ)

ಸಂಶೋಧಕರು

ನಯನಾ ಬಾಬುರಾವ್

ಮಾರ್ಗದರ್ಶಕರು

ಪ್ರೊ.ಎಸ್.ಸಿ.ಪಾಟೀಲ್

ವಿಶ್ರಾಂತ ವಿಶೇಷಾಧಿಕಾರಿಗಳು

ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ, ಬೆಂಗಳೂರು

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಕನ್ನಡ ಭವನ ಮೇಲ್ಮನೆ, ಚಾಲುಕ್ಯ ವಿಭಾಗ

ಜೆ.ಸಿ.ರಸ್ತೆ, ಬೆಂಗಳೂರು

ಪ್ರೊ.ಎಸ್.ಸಿ.ಪಾಟೀಲ್
ವಿಶ್ರಾಂತ ವಿಶೇಷಾಧಿಕಾರಿಗಳು
ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ, ಬೆಂಗಳೂರು
#9 'ತಾಯಿನೆರಳು' ತುಂಗಭದ್ರ ಕಾಲೋನಿ, 2ನೇ ಕ್ರಾಸ್,
ಹಳಿಯಾಳ ರಸ್ತೆ, ಶ್ರೀನಗರ ವೃತ್ತ, ಧಾರವಾಡ-580001
ಮೊ: 9448563687

ದಿನಾಂಕ: 26/2/18

ಇವರಿಗೆ,
ಮಾನ್ಯ ರಿಜಿಸ್ಟ್ರಾರ್
ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು.

ಮಾನ್ಯರೆ,

ವಿಷಯ: ವಿಶೇಷ ಘಟಕ ಯೋಜನೆಯಡಿ 2017-18ನೇ ಸಾಲಿನ ಫೆಲೋಷಿಪ್ ಅಧ್ಯಯನವನ್ನು ಪೂರ್ಣಗೊಳಿಸಿದ ಕುರಿತು ದೃಢೀಕರಣ ಪತ್ರ.

****

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನನ್ನ ಮಾರ್ಗದರ್ಶನದಲ್ಲಿ **ನಯನಾ ಬಾಬುರಾವ್** ಅವರು ಕಿರು ಸಂಶೋಧನೆ ಯೋಜನೆ **'ಕರ್ನಾಟಕದ ಮಹಿಳಾ ಶಿಲ್ಪಕಲಾವಿದರು ಒಂದು ಅಧ್ಯಯನ'** ಎಂಬ ವಿಷಯದ ಕುರಿತು ಸಂಶೋಧನೆಯನ್ನು ಪೂರ್ಣಗೊಳಿಸಿದ್ದು, ಅವರು ಹಸ್ತಪ್ರತಿಯನ್ನು ಶಿಲ್ಪಕಲಾ ಅಕಾಡೆಮಿಗೆ ಸಲ್ಲಿಸುತ್ತಿದ್ದಾರೆ. ಅವರಿಗೆ ಫೆಲೋಷಿಪ್‌ವನ್ನು ನಿಯಮನುಸಾರ ನೀಡಲು ಈ ಮೂಲಕ ಶಿಫಾರಸ್ಸರು ಮಾಡುತ್ತಿದ್ದೇನೆ. ಪ್ರಕಟಣೆಯ ಹಂತದಲ್ಲಿ ಒಂದಿಷ್ಟು ಪರಿಷ್ಕರಣೆಯನ್ನು ಮಾಡಿ ಮುದ್ರಣ ಮಾಡಬಹುದಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
26/2/18
ಪ್ರೊ.ಎಸ್.ಸಿ.ಪಾಟೀಲ್
ವಿಶ್ರಾಂತ ವಿಶೇಷಾಧಿಕಾರಿಗಳು
ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ,
ಬೆಂಗಳೂರು

ಪರಿವಿಡಿ

ಅಧ್ಯಾಯ-ಒಂದು

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ನಮ್ಮ ದೇಶವು ವಿವಿಧ ಕಲೆ, ಸಂಪ್ರದಾಯ, ನಂಬಿಕೆ, ಆಚಾರ, ವಿಚಾರಗಳ ತವರೂರು. ಬ್ರಿಟಿಷರ ಆಡಳಿತಕ್ಕೊಳಪಟ್ಟ ಕಾರಣ ಅವರ ಪ್ರಭಾವವನ್ನು ಎಲ್ಲಾ ಕ್ಷೇತ್ರಗಳಲ್ಲಿಯೂ ಕಾಣಬಹುದು. ಅದರಂತೆ ಶಿಲ್ಪಕಲೆಯಲ್ಲಿಯೂ ಅವರ ಪ್ರಭಾವಕ್ಕೊಳಗಾಗಿ ಅವರ ಸಂಸ್ಕೃತಿಯು ಪ್ರಚಾರಕ್ಕೆ ಬಂದಿತು. ಭಾರತದಲ್ಲಿ ಶಿಲ್ಪಕಲೆ ಒಂದು ಸಂಪ್ರದಾಯಿಕ ತಳಹದಿಯ ಮೇಲೆ ದೇವರು ಹಾಗೂ ದೇವಾಲಯಗಳ ಮುಖಾಂತರ ಬೆಳೆದು ಬಂದಿದೆ. ಕಲಾ ಆರಾಧಕರಾದ ಬ್ರಿಟಿಷರು ತಮ್ಮ ಶೈಲಿಯ ಶಿಲ್ಪಿಗಳ ಕಲಾ ಕೃತಿಗಳು ಮುಂತಾದ ಹೊಸ ಚಿಂತನೆಯ ಕಡೆ ಗಮನ ಹರಿಸಿ ಹೊಸ ಅನ್ವೇಷಣೆಯೊಂದಿಗೆ ತಮ್ಮಲ್ಲಿರುವ ಅಭಿವ್ಯಕ್ತಿತನವನ್ನು ವ್ಯಕ್ತಪಡಿಸಲಾರಂಭಿಸಿದರು. ಇದು ಭಾರತದಾದ್ಯಂತ ಹರಡಿಕೊಂಡು ತಮ್ಮ ಅಸ್ತಿತ್ವವನ್ನು ಇಂದು ಉಳಿಸಿಕೊಂಡು ಬಂದಿದೆ.

ಸಮಾಜದಲ್ಲಿ ಮೊದಲಿಗೆ ಶಿಲ್ಪಕಲೆಯೆಂದರೆ ಪುರುಷರಿಗೆ ಮಾತ್ರ ಸೀಮಿತವೆಂಬಂತೆ ಹಾಗೂ ಕೆಲವೇ ಜಾತಿಯ ವರ್ಗದವರು ಮಾತ್ರ ಮಾಡುವರೆಂಬ ನಂಬಿಕೆ ಮತ್ತು ಅಪನಂಬಿಕೆ ರೂಢಿಯಲ್ಲಿತ್ತು. ಕುಂಬಾರನು ಗಡಿಗೆ ಮಾಡುವುದು, ಬಡಿಗ ಕಟ್ಟಿಗೆಯ ಕೆಲಸವನ್ನು

ಮಾಡುವುದು, ಅಕ್ಕಸಾಲಿಗ ಬಂಗಾರ ಮಾಡುವುದು, ಹೀಗೆ ಹಲವಾರು ಉದಾಹರಣೆಗಳನ್ನು ನೋಡಬಹುದು.

ಶಿಲ್ಪಕಲೆಯು ಯಾವುದೇ ಜಾತಿ, ವರ್ಗ, ವರ್ಣ, ಹಾಗೂ ಸ್ತ್ರೀ-ಪುರುಷರೆಂಬ ಸೀಮಿತವಿಲ್ಲದೆ ವಿಶ್ವವ್ಯಾಪಕವಾಗಿ, ಚಲನಶೀಲವಾಗಿ ಹಾಗೂ ಸೃಜನಶೀಲವಾಗಿ ಬೆಳೆದ ಕಲೆಯಾಗಿದೆ. ಹಾಗಾಗಿ ಇತ್ತೀಚಿನ ಕಾಲದಲ್ಲಿ ಪ್ರತಿಯೊಬ್ಬ ಶಿಲ್ಪ ಕಲಾವಿದನು ಪ್ರತಿಯೊಂದು ಮಾಧ್ಯಮದಲ್ಲಿ ಸ್ವತಂತ್ರವಾಗಿ ಕೃತಿಯನ್ನು ರಚಿಸುವ ಸ್ವಾತಂತ್ರ್ಯವನ್ನು ಹೊಂದಿರುತ್ತಾನೆ.

ಅದೇ ರೀತಿಯಾಗಿ ಪ್ರಾಚೀನ ಕಾಲದಿಂದಲೂ ಮಹಿಳೆಯು ತನ್ನ ಸಾಮರ್ಥ್ಯ, ಕರಕುಶಲತೆಯನ್ನು ಕಲೆಯ ಎಲ್ಲಾ ಪ್ರಕಾರಗಳಲ್ಲಿಯೂ ದುಡಿಸಿಕೊಂಡಿದ್ದಾಳೆ. ಇಂದು ಬಿತ್ತರಗೊಂಡ ಭಾರತದ ಎಲ್ಲ ಬಗೆಯ ಕಲೆಗಳಿಗೆ ಮೂಲತಃ ಮಹಿಳೆಯೇ ಅದಕ್ಕೆ ಆಧಾರ ಸ್ತಂಭ ಎಂದರೆ ತಪ್ಪಾಗಲಾರದು. ಉದಾಹರಣೆಗೆ ಜನಪದ ಕಲೆಗಳಾದ ರಂಗೋಲಿ, ಹಸೆ ಚಿತ್ತಾರ, ಕಸೂತಿ ಕಲೆ, ಅರಗು ಕಲೆ ಹಾಗೂ ಕಿನ್ನಾಳ ಕಲೆಯಂತಹ ಅನೇಕ ಪ್ರಕಾರಗಳಲ್ಲಿ ಮಹಿಳೆಯರ ಪಾತ್ರಗಳು ಪ್ರಮುಖ. ಮಹಿಳೆಯು ಇಷ್ಟಕ್ಕೇ ಸೀಮಿತವಾಗಿರದೆ, ಪುರುಷ ಪ್ರಧಾನ ಎಂದೆನಿಸಿಕೊಂಡ ಶಿಲ್ಪಕಲೆಯಲ್ಲಿಯೂ ತನ್ನ ಸಾಧನೆಯನ್ನು ಮಾಡುವಲ್ಲಿ ಯಶಸ್ವಿಯಾಗಿದ್ದಾಳೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಪ್ರಕಟಣೆಯ 'ಶಿಲ್ಪಕಲಾ ಪ್ರಪಂಚ' ಎಂಬ ಪುಸ್ತಕದಲ್ಲಿ ಸುಮಾ ವೆಂಕಟೇಶ್ ಅವರು ಅನುವಾದಿಸಿರುವ ಅನಿಸ್ ಫರೂಕಿರವರ 'ಭಾರತದ ಮಹಿಳಾ ಶಿಲ್ಪಿಗಳು' ಎಂಬ ಲೇಖನದಲ್ಲಿ ಉಲ್ಲೇಖಿಸಿರುವಂತೆ, 'ಕಲ್ಕತ್ತ ಗ್ರೂಪ್' ಸಂಸ್ಥೆಯ ಸ್ಥಾಪಿತ ಸದಸ್ಯರ ಪಟ್ಟಿಯಲ್ಲಿ ಕಮಲದಾಸ್ ಗುಪ್ತರ (ಜನಿಸಿದ 1915) ಹೆಸರು ಮೊಟ್ಟಮೊದಲಿಗೆ ಮಹಿಳಾ ಶಿಲ್ಪಿಯೆಂದು ಗುರುತಿಸಿದ್ದಾರೆ. 1915ರಲ್ಲಿ ಜನಿಸಿದ ಇವರು ಶಾಂತಿನಿಕೇತನದಲ್ಲಿ ಶಿಲ್ಪಕಲಾಭ್ಯಾಸವನ್ನು ಮಾಡಿದರು. ಪ್ರಯೋಗ ಮಾಡಿ ಆಕೃತಿಗಳು ನೈಜವಾಗಿ ಅಸ್ತಿತ್ವದಲ್ಲಿರುವಂತೆ ಕೆತ್ತನೆ ಮಾಡುವುದು ಮತ್ತು ಅದೇ ಸಮಯದಲ್ಲಿ ಆಕೃತಿಯನ್ನು ಹೊಳೆಯುವಂತೆ ಮತ್ತು ಅಲಂಕಾರಿಕವಾಗಿ ಮೂಡಿಸುವುದು ಅವರ ವಿಧಾನವಾಗಿತ್ತು. ಈ ರೀತಿಯಾಗಿ ಮೊಟ್ಟ ಮೊದಲ

ಬಾರಿಗೆ ಭಾರತದಲ್ಲಿ ಮಹಿಳಾ ಶಿಲ್ಪ ಕಲಾವಿದೆಯ ಶಿಲ್ಪಕೃತಿಗಳು ಅಭಿವ್ಯಕ್ತಿಗೊಂಡು ಕಲಾ ಕ್ಷೇತ್ರದಲ್ಲಿ ಮಹಿಳೆಯರು ಮಹತ್ವದ ಹೆಜ್ಜೆಯನ್ನಿಟ್ಟರು.

ನಂತರ ಕ್ರಮೇಣವಾಗಿ ಭಾರತದಲ್ಲಿ ಶಶಿ (ಜನಿಸಿದ 1947), ನೀರಜ ವರ್ಮ (ಜನಿಸಿದ 1962), ಸರೋಜಿ ಗೋಗಿಪಾಲ್ (ಜನಿಸಿದ 1945), ದಿ.ಪಿಲ್ಲು. ಆರ್.ಪೊಖ್ವಾನವಾಲ, ಸುಧಾ, ಮೋಹಿನಿ ತ್ರಿಖ, ಲಿತಕ ಕಟ್, ಶುಭಿಕಾಲಾಲ್, ಡಿಂಪಿ ಕೃಷ್ಣನ್, ಸೀಮ, ಸುಲಿಕ ತಿವಾರಿ, ಅಂಜಲಿ ಕೌರ್, ಲೀಲಾ ಮುಖರ್ಜಿ, ಮೃಣಾಲಿನಿ ಮುಖರ್ಜಿ, ಲಲಿತ ಹಾಗೂ ಎನ್. ಪುಷ್ಪಮಾಲಾ ಹೀಗೆ ಅನೇಕ ಮಹಿಳಾ ಶಿಲ್ಪಕಲಾವಿದರು ಹಲವಾರು ಮಾಧ್ಯಮಗಳಲ್ಲಿ ಹಾಗೂ ಹಲವಾರು ವಿಧಗಳಲ್ಲಿ ತಮ್ಮ ಶಿಲ್ಪಕೃತಿಗಳನ್ನು ಭಾರತದಾದ್ಯಂತ ಪರಿಚಯಿಸಿದರು.

ಭಾರತೀಯ ಮಹಿಳಾ ಆಧುನಿಕ ಶಿಲ್ಪ ಕಲಾವಿದರಲ್ಲಿ ಮೊದಲಿಗೆ ಹೊಸ ಪ್ರಯೋಗಗಳನ್ನು ಗುರುತಿಸಿಕೊಂಡ ಕಲಾವಿದೆ ದಿ.ಪಿಲ್ಲು.ಆರ್. ಪೊಖ್ವಾನವಾಲ ಹಾಗೂ ಮೃಣಾಲಿನಿ ಮುಖರ್ಜಿಯವರಾಗಿದ್ದಾರೆ. ನಂತರ ಆಧುನಿಕ ಕಲೆಯನ್ನು ಸೃಷ್ಟಿಸಿ ರಾಷ್ಟ್ರದ ಶಿಲ್ಪಕಲಾ ಕ್ಷೇತ್ರದಲ್ಲಿ ಶಿಲ್ಪ ಹಾಗೂ ಪ್ರತಿಷ್ಠಾಪನಾ ಕಲೆಯ ಮಾಧ್ಯಮವನ್ನು ಸೃಜನಶೀಲ ಅಭಿವ್ಯಕ್ತಿಯನ್ನಾಗಿಸಿದವರು ಗೋಗಿ ಸರೋಜ ಪಾಲ್, ಎನ್ ಪುಷ್ಪಮಾಲಾ, ಶೀಲಾಗೌಡ, ಅನಿತಾ ದುಬೆ, ಮೀರಾ ಮುಖರ್ಜಿ, ಭಾರತಿ ಖೇರ, ಫೀರೋಜ ಗುಜ್ರಾಲ್, ಗೀತಾಂಜಲಿ, ಭಾವನಾ ಕಕ್ಕರ್, ಪೂಜಾಸುಧ, ಅಪರಜಿತಾ ಜೈನ ಹೀಗೆ ಮಹಿಳಾ ಆಧುನಿಕ ಶಿಲ್ಪಕಲಾವಿದರು ಕಾರ್ಯ ಪ್ರವೃತ್ತರಾಗಿದ್ದಾರೆ.[1]

ಆದರೂ ಶಿಲ್ಪಕಲೆಯಲ್ಲಿ ತಾಂತ್ರಿಕತೆ ಮುಂದುವರೆದಂತೆ ವಸ್ತು ಸ್ಥಿತಿಗಳು ಸಮ್ಮಿಶ್ರವಾದವು ಮತ್ತು ರಚನಾತ್ಮಕ ಉದ್ದೇಶಗಳು ಬದಲಾದಂತೆ, ವಿಕೃತ ಸೌಂದರ್ಯದೆಡೆಗೆ ಒಲವು ಹೆಚ್ಚಾಯಿತು. ಬಹುಶಃ ಈ ಕಾರಣಗಳಿಂದ ಮಹಿಳಾ ಶಿಲ್ಪಿಗಳ ಕೊರತೆ ಉಂಟಾಯಿತು. ಈ ಕೊರತೆಯಲ್ಲಿಯೆ ಕರ್ನಾಟಕದಲ್ಲಿಯೂ ಕೂಡ ಮಹಿಳಾ ಶಿಲ್ಪಿಗಳ ಕಾರ್ಯ ಬೆಳಕಿಗೆ ಬಂದಿತು.

ಕರ್ನಾಟಕದಲ್ಲಿ ಸಾಂಪ್ರದಾಯಕ ಹಾಗೂ ಆಧುನಿಕ ಶಿಲ್ಪಕಲೆಯ ಎರಡೂ ಹಂತಗಳನ್ನು ಕಾಣಬಹುದು. ಕರ್ನಾಟದಲ್ಲಿ ಮಹಿಳಾ ಶಿಲ್ಪಕಲಾವಿದರು ಪ್ರಮಾಣದಲ್ಲಿ ಪುರುಷರಿಗಿಂತ ಕಡಿಮೆ ಸಂಖ್ಯೆಯಲ್ಲಿರುವದು ನಿಜ, ಆದರೆ ಪುರುಷರಷ್ಟೇ ಸರಿ ಸಮಾನವಾಗಿ ತಮ್ಮ ಕೌಶಲ್ಯವನ್ನು ಹಾಗೂ ಸೃಜನಾತ್ಮಕತೆಯನ್ನು ಶಿಲ್ಪಗಳಲ್ಲಿ ತೋರಿಸಿರುವುದು ಅಷ್ಟೇ ಸತ್ಯಾಂಶ.

ಕರ್ನಾಟಕದ ಪ್ರಮುಖ ಮಹಿಳಾ ಶಿಲ್ಪಕಲಾವಿದರು

1. ಸರೋಜಾದೇವಿ ಆಚಾರ್ಯ
2. ಕನಕಾಮೂರ್ತಿ
3. ಎನ್. ಪುಷ್ಪಮಾಲಾ
4. ಶೀಲಾಗೌಡ
5. ಗಾಯತ್ರಿ ಎ.ಶಿಲ್ಪಿ
6. ಸುಮಲತಾ ವಿ.ಮಲ್ಹಾರ್
7. ರಂಜನಿ ಶೆಟ್ಟಾರ್
8. ಡಾ.ಗೀತಾಂಜಲಿ ಆಚಾರ್
9. ಎಂ. ಶಾಂತಮಣಿ
10. ಶಕುಂತಲಾ ಬಡಿಗೇರ್

ಹೀಗೆ ಅನೇಕ ಮಹಿಳಾ ಕಲಾವಿದರು ಪ್ರಸ್ತುತ ಶಿಲ್ಪ ರಚನೆಯಲ್ಲಿ ತೊಡಗಿಸಿಕೊಂಡು ಅಂತರರಾಷ್ಟ್ರ, ರಾಷ್ಟ್ರ ಮತ್ತು ರಾಜ್ಯ ಮಟ್ಟದ ಅನೇಕ ಶಿಲ್ಪಕಲೆಯ ಶಿಬಿರ ಮತ್ತು ಪ್ರದರ್ಶನಗಳಲ್ಲಿ ಭಾಗವಹಿಸುವುದರೊಂದಿಗೆ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಈ ಮೇಲಿನ ಎಲ್ಲಾ ಕಾರಣಗಳಿಂದ ಕರ್ನಾಟಕ ಮಹಿಳಾ ಶಿಲ್ಪ ಕಲಾವಿದರನ್ನು ಹಾಗೂ ಅವರು ರಚಿಸಿದ ಶಿಲ್ಪಕಲಾಕೃತಿಗಳ ಕುರಿತು ಅಧ್ಯಯನ ಮಾಡುವುದು ಅವಶ್ಯವಿರುವ ಹಿನ್ನೆಲೆಯಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಸ್ವರೂಪ:

ಪ್ರಸ್ತುತ ಅಧ್ಯಯನವನ್ನು ಅನುಕೂಲತೆಗೆ ಅನುಸಾರವಾಗಿ ಏಳು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಂಡು ಆಯಾ ಅಧ್ಯಯನಕ್ಕನುಗುಣವಾಗಿ ಮಾಹಿತಿಯನ್ನು ಸಂಗ್ರಹಿಸಿಕೊಂಡು ಚರ್ಚಿಸುವ ಮತ್ತು ವಿಷಯದ ಕುರಿತಂತೆ ಅವರ ಸಂಕ್ಷಿಪ್ತ ರೂಪದ ವಿವರವನ್ನು ನೀಡಲು ಪ್ರಯತ್ನಿಸಲಾಗಿದೆ.

ಮೊದಲ ಅಧ್ಯಾಯದಲ್ಲಿ ಅಧ್ಯಾಯದ ಮೂಲ ಉದ್ದೇಶ ಹಾಗೂ ಸ್ವರೂಪ ಮತ್ತು ಅಧ್ಯಯನದ ವ್ಯಾಪ್ತಿಯ ಕುರಿತಾಗಿ ವಿವರಣೆಯನ್ನು ನೀಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕರ್ನಾಟಕದ ಶಿಲ್ಪಕಲಾವಿದೆಯರ ಐತಿಹಾಸಿಕ ಪರಂಪರೆಯ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡಲಾಗಿದೆ.

ಮೂರನೆಯ ಅಧ್ಯಾಯನವು ಪ್ರತ್ಯೇಕವಾಗಿ ಕರ್ನಾಟಕದ ಸಾಂಪ್ರದಾಯಕ ಶಿಲ್ಪಕಲಾವಿದರು ಹಾಗೂ ಅವರ ಶಿಲ್ಪಕೃತಿಗಳು ಮತ್ತು ಅವರ ಜೀವನದ ಸಮಗ್ರ ಮಾಹಿತಿಯನ್ನು ಒಳಗೊಂಡಿದೆ.

ನಾಲ್ಕನೆಯ ಅಧ್ಯಾಯನವು ಕರ್ನಾಟಕದ ಸಮಕಾಲಿನ ಮಹಿಳಾ ಕಲಾವಿದರ ವ್ಯಕ್ತಿ ಪರಿಚಯ ಹಾಗೂ ಅವರ ಶಿಲ್ಪ ಕಲಾಕೃತಿಗಳಲ್ಲಿನ ಸೌಂದರ್ಯಪ್ರಜ್ಞೆ ಮತ್ತು ಅವರ ಜೀವನವನ್ನು ಒಳಗೊಂಡಿರುವ ಅಧ್ಯಯನವಾಗಿದೆ.

ಐದನೆಯ ಅಧ್ಯಾಯನವು ಕರ್ನಾಟಕದ ಸಾಂಪ್ರದಾಯಕ ಹಾಗೂ ಸಮಕಾಲೀನ ಶಿಲ್ಪಕಲಾಕೃತಿಗಳ ತೌಲನಿಕ ಅಧ್ಯಯನವನ್ನು ಒಳಗೊಂಡಿದೆ.

ಆರನೆಯ ಅಧ್ಯಾಯನದಲ್ಲಿ ಕರ್ನಾಟಕ ಶಿಲ್ಪಕಲಾವಿದೆಯರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿಯ ಸಂಪೂರ್ಣ ಮಾಹಿತಿಯನ್ನು ನೀಡಲಾಗಿದೆ.

ಏಳನೆಯ ಅಧ್ಯಯನದಲ್ಲಿ ಪ್ರಸ್ತುತ ಸಂಶೋಧನ ಮಹಾಪ್ರಬಂಧದ ಏಳು ಅಧ್ಯಾಯಗಳಲ್ಲಿ ಚರ್ಚಿತವಾದ ಫಲಿತಾಂಶದ ಸಮೀಕ್ಷೆಯನ್ನು ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ವಿಶೇಷವಾಗಿ ಕರ್ನಾಟಕದ ರಾಜ್ಯವನ್ನು ವ್ಯಾಪ್ತಿಯನ್ನಾಗಿಸಿಕೊಂಡಿದೆ. ಕರ್ನಾಟಕದ ಎಲ್ಲಾ ಭಾಗಗಳ ಸಾಂಪ್ರದಾಯಕ ಹಾಗೂ ಸಮಕಾಲಿನ ಮಹಿಳಾ ಕಲಾವಿದರ ಪರಿಚಯ ಹಾಗೂ ಅವರ ಕಲಾಕೃತಿಗಳ ರಚನಾ ಪದ್ಧತಿ, ಶೈಲಿ, ಮಾಧ್ಯಮ ಹಾಗೂ ತಂತ್ರಗಾರಿಕೆಯ ಕುರಿತು ಪರಿಚಯಿಸುವ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯವನ್ನು ವಿಶೇಷವಾಗಿ ಅಧ್ಯಯನದ ಕೇಂದ್ರವನ್ನಾಗಿಸಿಕೊಳ್ಳಲಾಗಿದೆ.

ಅಧ್ಯಾಯ- ಎರಡು

ಕರ್ನಾಟಕದ ಶಿಲ್ಪಕಲಾವಿದರ ಐತಿಹಾಸಿಕ ಪರಂಪರೆ

ಈ ಭೂಮಿಯ ಮೇಲೆ ಕೋಟ್ಯಾಂತರ ಪ್ರಾಣಿ- ಪಕ್ಷಿಗಳು, ಗಿಡ ಮರಗಳು, ಮನುಷ್ಯರು ಮತ್ತು ಇತರ ಜೀವಿಗಳು ವಾಸವಾಗಿವೆ. ಆಕಾಶದಲ್ಲಿ ಸೂರ್ಯ-ಚಂದ್ರ ಅಲ್ಲದೆ ಎಣಿಕೆ ಇಲ್ಲದಷ್ಟು ನಕ್ಷತ್ರರಾಶಿ, ಇಡೀ ಬ್ರಹ್ಮಾಂಡವೇ ನಮ್ಮೆದುರು ತೆರೆದು ನಿಂತಿದೆ. ಭೂಮಿಯು ಸುಮಾರು 420 ಕೋಟಿ ವರ್ಷಗಳ ಹಿಂದೆ ಹುಟ್ಟಿಕೊಂಡಿತು. ಭೂಮಿಯಲ್ಲಿ ವಾಸಿಸುವ ಈ ಎಲ್ಲಾ ಜೀವಿಗಳು ಹಾಗೂ ಆಕಾಶವನ್ನು ತುಂಬಿರುವ ಈ ಎಲ್ಲಾ ಕಾಯಗಳು ಹೇಗೆ ಬಂದವು? ಎಂಬ ಪ್ರಶ್ನೆಯು ನಮ್ಮನ್ನು ಕಾಡುತ್ತದೆ.

ಈ ಸೃಷ್ಟಿ, ಈ ಬ್ರಹ್ಮಾಂಡ ಭಗವಂತನ ಕೃಪೆಯಿಂದ ಹುಟ್ಟಿಕೊಂಡಿತು ಎಂದು ಕೆಲವರು ಹೇಳಬಹುದು. ಕೆಲವರು ಅದರ ವೈಜ್ಞಾನಿಕ ಕಾರಣ ತಮಗಿನ್ನೂ ತಿಳಿಯದು, ಮುಂದೆ ತಿಳಿದಿತು. ಎನ್ನುವರು. ಜೀವವಿಜ್ಞಾನಿಗಳು 'ಅಮೀಬಾ' ಎನ್ನುವ ಅತ್ಯಂತ ಸರಳ ಜೀವಿಯು ಸುಮಾರು ಎಪ್ಪತ್ತು ಕೋಟಿ ವರ್ಷಗಳ ಹಿಂದೆ ಭೂಮಿಯ ಮೇಲೆ ಆವರಿಸಿತು. ಅದೇ ಜೀವಿ ಮುಂದೆ ವಿಕಾಸಗೊಂಡು ಸಕಲ ಜೀವಸಂಕುಲದ ಹುಟ್ಟಿಗೆ ಕಾರಣವಾಯಿತು ಎಂಬ ವಿವರಣೆಯನ್ನು ಅವರು ನೀಡುತ್ತಾರೆ.

ಭೂಮಿಯ ಮೇಲೆ ಮಾನವ ಯಾವಾಗ ವಾಸಿಸಲು ಪ್ರಾರಂಭಿಸಿದ ಎಂಬುದನ್ನು ಹೇಳುವುದು ತುಂಬಾ ಕಷ್ಟ. ಡಾರ್ವಿನನ್ ಪ್ರಕಾರ, ಮಾನವ ಮಂಗನಿಂದ ಕಾಲಾಂತರದಲ್ಲಿ ರೂಪಗೊಂಡನು ಎಂಬುದನ್ನು ಒಪ್ಪಿದರೂ ಯಾವಾಗ ಈ ರೂಪಾಂತರವಾಯಿತು ಎಂದು ಹೇಳುವುದು ಕಷ್ಟ.

ಪ್ರಾಚೀನ ಮಾನವ ಬಹು ಕಷ್ಟದ ಜೀವನ ನಡೆಸಿರಬೇಕೆಂಬುದು ಯಾರಿಗಾದರೂ ಹೊಳೆಯಬಹುದು. ತೀವ್ರ ಚಳಿಯನ್ನು, ಬಿಸಿಲನ್ನು ಅವನು ಹೇಗೆ ಎದುರಿಸಿದ ಎಂಬುದು ಊಹೆಗೆ ಬಿಟ್ಟ ವಿಚಾರ.

ಕಲ್ಲಿನ ಮೊನಚಾದ ಚೂರುಗಳನ್ನು ಆಯುಧಗಳಾಗಿ ಬಳಸುತ್ತಿರಬಹುದೆಂಬುದು ಊಹಿಸಲಾಗುತ್ತದೆ. ಇದಕ್ಕೆ ಪುರಾವೆಗಳು ದೊರೆತಿವೆ. ಅಂಥ ಆಯುಧಗಳು ಮಾನವ ಹಿಡಿಗೆ ಹೊಂದುವ ಗಾತ್ರದ್ದಾಗಿದೆ. ಇವು ಮಾನವನ ಅಸ್ಥಿ ಪಂಜರಗಳ ಪಳೆಯುಳಿಕೆಗಳ ಬಳಿ ದೊರೆತಿವೆ. ಈ ಶಿಲಾಯುಧಗಳನ್ನು ಎಸೆದು ಗಾಯಮಾಡಲು ಹಿಡಿದು ಇತರ ಉಪಕರಣಗಳನ್ನು ರೂಪಿಸಿಕೊಳ್ಳಲು ಬಳಸುತ್ತಿರುಬಹುದು. ಮರದಲ್ಲೋ, ಕಲ್ಲಿನಲ್ಲೋ, ಕೂತು ಕೊರೆಯಲು ಬಳಸಿರಬಹುದು. ಹೀಗೆ ಬಹು ಹಿಂದೆ ಶಿಲೆಯ ಆಯುಧಗಳನ್ನು ಬಳಸುತ್ತಿದ್ದ ಕಾಲವನ್ನು ಹಳೆಯ ಶಿಲಾಯುಗ ಎಂದು ಕರೆಯಲಾಗುತ್ತದೆ. ಬೆಂಕಿ ಮತ್ತು ಬಿಲ್ಲು ಬಾಣಗಳ ಬಳಕೆಯು ಆ ಯುಗದ ಅತಿಮುಖ್ಯ ಆವಿಷ್ಕಾರಗಳಾಗಿದ್ದಿರಬಹುದು.

ಆದಿ ಮಾನವನ ಮುನ್ನಡೆಯಲ್ಲಿ ಹೊಸದೊಂದು ಯುಗ ಆರಂಭವಾಯಿತು. ಇದನ್ನು ಹೊಸ ಶಿಲಾಯುಗವೆಂದು ಕರೆಯುವರು. ಹಳೆಯ ಶಿಲಾಯುಗದ ಕೊನೆಗೆ ಆರಂಭಗೊಂಡ ಕಾಲ. ಆಯುಧ ರೂಪಿಸುವಲ್ಲಿ ಮಹತ್ವವೆನಿಸುವ ಬದಲಾವಣೆಯಾಯಿತು. ಹರಿತವಾದ ಕಲ್ಲು, ಮೊನಚಾದ ಕಲ್ಲು, ಮುಂತಾದವನ್ನು ನೆಟ್ಟಗಿರುವ ಕೋಲಿನ ತುದಿಗೆ ಕಟ್ಟುವ ಕಲೆಯನ್ನು ಅವನು ಕಲಿತ. ಅದೇ ಮೊನಚಾದ ಈಟಿಗಳಾದವು, ಭರ್ಜಿಗಳಾದವು, ಕೊಡಲಿಗಳಾದವು. ಇವುಗಳ ಜೊತೆಗೆ ಮನೆ ಕೆಲಸಕ್ಕೆ ಬೇಕಾದ ಉಪಕರಣಗಳನ್ನು ತಯಾರಿಸಲು ಕಲಿತರು. ತಟ್ಟೆ, ಲೋಟ,

ಚಮಚಗಳಂತಹವನ್ನು ರೂಪಿಸಿಕೊಂಡ ಇವುಗಳನ್ನು ಕಲ್ಲಿನಿಂದ, ಚಿಪ್ಪಿನಿಂದ, ಮರದಿಂದ, ಮೂಳೆಗಳಿಂದ ರಚಿಸಲಾರಂಭಿಸಿದ. ಚರ್ಮದ ಚೂರುಗಳಿಂದ, ನಾರಿನಿಂದ ಕಟ್ಟುವ ಕಲೆಯನ್ನು ಕಲಿತ, ಹಾಗೂ ಗಂಟುಗಳ ರಚನೆಯನ್ನು ಕಲಿತರು.

ಲೋಹ ಯುಗವು ಮುಗಿದ ನಂತರ ಮಾನವನ ಕಲಾವಂತಿಕೆ ಇಂದಿಗೂ ಉಳಿಯುವಂತೆ ರಚಿಸಿದ್ದು, ವಿಸ್ಮಯಕಾರಿಯಾಗಿದೆ. ಗವಿಯ ಗೋಡೆಗಳ ಮೇಲೆ ಪ್ರಾಣಿಗಳ ಚಿತ್ರಗಳಿವೆ. ಅದು ಅವನ ಆಸಕ್ತಿಯನ್ನು ಸೂಚಿಸುತ್ತದೆ. ವನ್ಯ ಪ್ರಾಣಿಗಳಲ್ಲಿ ಅವನಿಗೆ ಆಸಕ್ತಿಯಿತ್ತು. ಅವನು ಬಣ್ಣಗಳನ್ನು ಬಳಸಿದ್ದೂ, ಆ ಬಣ್ಣಗಳು ಇಂದಿಗೂ ಉಳಿದಿರುವುದು ಆಶ್ಚರ್ಯವೇ. ಕಪ್ಪೆ ಚಿಪ್ಪುಗಳಲ್ಲಿ ಬಣ್ಣ ತಯಾರಿಸುತ್ತಿದ್ದನು. ಕೆಂಪು, ಹಳದಿ, ನೀಲಿ, ಕಿತ್ತಳೆ ಬಣ್ಣಗಳನ್ನು ಅವನು ಬಳಸಿದ. ಮೂಳೆಯ ಚೂರಿನ ಮೇಲೆ ಚಿತ್ರ ಬಿಡಿಸಿದ, ಬಣ್ಣ ಹಾಕಿದ, ತುಂಬಾ ಸರಳ ಚಿತ್ರಗಳಾದರೂ ಇವು ಆ ಕಾಲದ ಮಾನವನ ಕಲ್ಪನಾ ಶಕ್ತಿಯನ್ನು ಸೂಚಿಸುತ್ತವೆ. ಗುಹಾಂತರ ಚಿತ್ರಕಲೆಯಲ್ಲಿ ಅವನು ಬಹಳಷ್ಟು ಕಾಲ ಕಳೆದಿರಬೇಕು. ಅವನ ಕಲ್ಪನೆಗೆ ಮತ್ತು ಅವನು ನೋಡಿದ್ದನ್ನು ಚಿತ್ರಿಸುವ ಶಕ್ತಿಗೆ ಉದಾಹರಣೆಗಳು ಬೇಕಾದಷ್ಟಿದೆ. ಒಂದು ಚಿತ್ರದಲ್ಲಿ ಅಟ್ಟಿಸಿಕೊಂಡು ಬರುತ್ತಿರುವ ಮೃಗದ ಚಿತ್ರವಿದೆ. ಇನ್ನೊಂದರಲ್ಲಿ ಸಾಯುತ್ತಿರುವ ಮೃಗ, ಮತ್ತೊಂದರಲ್ಲಿ ಓಡಿಹೋಗುತ್ತಿರುವ ಮೃಗ, ಈ ಚಿತ್ರಗಳಲ್ಲಿ ಮೀನು, ಕಾಡೆಮ್ಮೆ, ಆನೆ, ಜಿಂಕೆ, ಕುದುರೆಗಳಿವೆ. ಈ ಗುಹಾಂತರ ಚಿತ್ರಗಳನ್ನು ಇಂದಿನ ನವ್ಯ ಚಿತ್ರಕಾರರಿಗೆ ಮಾರ್ಗದರ್ಶನವಾಗಿದೆ. ಚಿತ್ರ ಬಿಡಿಸುವುದರೊಂದಿಗೆ ಮಾನವನು ಮಡಿಕೆ ಮಾಡುವುದನ್ನು ಕಲಿತುಕೊಂಡ.

ಭಾರತೀಯ ಕಲೆಯ ಕುರಿತು ಹೇಳಬೇಕಾದರೆ ಹರಪ್ಪ ಹಾಗೂ ಸಿಂಧೂ ಬಯಲಿನ ನಾಗರೀಕತೆಯು ಭಾರತದ ಅತ್ಯಂತ ಪುರಾತನ ನಾಗರೀಕತೆಯಾಗಿದೆ ಎಂದು ಇತಿಹಾಸಕಾರರು ತಿಳಿಸಿದ್ದಾರೆ. ಅಕ್ಷರ ಭಾಷೆಗಿಂತಲೂ ಮೊದಲು ತನ್ನ ಅನಿಸಿಕೆಗಳನ್ನು ಇತರರೊಂದಿಗೆ ಸಂವಾದಿಸಲು ಮಾನವ ಬಳಸಿಕೊಂಡಿದ್ದು ಚಿತ್ರಕಲೆಯನ್ನು ಹೀಗೆ ಮಾನವನ ಉಗಮದೊಂದಿಗೆ ಬೆಳೆದುಬಂದ ಚಿತ್ರಕಲೆಯ ಇತಿಹಾಸವು ಗುರುತಿಸಲು ಸುಲಭವಲ್ಲದಷ್ಟು ಸಹಸ್ರಾರು ವರ್ಷಗಳ

ಹಿಂದಕ್ಕೆ ಹೋಗುತ್ತದೆ. ಈ ಮಾತುಗಳು ಭಾರತದ ಚಿತ್ರಕಲೆಗೂ ಅನ್ವಯಿಸುತ್ತದೆ. ಹೀಗೆ ಆದಿಮಾನವನ ಕಾಲದಿಂದಲೂ ನಮ್ಮಲ್ಲಿ ನಡೆದು ಬಂದ ಚಿತ್ರಕಲೆಯ ಬಗೆಗೆ ಸುಮಾರು ಕ್ರಿ.ಶ. 1883 ರಿಂದ ಇಂದಿನವರೆಗೂ ಸಂಶೋಧನೆಗಳು ನಡೆಯುತ್ತಿವೆ. ತನ್ನದೇ ಆದ ಒಂದು ನಿಶ್ಚಿತ ಪರಂಪರೆ, ಶೈಲಿ, ವೈಶಿಷ್ಟ್ಯಗಳನ್ನು ಪಡೆದುಕೊಳ್ಳುವ ಮೊದಲು ಈ ದೇಶದಲ್ಲಿ ಕಲೆಯು ವಿವಿಧ ನೆಲೆಗಳಲ್ಲಿ ಸಾಗಿತ್ತು. ಇವುಗಳಲ್ಲಿ ಅಜಂತಾ ಚಿತ್ರಕಲೆ ಹಾಗೂ ಶಿಲ್ಪಕಲೆಗಳು ಮೊದಲ ಸ್ಥಾನದಲ್ಲಿ ನಿಲ್ಲುತ್ತವೆ.

ಭಾರತೀಯ ಚಿತ್ರಕಲೆಯಲ್ಲಿ ಅಜಂತಾ ಚಿತ್ರಗಳು ಹಾಗೂ ಶಿಲ್ಪಗಳು ಅದ್ವಿತೀಯವಾಗಿವೆ. ಮುಂಬೈಯಿಂದ ಈಶಾನ್ಯಕ್ಕಿರುವ ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿ ದಟ್ಟಕಾಡಿನ ಮಧ್ಯ ಇರುವ ಈ ಗುಹಾಚಿತ್ರಗಳು ಹಾಗೂ ಶಿಲ್ಪಕಲಾಕೃತಿಗಳು ವಿಶ್ವದ ಗಮನ ಸೆಳೆದಿವೆ. ಪ್ರಾಚೀನ ಅದ್ಭುತವಾದದ್ದು, ನಮ್ಮ ದೇಶದ ಚಿತ್ರಕಲಾ ಪರಂಪರೆಯಲ್ಲಿ ಅತ್ಯಂತ ಗಮನಾರ್ಹವೂ, ಶಿಖರ ಪ್ರಾಯವೂ ಆದ ಈ ಕಲಾಕೃತಿಗಳು ಮಾನವನ ವಿಕಾಸದ ಪರಿಪಕ್ವ ಹಂತದಲ್ಲಿ ಮೂಡಿದವು ಎಂದರೆ ತಪ್ಪಾಗಲಿಕ್ಕಿಲ್ಲ.

ಕಲಾವಿದನ ಆಂತರ್ಯದ ಆನಂದಾನುಭವವನ್ನು ದೊರೆತ ಸಾಧನೆಗಳಿಂದ ರೂಪಿಸುವ ಮಾರ್ಗವೇ ಕಲಾಕೃತಿ ಎಂದಾಗಬಹುದು. ಹಿಂದಿನಿಂದ ಇಂತಹ ಕೃತಿ ನಿರ್ಮಾಣಕ್ಕೆ ಕಲಾವಿದನು ತನ್ನ ಸುತ್ತಮುತ್ತಲು ಅಪಾರವಾಗಿ ದೊರೆಯುವ ಪ್ರಕೃತಿ ಸಂಪತ್ತನ್ನು ಉಪಯೋಗಿಸಿಕೊಳ್ಳುತ್ತ ಬಂದಿರುವುದು ಸಹಜ. ಆದುದರಿಂದ ತಮಗೆ ಸುಲಭವಾಗಿ ದೊರೆಯುವ ಮಣ್ಣು, ಮರ, ಬಂಡೆ, ಕಲ್ಲು, ಲೋಹ, ಬಟ್ಟೆ, ಕಾಗದ, ಗೋಡೆ ಇವುಗಳನ್ನು ಪ್ರಧಾನ ಸಾಧನೆಗಳಾಗಿ ಉಪಯೋಗಿಸಿಕೊಂಡು ತಮ್ಮ ಕೌಶಲ್ಯವನ್ನು ತೋರಿ ಕಲಾಕೃತಿ ನಿರ್ಮಾಣ ಮಾಡುತ್ತ ಬಂದಿರುವರು. ಭಾರತ ಒಂದು ವಿಶಾಲ ಭೂಭಾಗ, ಅನೇಕ ರಾಜ್ಯಗಳಿಂದ ಕೂಡಿದ ಒಂದು ದೊಡ್ಡ ಪರ್ಯಾಯ ದ್ವೀಪವೆನ್ನಬಹುದು. ಪ್ರಾಚೀನ ಸಂಸ್ಕೃತಿಯು ಈ ನಾಡಿನಲ್ಲಿ ಅನೇಕ ಮತ–ಪಂಥಗಳು ಬಗೆ ಬಗೆಯ ಆಚಾರ ವಿಚಾರಗಳು, ವಿವಿಧ ಭಾಷೆಗಳು ಬೆಳೆಯುತ್ತಾ ಬಂದಿವೆ.

ಬೆಳೆದು ಬಾಳಿ ದಿಗಂತ ಕೀರ್ತಿಗಳಿಸಿವೆ. ಕ್ರಿ.ಶ. 6ನೆಯ ಶತಮಾನದಿಂದೀಚೆಗೆ ಭಿನ್ನ ಸಂಸ್ಕೃತಿಯ ಜನಾಂಗಗಳು ಭಾರತಕ್ಕೆ ಬಂದು ನೆಲೆಸಿ, ಅನೇಕ ವರ್ಷಗಳ ಕಾಲ ಆಡಳಿತ ನಡೆಸುತ್ತ ಬಂದರು. ಇದರಿಂದ ನಮ್ಮ ಜನಾಂಗದ ಮೇಲೆ ಪರಕೀಯ ಸಂಸ್ಕೃತಿ ಮತ್ತು ಕಲೆಯ ಪ್ರಭಾವಕ್ಕೊಳಗಾಗಿ ಕೆಲವು ಪರಿವರ್ತನೆಯಾದುದ್ದನ್ನು ಕಾಣುತ್ತೇವೆ. ಆದರೆ ಬದಲಾದ ಅಡಿಪಾಯದ ಮೇಲೆ ನಿಂತ ಸಂಸ್ಕೃತಿ ಜನಾಂಗಗಳು ಭಾರತಕ್ಕೆ ಬಂದು ನೆಲೆಸಿ, ಅನೇಕ ವರ್ಷಗಳ ಕಾಲ ಆಡಳಿತ ನಡೆಸುತ್ತ ಬಂದರು. ಆದರೆ ಬದಲಾದ ಅಡಿಪಾಯದ ಮೇಲೆ ನಿಂತ ಸಂಸ್ಕೃತಿ ಕಲೆ ತಾತ್ಕಾಲಿಕ ತೊಂದರೆಗೀಡಾದರೂ ಅಳಿಯಲಾರದು. ಪ್ರಗತಿ ಪಥ ಹಿಡಿದ ಜನಾಂಗ ಇತರರಲ್ಲಿನ ಗುಣಗ್ರಹಣ ಮಾಡಿ ತನ್ನ ವಿಕಾಸಕ್ಕೆ ಹಾದಿ ಮಾಡಿಕೊಳ್ಳುವುದು. ಅಂತೆಯೇ ಭಾರತೀಯ ಕಲೆ ಪಾಶ್ಚಿಮಾತ್ಯ ಪದ್ಧತಿಯಿಂದ ಮೊಘಲ್ ಸಂಪ್ರದಾಯದಿಂದ ಅನೇಕ ವಿಷಯಗಳನ್ನು ಗ್ರಹಿಸಿ ತನ್ನ ದಾರಿಯಲ್ಲಿ ಮುಂದುವರೆಯಲು ಪ್ರಯತ್ನಿಸುತ್ತಾ ಬಂದಿತು. ಈ ಬಗೆಯ ರಾಜಕೀಯ ಅಂದೋಲನದಿಂದ ಧಾರ್ಮಿಕ ಕ್ರಾಂತಿಯಿಂದ ಕಲೆಯ ಪ್ರಗತಿ ಕೆಲಕಾಲ ತಟಸ್ಥವಾದರೂ ಅದು ತನ್ನ ಕೌಶಲ್ಯವನ್ನು ಕಳೆದುಕೊಳ್ಳದೆ ಹಿಡಿದ ದಾರಿ ಬಿಡದೇ ಮುನ್ನಡೆಯಲು ಸತತ ಪ್ರಯತ್ನ ನಡೆಸಿತು. ಆಯಾ ನಾಡಿನ ಪ್ರಕೃತಿ ಸಂಪತ್ತು ಆಡಳಿತಗಾರರು, ಜನತೆಯ ಧಾರ್ಮಿಕ ಮನೋಭಾವ, ಅನುಗುಣವಾಗಿ ಬಂದ ಕಲಾ ಸಂಪತ್ತು ಇವುಗಳಿಗನುಗುಣವಾಗಿ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಅಲ್ಪ-ಸ್ವಲ್ಪ ವ್ಯತ್ಯಾಸ ಕಂಡು ಬರುವುದು ದಿಟ. ಕಾರ್ಯಕೌಶಲ್ಯದಲ್ಲಿ ಉಪಯೋಗಿಸುವ ಸಾಧನ ಸಂಪತ್ತುಗಳಲ್ಲಿ ಕಾರ್ಯ ಮಾಡುವ ವಿಧಾನದಲ್ಲಿ ವ್ಯತ್ಯಾಸವು ಕಂಡುಬರುವುದು. ಪರಕೀಯರ ಪ್ರಭಾವ ಉತ್ತರ ಹಿಂದೂಸ್ಥಾನದಲ್ಲಿ ಆದ ಪ್ರಮಾಣದಲ್ಲಿ ದಕ್ಷಿಣದಲ್ಲಿ ಆಗಲಿಲ್ಲ. ಆದುದರಿಂದ ಇಲ್ಲಿ ಕಲೆ ತಕ್ಕಮಟ್ಟಿಗೆ ಮುಂದುವರೆಯಿತು. ಗ್ರೀಕರ ಬಾಧೆಯಿಂದ ಪಾರಾಗಲು ಉತ್ತರ ಭಾರತದಿಂದ ಅನೇಕ ಕಲಾವಿದರು ದಕ್ಷಿಣಕ್ಕೆ ವಲಸೆ ಬಂದು ನೆಲೆಸಿದರು. ಆದ್ದರಿಂದ ಕನ್ನಡ ನಾಡಿನ ಕಲೆ, ಅದರಲ್ಲಿಯೂ ಧಾರ್ಮಿಕ ಮಂದಿರದ ಶಿಲ್ಪಕಲಾ ನೈಪುಣ್ಯತೆ ತೋರುವ ಕನ್ನಡಿಗರ ಸುಯೋಗದಿಂದ ಒಂದು ರಾಷ್ಟ್ರವಾಗಿ ತನ್ನ ಪ್ರಗತಿ ಸಾಧಿಸಿಕೊಳ್ಳುವ ಇಂತಹ ಸುವರ್ಣ ಸಮಯದಲ್ಲಿ ಕನ್ನಡ ನಾಡಿನ ವಿವಿಧ ಭಾಗಗಳಲ್ಲಿ ಕಲಾವೈಶಿಷ್ಟ್ಯವನ್ನರಿತು ಬೇರೆ ಬೇರೆ

ಸಂಪ್ರದಾಯದಲ್ಲಿ ದುಡಿದು ಕೀರ್ತಿ ಶ್ರೇಷ್ಠರಾದ ಕಲಾವಿದರ ವಿವರವನ್ನರಿಯುವುದು ಶ್ರೇಯಸ್ಕರವಾದುದಾಗಿದೆ.

ಕರ್ನಾಟಕ ಶಿಲ್ಪಕಲೆ ಬಗ್ಗೆ ಹೇಳಬೇಕಾದರೆ, ಸಾಂಪ್ರದಾಯಕ ಶಿಲ್ಪಕಲೆಯ ಇತಿಹಾಸ ಚಾಲುಕ್ಯ ಶಿಲ್ಪಕಲೆಯಾಗಿರಬಹುದು. ವಿಜಯನಗರದ ಶಿಲ್ಪ ಕಲೆಯಾಗಿರಬಹುದು ಅಥವಾ ಆಗಿನ ರಾಜರು ಸಂಗೀತಕ್ಕೆ ಮತ್ತು ಸಾಹಿತ್ಯಕ್ಕೆ ನೀಡಿದಷ್ಟು ಪ್ರೋತ್ಸಾಹವನ್ನು ಚಿತ್ರ ಹಾಗೂ ಶಿಲ್ಪಕಲೆಗೂ ನೀಡಿದ್ದರೆಂದು ಅಲ್ಲಿನ ಕಲಾಕೃತಿಗಳನ್ನು ನೋಡಿದರೆ ತಿಳಿಯುತ್ತದೆ. ವಿಜಯನಗರ ಕಾಲದ ಶಿಲ್ಪಕಲೆಯು ಕರ್ನಾಟಕ ಸಾಂಪ್ರದಾಯಕ ಶಿಲ್ಪಕಲೆಯ ಪ್ರಮುಖ ಘಟ್ಟ ಎಂದು ಹೇಳಬಹುದು. ಅಂತೆಯೇ ದಕ್ಷಿಣ ಭಾರತದ ಕಲಾ ಇತಿಹಾಸದಲ್ಲಿ ವಿಜಯನಗರ ಅರಸರು ಸಮರ್ಥ ಆಡಳಿತಗಾರರಾಗಿದ್ದು, ಲಲಿತಕಲೆಗಳ ಮಹಾನ್ ಪೋಷಕರಾಗಿದ್ದರು. ಈ ಅರಸರು ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪಕ್ಕೆ ಅಪಾರ ಪ್ರಾಮುಖ್ಯತೆ, ಪ್ರೋತ್ಸಾಹವನ್ನು ನೀಡಿದ್ದಾರೆ. ವಾಸ್ತುಶಿಲ್ಪ ಮತ್ತು ಚಿತ್ರಕಲೆಯಲ್ಲಿ 'ವಿಜಯನಗರ ಶೈಲಿ' ಎನ್ನುವ ವಿಶಿಷ್ಟ ಕಲಾ ಶೈಲಿಯನ್ನು ಬೆಳಕಿಗೆ ತಂದರು.

ಕರ್ನಾಟಕ ಸಂಸ್ಕೃತಿಯ ಪರಂಪರೆಯ ಇತಿಹಾಸದಲ್ಲಿ ಲಲಿತಕಲೆಗಳ ಪಾತ್ರ ತುಂಬ ಮೌಲಿಕವಾಗಿದ್ದು, ಈ ನಾಡನ್ನು ಕಟ್ಟುವಲ್ಲಿ ಅನೇಕ ಜನರ ಪರಿಶ್ರಮದ ಬೆವರಿದೆ. ಇದರಲ್ಲಿ ಕಲಾವಿದನ ಪಾತ್ರವನ್ನು ನಿರ್ಲಕ್ಷಿಸುವಂತಿಲ್ಲ. ಚಿತ್ರ, ಶಿಲ್ಪ ಕಲೆಗಳು ನಾಡಿನ ಅಸಂಖ್ಯೆ ಆಸ್ತಿಗಳಾಗಿವೆ. ಹೆಚ್ಚಿನ ಪ್ರಮಾಣದಲ್ಲಿ ಅಧ್ಯಯನಗಳು ಗಮನಾರ್ಹವಾಗಿ ನಡೆಯಬೇಕಾಗಿದೆ.

ಪ್ರಾರಂಭದಲ್ಲಿ ಅಲಂಕಾರಕ್ಕಾಗಿ ಅನುವುಗೊಳಿಸಿದ ಎಲೆ, ಹೂ, ಕಾಯಿ, ಹಣ್ಣು, ಮೃಗ, ಪಕ್ಷಿಗಳ ವಿನ್ಯಾಸಗಳನ್ನು ಅಭ್ಯಾಸ ಮಾಡಿಸಿ ನಂತರ ಬಗೆ ಬಗೆಯ ಹಸ್ತ ಮತ್ತು ಪಾದಗಳು, ಮುಖ ಮುದ್ರೆಗಳು, ದೇಹದ ಭಾವ ಭಂಗಿಗಳನ್ನು ಅಭ್ಯಾಸ ಮಾಡಿಸುತ್ತಿದ್ದರು. ಇದರೊಂದಿಗೆ ಶಿಲ್ಪಕ್ಕೆ ಸಂಬಂಧಿಸಿದ ನಿಯಮಗಳನ್ನು ತಿಳಿಸುವ ಶ್ಲೋಕಗಳನ್ನು ಕಲಿಸುತ್ತಿದ್ದರು. ಸಾಕಷ್ಟು ಪರಿಶ್ರಮ ದೊರೆತ ನಂತರ ಗಣಪತಿ, ಶಾರದೆ, ಬ್ರಹ್ಮ, ವಿಷ್ಣು, ಮಹೇಶ್ವರ, ಶಿವ–ಪಾರ್ವತಿ, ಸೀತಾ, ರಾಮ, ಲಕ್ಷ್ಮಣ, ಹನುಮಂತ, ಕೃಷ್ಣನ ಬಾಲಲೀಲೆಯ ಚಿತ್ರಗಳು ಈ ಬಗೆಯಲ್ಲಿ ಅನೇಕ

ದೇವತಾ ಮೂರ್ತಿಗಳನ್ನು ಲಕ್ಷಣಕ್ಕನುಗುಣವಾಗಿ ಸೂಕ್ತ ಪ್ರಮಾಣದಲ್ಲಿ ರೇಖಾರೂಪದಲ್ಲಿ ಅಭ್ಯಾಸ ಮಾಡುತ್ತಿದ್ದರು. ಕೃತಿ ಸಂಪತ್ತಿನಿಂದ ತುಂಬಿ ಬಗೆಬಗೆಯ ಕುಶಲಕಲೆಗಳಲ್ಲಿ ಸಂಪನ್ನರಾದ ಕನ್ನಡ ನಾಡಿನ ಶಿಲ್ಪಕಲೆಯಲ್ಲಿ ಬಹು ಜನ ಮುಂದುವರೆದಿದ್ದರೆನ್ನುವುದಕ್ಕೆ ನಮ್ಮ ನಾಡಿನಲ್ಲಿ ಅನೇಕ ಪ್ರಾಚೀನ ನಿದರ್ಶನಗಳು ದೊರಕುತ್ತವೆ.

ಕಲೆಯು ಮನುಷ್ಯನ ಸೌಂದರ್ಯಾನುಭವದ ಪ್ರತಿಬಿಂಬ, ಕಲೆಗಾರನು ಕಲೆಯೇ ತನ್ನ ಆರಾಧ್ಯ ದೈವ, ಕಲೆಯಿಂದಲೇ ತನ್ನ ಜನ್ಮ ಸಾರ್ಥಕ, ಕಲೆಯಿಂದಲೆ ಮೋಕ್ಷ ಎಂದರಿತು ಪುರಾಣ ಇತಿಹಾಸಗಳಿಗೆ ಸಂಬಂಧಿಸಿದ ದೇವತಾ ಮೂರ್ತಿಗಳನ್ನು, ಯಕ್ಷ ಕಿನ್ನರನ್ನು, ಬಗೆ ಬಗೆಯ ದೈವಿಕ ಲೀಲೆಗಳಿಗೆ ಸಂಬಂಧಪಟ್ಟ ಕೃತಿಗಳನ್ನು ರಚಿಸುವುದರಲ್ಲಿ ನಿರತನಾಗಿದ್ದನು. ಈ ದೈವಿ ಕತೆಗಳಿಗೆ ಮೂರ್ತರೂಪವನ್ನು ಕೊಡುವಲ್ಲಿ ಶಿಲ್ಪಕಲೆ ಮಹತ್ವದ ಧರ್ಮಪ್ರಚಾರ ಮಾಧ್ಯಮವಾಗಿ ರೂಪಗೊಂಡಿತು. ಈ ಮಾದ್ಯಮದ ಬಗೆಗಿನ ಜ್ಞಾನ ಕೇವಲ ಕಲಾವಿದನಿಗಷ್ಟೇ ಅಲ್ಲದೆ ಸಾಮಾನ್ಯನಿಗೂ ಸಹ ಅದರ ಅಸ್ವಾದನೆ ಬಹು ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಶಿಲ್ಪಕಲೆಯ ಅಧ್ಯಯನ ಮಹತ್ವವಾಗುತ್ತದೆ.

ಕರ್ನಾಟಕದ ಶಿಲ್ಪಕಲೆ ಸ್ಥಳೀಯ ಗಡಿಗಳನ್ನು ಮೀರಿ ಭಾರತೀಯ ಶಿಲ್ಪಕಲೆಯ ಸಂಪ್ರದಾಯ ಸೊಗಸಿನ ಜೊತೆ ಜೊತೆಗೆ ಬೆಳೆದು ಉಳಿದು ಹೊಸ ಆಯಾಮಗಳನ್ನು ಕಾಲಕಾಲಕ್ಕೆ ಪಡೆದುಕೊಳ್ಳುತ್ತದೆ. 'ಸಂಪ್ರದಾಯ' ಶಿಲ್ಪಕಲೆಯೆಂದರೆ ನಮ್ಮ ಇಂದಿನ ಸಮಕಾಲೀನ ಶಿಲ್ಪಕಲೆಗೆ ಬೇರುಗಳು ಇದ್ದಂತೆ.

ನಮ್ಮ ಕರ್ನಾಟಕದಲ್ಲಿ ಇಡೀ ರಾಷ್ಟ್ರವೇ ಅಚ್ಚರಿ ಪಡುವಂತಹ 8–10 ಅಡಿಗಳ ಎತ್ತರದ ಇತಿಹಾಸ ಪೂರ್ವ ಮಾನವ ರೂಪಗಳ ಶಿಲ್ಪಗಳಿವೆ. ರಾಯಚೂರು ಜಿಲ್ಲೆಯ ಕುಮತಿಯಲ್ಲಿರುವ ಗ್ರಾನೈಟ್ ಶಿಲ್ಪಗಳು ಪೂರ್ಣ ಪ್ರಮಾಣದ ಆದರೆ ಚಪ್ಪಟೆ ಕಲ್ಲಿನ ನಿರ್ವಹಣೆ ಹೊಂದಿದೆ. ಈ ರೀತಿಯ ಅನೇಕ ವಿಶಿಷ್ಟ ಶಿಲ್ಪಗಳನ್ನು ಕರ್ನಾಟಕದಲ್ಲಿ ನೋಡಬಹುದು. ಚಾಲುಕ್ಯ, ಹೊಯ್ಸಳ, ವಿಜಯನಗರದ ಪರಂಪರೆಯು ಶಿಲ್ಪಕಲೆಯನ್ನು ಕಾಣಬಹುದು. ಇವೆಲ್ಲವುಗಳ ನಡುವೆ ಜಾನಪದ

ಶಿಲ್ಪ ಸಂಪತ್ತು ಅಸಾಮಾನ್ಯ ರೀತಿಯ ಪ್ರಭಾವವನ್ನು ಬೀರಿದೆ. ಕರ್ನಾಟಕದ ಪ್ರತಿಯೊಂದು ಹಳ್ಳಿಯು ತನ್ನದೆ ಆದ ಜಾನಪದ ಶೈಲಿಯ ಮುಖಾಂತರ ಶಿಲ್ಪಗಳನ್ನು ಅಭಿವ್ಯಕ್ತಿಸುತ್ತವೆ. ಕಲಬುರಗಿಯ ಸುತ್ತಮುತ್ತಲಿನ ಹಲವು ಹಳ್ಳಿಗಳು ಈ ಮಾಹಿತಿಗೆ ನಿದರ್ಶನವಾಗಿವೆ. ಅಲ್ಲಿನ ಹಾಗೂ ಹಲವು ಜಿಲ್ಲೆಗಳಲ್ಲಿನ ಸ್ಥಳಿಯ ಸೊಗಡಿನ ವಾಸ್ತುಶಿಲ್ಪ, ಗೃಹ ಅಲಂಕಾರ ಶಿಲ್ಪ ಸಂಸ್ಕೃತಿ ಬೆರಗು ಮೂಡಿಸುವಂತಿದೆ. ದಕ್ಷಿಣ ಕನ್ನಡದ ಮೆಕ್ಕೆಕಟ್ಟು, ಗಡಿಮಾರಿ ಶಿಲ್ಪಗಳು, ಕಲಬುರಗಿ, ಬೆಳಗಾಂವ ಸುತ್ತಮುತ್ತಲಿನ ಹಲವು ರೀತಿಯ ಸಂಪ್ರದಾಯ ಶಿಲ್ಪಗಳು ರಾಯಚೂರಿನ ಕಿನ್ನಾಳದ ಗೊಂಬೆಗಳು, ಮೈಸೂರಿನ ಚನ್ನಪಟ್ಟಣದ ವಿಶಿಷ್ಟ ಗೊಂಬೆಗಳು ಇಂದು ಜಾಗತೀಕರಣದ ಹಿನ್ನೆಲೆಯಲ್ಲಿ ಸ್ಥಳಿಯ ಕಲೆಗಳು ಅಚ್ಚರಿಯ ಕಾರಣಗಳಿಗಾಗಿ ಬಹುದೊಡ್ಡ ರೀತಿಯಲ್ಲಿ ದೇಶ ವಿದೇಶಗಳಲ್ಲಿ ಹೆಸರಾಗಿವೆ.

ಸಾಂಪ್ರದಾಯಕ ಶಿಲ್ಪಕಲಾವಿದರು ಪ್ರಮುಖವಾಗಿ ಕಲ್ಲು, ಮರ ಮತ್ತು ಲೋಹಗಳಲ್ಲಿ ಶಿಲ್ಪಗಳನ್ನು ನಿರ್ಮಿಸುತ್ತಾರೆ. ಪ್ರಾಚೀನ ಕಾಲದಿಂದಲೂ ಪ್ರತ್ಯೇಕವಾಗಿ ಸಂಬಂಧಿತ ಮನೆತನದ ವರ್ಗದವರು ಸಾಂಪ್ರದಾಯಕ ಶಿಲ್ಪಗಳನ್ನು ಮಾಡುವುದು ರೂಢಿಯಲ್ಲಿದೆ. ಆದರೆ ಶಿಲ್ಪಕಲೆಯು ಯಾವುದೇ ಜಾತಿ, ವರ್ಗ, ಹಾಗೂ ಸ್ತ್ರೀ–ಪುರುಷರೆಂಬ ಸೀಮಿತವಿಲ್ಲದೆ ವಿಶ್ವವ್ಯಾಪಕವಾಗಿ ಬೆಳೆಯುವ ಕಲೆಯಾಗಿದೆ. ಹಾಗಾಗಿ ಇತ್ತೀಚಿನ ಕಾಲದಲ್ಲಿ ಪ್ರತಿಯೊಬ್ಬ ಕಲಾವಿದನು ಪ್ರತಿಯೊಂದು ಮಾಧ್ಯಮದಲ್ಲಿ ಸ್ವತಂತ್ರವಾಗಿ ಕೃತಿಯನ್ನು ರಚಿಸುವ ಸ್ವಾತಂತ್ರ್ಯವನ್ನು ಹೊಂದಿರುತ್ತಾನೆ.

ಭಾರತದಲ್ಲಿ ಕ್ರಮೇಣವಾಗಿ ಸಾಂಪ್ರದಾಯದ ಬೇರುಗಳೊಂದಿಗೆ ಆಧುನಿಕ ಕಲೆಯು ಬೆಳೆದಂತೆ, ಕರ್ನಾಟಕದಲ್ಲಿಯು ಅದರ ಪರಿಣಾಮವಾಗ ತೊಡಗಿತು. ಕರ್ನಾಟಕದ ಕಲಾವಿದರು ಕೂಡ ಆಧುನಿಕ ಶಿಲ್ಪಗಳನ್ನು ಮಾಡತೊಡಗಿದರು. ರಾಜ್ಯದ ಆಧುನಿಕ ಶಿಲ್ಪಕಲೆ ಬೆಳೆದು ಬಂದ ದಾರಿಯನ್ನು ಗಮನಿಸಿದಾಗ ಪ್ರಾರಂಭದ ದಿನಗಳಲ್ಲಿ ಅಂತಹ ಆಶಾದಾಯಕವಾದ ಬೆಳವಣಿಗೆ ಕಂಡು ಬರುವುದಿಲ್ಲ. 'ಅಕಾಡೆಮಿಕ್ ಶೈಲಿ'[1]ಯಿಂದ ಕಲಾಶಾಲೆಯಲ್ಲಿ ಕಲಿತು ಬಂದವರು ಮಾತ್ರ

ಭಾವ ಶಿಲ್ಪ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದರು. ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯಲ್ಲಿ ಸಹ ಅಕಾಡೆಮಿಕ್ ಶೈಲಿಯ ಶಿಕ್ಷಣ ನೀಡಲಾಗುತ್ತಿತ್ತು. ವೆಂಕಟಪ್ಪನವರು ಸಹ ಕಲ್ಕತ್ತದಲ್ಲಿ ಶಿಲ್ಪಕಲೆಯನ್ನು ಕಲಿತು ಪ್ಲಾಸ್ಟರ್ ಆಫ್ ಪ್ಯಾರೀಸ್ ಮಾಧ್ಯಮದಲ್ಲಿ ಅನೇಕ ಉಬ್ಬು ಶಿಲ್ಪಗಳನ್ನು ರಚಿಸಿರುವರು. ಮೈಸೂರಿನಲ್ಲಿ ರೂಪಶಿಲ್ಪಿ ಬಸವಯ್ಯರವರು ಭಾವಶಿಲ್ಪ ಹಾಗೂ ಪೂರ್ಣ ಪ್ರಮಾಣದ ಪ್ರತಿಮೆಗಳನ್ನು ರಚಿಸುವುದಲ್ಲಿ ಪರಿಣಿತಿ ಪಡೆದಿದ್ದರು. ಬಹಳ ಅಪರೂಪದ ವ್ಯಕ್ತಿಯಾಗಿದ್ದ ಆರ್. ಎಸ್.ನಾಯ್ಡು ಅವರು ಸ್ವಪ್ರೇರಣೆಯಿಂದ ಶಿಲ್ಪ ಕಲಿತು ಅನೇಕ ಪ್ರಮುಖರ ಭಾವ ಶಿಲ್ಪಗಳನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ರಚಿಸಿದ್ದಾರೆ.

ಕರ್ನಾಟಕದ ಶಿಲ್ಪಕಲೆ ಭಾರತೀಯ ಶಿಲ್ಪಕಲೆಯ ಸಾಂಪ್ರದಾಯಕ ಸೊಗಸಿನ ಜೊತೆ ಜೊತೆಗೆ ಬೆಳೆದು ಉಳಿದು ಬಂದಿರುವಂತೆ ತನ್ನದೇ ಆದ ಕೊಡುಗೆಯನ್ನು ಭಾರತೀಯ ಶಿಲ್ಪಕಲೆಗೆ ನೀಡಿದೆ. ಚಾಲುಕ್ಯ ವಿಜಯನಗರದರಸರ ಶಿಲ್ಪಕಲೆಯ ಬೆಳವಣಿಗೆಗಳ ನಡುವೆ ಹಲವು ಸುಂದರ ಪುಟಗಳಿವೆಯಾದರೂ, ವಿಜಯನಗರದ ಶಿಲ್ಪಕಲೆ ಹಿಂದಿನ ಕೊಡುಗೆಗಳಿಂದ ಪಡೆದುಕೊಂಡ ನೀಡಿದ ಫಲ ಮುಂದಿನ ಶಿಲ್ಪಕಲೆಯ ಬೆಳವಣಿಗೆಗೆ ಸ್ಫೂರ್ತಿ ನೀಡಿದ್ದು ಸಹಜ. ಅಂದಿನ ಶಿಲ್ಪಿಗಳು ಗ್ರಾನೈಟ್ ಶಿಲೆಯನ್ನು ದುಡಿಸಿಕೊಂಡ ಧೀಮಂತತೆ, ಸರಳ ಸುಂದರತೆ ಗಮನಿಸುವಂಥದ್ದು, ಆನಂತರದ ನಮ್ಮ ಸಂಪ್ರದಾಯ ಶಿಲ್ಪಕಲೆ ನಿಂತ ನೀರಾದಂಥ ಸಂದರ್ಭ.

ಮಧ್ಯಯುಗದಲ್ಲಿ ವಿನಾಶದ ಅವಗಡಕ್ಕೆ ಸಿಲುಕಿಯೂ ಉಳಿದುಕೊಂಡ ನಮ್ಮ ಶಿಲ್ಪಕಲ್ಪನೆಗಳು ಅದೇ ರಿತಿಯಲ್ಲಿ ಉಳಿದವು. ಮೊಗಲ್, ಬ್ರಿಟಿಷರ ಆಡಳಿತಾದವಧಿಯಲ್ಲಿ ನಮ್ಮ ಸಂಪ್ರದಾಯ ಶಿಲ್ಪಿಗಳು ಅಷ್ಟೇನೂ ಪ್ರೋತ್ಸಾಹಕರ ವಾತಾವರಣದಲ್ಲಿರಲಿಲ್ಲ. ಬ್ರಿಟಿಷರ ಅಂತಿಮ ದಿನಗಳಲ್ಲಿ ಅಕಾಡೆಮಿಕ್ ಆದ ಶಿಲ್ಪ ಸೃಷ್ಟಿಯ ಮಾನವಾಕಾರಗಳ ಅಧ್ಯಯನದ ಶೈಲಿ ಅವರು ಪ್ರಾರಂಭಿಸಿದ ಕಲಾ ಶಾಲೆಗಳಲ್ಲಿ ಕಲಿಸಲ್ಪಟ್ಟಿತಾದರೂ ನಮ್ಮವರಿಗೆ, ನಮ್ಮ ರಾಷ್ಟ್ರಕಂಡ ಸ್ವಾತಂತ್ರ್ಯದ ಬೆಳಕಲ್ಲಷ್ಟೇ ಆಧುನಿಕ ಅಥವಾ ನವ್ಯಕಲೆ ಎಂಬ ಪದಗಳನ್ನು ಪ್ರಸ್ತಾಪಿಸುವಾಗ ನಮ್ಮಲ್ಲಿ ಪಶ್ಚಿಮದ ಕಲೆಯ ಅನುಕರಣೆ ದಟ್ಟವಾಗಿ ಕಾಡುತ್ತದೆ; ಸಹಜವೂ ಕೂಡ. ಆಧುನಿಕ ಎಂಬ ಪದ 19ನೇಯ

ಶತಮಾನದ ಅಂತಿಮ ವರ್ಷಗಳ ಚಿತ್ರ, ಮತ್ತಿತರ ಕಲೆಗಳಲ್ಲಿ ಬಳಸಲ್ಪಡಲಾರಂಭಗೊಂಡದ್ದು ಇಡೀ 20ನೇಯ ಶತಮಾನದ ಸೃಷ್ಟಿಗೆ ಅನಿವಾರ್ಯವಾದ ಪ್ರಮುಖ ಶೀರ್ಷಿಕೆಯಾಗಿ ದುಡಿಸಿಕೊಳ್ಳಲ್ಪಟ್ಟಿದೆ. ಆಧುನಿಕ ಎಂಬ ಪದದ ಅರ್ಥ ಈಗಿನ, ಇತ್ತೀಚಿನ, ನವೀನ ಎಂದಿದೆಯಾದರೂ ಈ ಪದವನ್ನು ಕಲೆಯಲ್ಲಿ, ಈಗಾಗಲೇ ಒಪ್ಪಿಕೊಂಡ ಸಂಪ್ರದಾಯಗಳನ್ನು ಧಿಕ್ಕರಿಸಿದ ಒಂದು ಶೈಲಿಯನ್ನು ಗುರುತಿಸಲು ಮತ್ತು ಹೊಸಕಾಲದ ಸಂದರ್ಭ ಮತ್ತು ಸಂವೇದನೆಗಳಿಗೆ ಸೂಕ್ತವಾದ ಆಕಾರ, ಕಲ್ಪನೆಗಳ ಸೃಷ್ಟಿಗಾಗಿ ಅನ್ವೇಷಿಸುವ ಸೃಜನಶೀಲ ಮನೋಭಾವದ ಪ್ರತಿಭೆಯನ್ನು ಉದ್ದೇಶಿಸಿ ಆಧುನಿಕ ಎಂಬ ಪದವನ್ನು ದುಡಿಸಿಕೊಳ್ಳುತ್ತಿದ್ದೇವೆ. ಇಡೀ ಕಲಾ ಇತಿಹಾಸ, ವಿಶ್ವವನ್ನು ಮಾನವರು ನೋಡುತ್ತ ಬಂದಿರುವ ವಿವಿಧ ವಿಧಾನಗಳ, ದೃಷ್ಟಿಗೋಚರ ಗ್ರಹಿಕೆಗಳ, ರೀತಿಯ ಇತಿಹಾಸವೇ ಆಗಿರುವುದರಿಂದ, ಪ್ರತಿ ಹಂತದ ಬೆಳವಣಿಗೆಯಲ್ಲೂ ಹೊಸತನ ಕಾಣಿಸಿರಲೇಬೇಕು. ಪಶ್ಚಿಮದಲ್ಲಿ ಶಿಲ್ಪಿಗಳಾದ ಆಗಸ್ಟ್ ರೋಡಿನ, ಮೆಡಾರ್ಮೊ ರೊಸ್ಸು ಮತ್ತಿತರ 19ನೇಯ ಶತಮಾನದ ಮಾಸ್ಟರ್ ಶಿಲ್ಪಿಗಳು ಆವರೆಗೆ ಚಲಾವಣೆಯಲ್ಲಿದ್ದ ಅಕಾಡೆಮಿಕ್ ಇಲ್ಯೂಸನಿಸಂ ಅನ್ನು ತಿರಸ್ಕರಿಸಿದ್ದಲ್ಲಿ ಆಧುನಿಕತೆಯ ಆರಂಭವನ್ನು ಕಂಡುಕೊಳ್ಳಬಹುದು. ನಾಟ್ ಟೂ ರೆಫ್ಲೆಕ್ಟ್ ದ ವಿಜಿಬಲ್ ಬಟ್ ಟು ಮೇಕ್ ವಿಸಿಬಲ್ ಎಂಬಂಥ ಸೃಷ್ಟಿಗಳಿಗೆ ಕಾರಣವಾದ ಕಲಾವಿದರ ಗ್ರಹಿಕೆ ಮತ್ತು ಅಭಿವ್ಯಕ್ತಿಗಳನ್ನು ಆಧುನಿಕ ಎನ್ನಬಹುದು. ಆದರೂ ಶಿಲ್ಪಕಲೆಯಲ್ಲಿನ ಈ ಹೊಸ ಬೆಳವಣಿಗೆಗೆ ಚಿತ್ರಕಲೆಯಲ್ಲಿ ಆ ಹೊತ್ತಿಗೆ ಸಾಧ್ಯವಾಗಿದ್ದ ಅಬಸ್ಟ್ರಾಕ್ಟ್‌ನಿಸಂ, ಪ್ರೈಮಿಟಿವಿಸಂ ಮತ್ತು ಕ್ಯೂಬಿಸಂ ಗಳ ಪ್ರಭಾವ ಕಾರಣವಾಯಿತೆನ್ನುವುದೂ ಅಷ್ಟೇ ಮುಖ್ಯ; ಆಧುನಿಕ ಚಿತ್ರಕಲಾವಿದರು ಎದುರಿಸಿದ ವಿವಾದಗಳು, ವೈರುಧ್ಯಗಳು ಶಿಲ್ಪಕಲೆಯಲ್ಲೂ ಕಾಣಿಸಿಕೊಂಡವು. ಪಶ್ಚಿಮದ ಕಲೆಯ ಸಂಪರ್ಕ ಬಂದ ನಂತರವೇ ನಮ್ಮಲ್ಲಿ ಹೊಸಗಾಳಿ ಬೀಸಲಾರಂಭಸಿತು.

ನಮ್ಮ ರಾಜ್ಯದ ಆಧುನಿಕ ಶಿಲ್ಪಕಲೆಯ ಆರಂಭದ ದಿನಗಳು ಕುತೂಹಲಕಾರಿಯಾಗಿಲ್ಲ. ಪಶ್ಚಿಮದಂತೆ ನಮ್ಮ ಆಧುನಿಕ ಕಲೆ ಆ ಹಿಂದಿನ ಸಂಪ್ರದಾಯಕ್ಕೆ ತಿರುಗೇಟು ನೀಡಲು ಹುಟ್ಟಿಕೊಂಡದ್ದಲ್ಲ. ಹೊಸ ಅನುಭವಗಳ ಅಭಿವ್ಯಕ್ತಿಗಾಗಿ, ಬ್ರಿಟಿಷರ ವಿಕ್ಟೋರಿಯನ್ ಪ್ರಭಾವದ

ಅಕಾಡೆಮಿಕ್ ಶೈಲಿಯನ್ನು ಕಾಲಕಾಲಕ್ಕೆ ಹಲವು ಬದಲಾವಣೆಗಳ ಮೆರಗು ನೀಡಿ ನಮ್ಮ ಮೂಲ ನೆಲೆಯ ಸತ್ವಗಳನ್ನು ಸಂಯೋಜಿಸಿ ನಮಗೆ ಬೇಕಾದಂತೆ ಕಲ್ಪಿಸಿಕೊಂಡ ಶಿಲ್ಪಕಲೆ. ಈ ನಡುವೆ ನಮ್ಮಲ್ಲಿ ಸಾಂಪ್ರದಾಯಕವಾದ ಶಿಲ್ಪಗಳು ಸೃಷ್ಟಿಯಾಗುತ್ತಲೇ ಇವೆ. ಆದರೂ ಈ ಹಿಂದಿನ ನಮ್ಮ ಸಂಪ್ರದಾಯವನ್ನು ಅನುಸರಿಸಿದ ಕಲ್ಪನೆಗಳ ಮೂಲದಿಂದ ತಂದುಕೊಂಡ ಕ್ಲೀಷೆಯಾದ ವಸ್ತು, ಪುರಾಣಗಳ ಪಾತ್ರಗಳನ್ನು ಶಿಲ್ಪಿಸದೆ ಹೊಸ ಕಲ್ಪನೆಗಳನ್ನು ರೂಪಿಸುವ ಆಶಯ ಚಿಗುರೊಡೆಯಿತು. ಅನಂತರದ ಹೊಸ ಸಂದರ್ಭ ಹೊಸ ಸಂವೇದನೆಗಳ ಮುಖಾಮುಖಿಯ ಅಭಿವ್ಯಕ್ತಿಗೆ ಹಲವು ಹೊಸ ಮಜಲುಗಳನ್ನು ನಮ್ಮ ಶಿಲ್ಪಗಳು ಕಂಡುಕೊಂಡದ್ದಂತೂ ಆಧುನಿಕತೆಯ ನಿಜವಾದ ಸೊಗಡನ್ನು ಅರಗಿಸಿಕೊಂಡಂತಾಯಿತು. ಹಿಂದಿನಿಂದ ಭಿನ್ನ ಸೃಷ್ಟಿಗಳಿಗೆ ದೃಷ್ಟಿಗಳಿಗೆ ನಮ್ಮ ಶಿಲ್ಪಿಗಳು ತಮ್ಮನ್ನು ತೆರೆದುಕೊಳ್ಳುವುದು ಸಾಧ್ಯವಾಯಿತು. ಗುಹಾಲಯ ದೇವಾಲಯಗಳ ಒಳ–ಹೊರ ಭಿತ್ತಿಗಳ ಖಾಲಿ ಸ್ಥಳ ತುಂಬುವ ಉದ್ದೇಶದಿಂದ ಸೃಷ್ಟಿಯಾಗುತ್ತಿದ್ದ ಶಿಲ್ಪಕಲೆ ಹೊಸ ಸಂದರ್ಭಕ್ಕೆ ಮೈಯೊಡ್ಡಿದ ಶಿಲ್ಪಗಳಿಂದ ಹೊಸಕಲ್ಪನೆಗಳಲ್ಲಿ ತನ್ನ ಎಲ್ಲ ಬದಿಗಳನ್ನು ತೋರಿಸುವಂಥ, ಘನತ್ವ ಹೊಂದಿದ ರೂಪಗಳನ್ನು ಪಡೆಯಿತು. ಭಾವಶಿಲ್ಪಗಳು ಹೆಚ್ಚು ಚಲಾವಣೆಗೆ ಬಂದವು. ಮೈಸೂರಿನಲ್ಲೂ ಇಂಥ ಶಿಲ್ಪಗಳು ಸೃಷ್ಟಿಯಾಗಲು ಅಷ್ಟೇನೂ ತಡವಾಗಲಿಲ್ಲ. 1891ರಲ್ಲೇ ಮುಂಬಯಿಯ ಜೆ.ಜೆ.ಸ್ಕೂಲ್ ಆಪ್ ಆರ್ಟ್‌ನಲ್ಲಿ ಶಿಲ್ಪಕಲೆಯನ್ನು ಕಲಿತ ಪುಣೆಯ ಗಣಪತಿರಾವ ಕಾಶಿನಾತ್ ಮ್ಹಾತ್ರೆ 1895ರ ಹೊತ್ತಿಗೆ ತಮ್ಮ ಶ್ರಮದಿಂದ ಅಪಾರ ಯಶಸ್ಸುಗಳಿಸಿದರು. 1899ರಲ್ಲಿ ಪ್ಲಾಸ್ಟರ್ ಆಫ್ ಪ್ಯಾರೀಸ್ ಮಾಧ್ಯಮದ 'ಮಂದಿರಾ ಕಡೆ' ಶೀರ್ಷಿಕೆಯ ಅವರ ಶಿಲ್ಪ ಎಲ್ಲರ ಮೆಚ್ಚಿಗೆ ಗಳಿಸಿತು. ರಾಜರವಿವರ್ಮನೂ ಈ ಶಿಲ್ಪವನ್ನು ನೋಡಿ ಮೆಚ್ಚಿದ ಉಲ್ಲೇಖಗಳಿವೆ. ಪ್ಯಾರೀಸ್ ಕಲಾ ಪ್ರದರ್ಶನಕ್ಕೂ ಹಲವು ಭಾವಶಿಲ್ಪಗಳನ್ನು ಮಾತ್ರ ಕಳುಹಿಸಿದ್ದರು. ಈ ಎಲ್ಲಾ ಕಾರಣಗಳಿಂದ ಅವರ ಶಿಲ್ಪಕಲಾ ಕೌಶಲ್ಯದ ಖ್ಯಾತಿ ಮೈಸೂರು ಸಂಸ್ಥಾನಕ್ಕೆ ಬರೋಡದ ಮಹಾರಾಜ ಸಯ್ಯಾಜಿರಾವ್‌ರಿಂದ ತಲುಪಿತು. ಕಲಾಭಿಮಾನಿ ಕೃಷ್ಣರಾಜ ಒಡೆಯರಿಂದ 1913ರಲ್ಲಿ ದಿವಾನ್ ಶೇಷಾದ್ರಿ ಅಯ್ಯರ್‌ರವರ ಜ್ಞಾಪಕಾರ್ಥವಾಗಿ ಅವರ ಮೂರ್ತಿ ಶಿಲ್ಪ ಸಿದ್ಧಪಡಿಸಲು ಮತ್ತೆ ಮ್ಹಾತ್ರೆಯರಿಗೆ ಕರೆ ಹೋಯಿತು.

ನಂತರ ಅವರು ಚಾಮರಾಜೇಂದ್ರ ಒಡೆಯರ್ ಅವರ ಭಾವಶಿಲ್ಪವನ್ನು ರಚಿಸಿದರು. ಮೈಸೂರಿನಲ್ಲಿ ಆ ಸಂದರ್ಭದಲ್ಲಿ ಅವರು ಸರ್ಕಾರದ ಮುಖ್ಯ ಅತಿಥಿಯಾಗಿ ಉಳಿದುಕೊಂಡಿದ್ದರು. ಚಾಮರಾಜೇಂದ್ರರ ಶಿಲ್ಪವನ್ನು ಅವರು 07.09.1916ರಲ್ಲಿ ಪೂರ್ಣಗೊಳಿಸಿಕೊಟ್ಟರು. ಮುಂದೆ ಅವರು ಮೈಸೂರಿನಲ್ಲಿ ಉಳಿಯಲಿಲ್ಲ. ಅದೇ ಕಾಲಕ್ಕೆ ಮೈಸೂರು ಮನೆತನದವರು ಬ್ರಿಟಿಷರ ಪ್ರಭಾವದಿಂದ ದೇಶದ ಇತರ ಎಲ್ಲಾ ರಾಜಮನೆತನಗಳಂತೆ ವರ್ಣಚಿತ್ರ ಮತ್ತು ಶಿಲ್ಪಗಳನ್ನು ಸಂಗ್ರಹಿಸುವ, ಹಾಗೂ ಕಲಾವಿದರನ್ನು ಪೋಷಿಸುವ ಹವ್ಯಾಸದವರಾಗಿದ್ದರು. ಜೆ.ಜೆ.ಕಲಾಶಾಲೆಯ ಹಾದಿಯಲ್ಲಿ ಚಾಮರಾಜೇಂದ್ರ ಕರಕುಶಲ ಶಾಲೆಯೂ ಇದ್ದಿತು. ದ್ವೋತ್ರೆಯವರಂತೆ ಮೈಸೂರಿನಲ್ಲಿ ಜರ್ಮನಿಯ ಜಿಲಾದಿನ್ ಉಡ್‌ವಿಲ್ಲೆ, ಇಂಗ್ಲೇಂಡಿನ ಸ್ಟರ್ಲಿಂಗ್, ಇಟಲಿಯ ಶಿಲ್ಪಿ ಕೊಲ್ಯಾಸ್ ರಾಬರ್ಟ್ ಎಂಬುವರು ಮೈಸೂರು ಅರಸರ ಆಶ್ರಯದಲ್ಲಿದ್ದರು.

1925ರ ಕಾಲಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ ಗಮನ ಸೆಳೆದು ಮೈಸೂರು ಅರಸರ ಆಸ್ಥಾನ ಶಿಲ್ಪಿಯಾಗಿ ಬಸವಯ್ಯ ನೇಮಕಗೊಂಡರು. ಆಗಿನ ಕಾಲಕ್ಕೆ ಮಾಡೆಲಿಂಗ್ (ರೂಪಶಿಲ್ಪ)ನಲ್ಲಿ ನಿಷ್ಣಾತರಾಗಿದ್ದರು. ಸಹಜ ಪ್ರತಿಭಾವಂತರಿಗೆ ಉತ್ತಮವಾಗಿ ಸಿದ್ಧಿಸುವ ಈ ಕಲೆಯನ್ನು ಬಸವಯ್ಯ 1914–1919ರ ಸಮಯದಲ್ಲಿ ಮೈಸೂರಿನ ವೃತ್ತಿ ಶಿಕ್ಷಣ ಕರಕುಶಲಕಲೆಗಳ ಅಭಿವೃದ್ಧಿಯ ಉದ್ದೇಶದ ಚಾಮರಾಜೇಂದ್ರ ತಾಂತ್ರಿಕ ಶಾಲೆಯಲ್ಲಿ ಕಲಿತರು. ರೂಪಶಿಲ್ಪವನ್ನು ಬಲ್ಲ ಕೆ. ರಾಮಕೃಷ್ಣನ್ ಅಲ್ಲಿ ಡ್ರಾಯಿಂಗ್ ವಿಭಾಗದ ಮುಖ್ಯಸ್ಥರಾಗಿದ್ದರು. (ಕೆ. ವೆಂಕಟಪ್ಪನವರಿಗೂ ಇವರು ಗುರುಗಳಾಗಿದ್ದರು) ಮಾಡೆಲಿಂಗ್ ವಿಭಾಗದಲ್ಲಿ ಮದರಾಸಿನ ಎಂ.ಗೋವಿಂದ ಪಿಳ್ಳೆಯವರ ಬಳಿಯೂ ಬಸವಯ್ಯ ಕಲಿತರು. ಗೋವಿಂದ ಪಿಳ್ಳೆ ಶಿಲ್ಪಕಲೆಯಲ್ಲಿ ಪಶ್ಚಿಮದ ಅಕಾಡೆಮಿಕ್ ಜ್ಞಾನದ ರಸಧಾರೆಯೇ ಆಗಿದ್ದರು. ಗಂಭೀರವಾಗಿ ಹರಿಯುವ ನದಿಯಂತೆ ಅವರು ಪ್ರಚಾರ ಬಯಸದವರಾಗಿದ್ದರು. ಮುಂಬಯಿಯ ಸರ್.ಜೆ.ಜೆ. ಕಲಾಶಾಲೆಯಲ್ಲಿ ಶಿಲ್ಪಕಲೆ ಕಲಿಯಲು ಮೈಸೂರು ಅರಸರ ವಿದ್ಯಾರ್ಥಿ ವೇತನ ಪಡೆದೂ

(ಶಿಲ್ಪಿಯಾದವನಿಗೆ ಚಿತ್ರಕಲೆಯ ಪರಿಚಯವೂ ಅಗತ್ಯ ಎಂದು ಭಾವಿಸಿ) ಚಿತ್ರಕಲೆಯನ್ನು ಕಲಿತರು.

ಬಸವಯ್ಯ ಮುಂಬಯಿಯ ಶಿಲ್ಪಿಗಳ ಹಲವು ಸ್ಟುಡಿಯೋಗಳಲ್ಲಿ ಕಲಿತು ರೂಪಶಿಲ್ಪದ ಉನ್ನತ ಹಂತಗಳನ್ನು ಮುಟ್ಟಿದರು. ವಿ.ಪಿ.ವಾಗ್ ಮತ್ತು ದ್ಯೋತ್ರೇಯವರಂಥ ಖ್ಯಾತರ ಬಳಿ ಕಲಿಯುವ ಅವಕಾಶವಾಯಿತು. ಮೈಸೂರಿಗೆ ಹಿಂತಿರುಗಿದ ಮೇಲೆ 1925ರಿಂದ 1940ರ ವರೆಗೆ ಹಲವು ವ್ಯಕ್ತಿಗಳ ಭಾವರೂಪ ಶಿಲ್ಪಗಳನ್ನು ಸಿದ್ಧಪಡಿಸಿದರು. ಆ ಕಾಲದ ಮತ್ತೊಬ್ಬ ಸೃಜನಶೀಲ ಶಿಲ್ಪಿ ಚಿತ್ರಕಾರರು ಆಗಿದ್ದ ಆರ್.ಎಸ್. ನಾಯಿಡು ಸ್ವಯಂ ಸ್ಫೂರ್ತಿಯ ಕಲಿಕೆಯವರು 1950ರ ಸುಮಾರಿನಲ್ಲಿ ಬೆಂಗಳೂರಿನಲ್ಲಿ ಮತ್ತು 1957ರ ನಂತರ ಮೈಸೂರಿನಲ್ಲಿದ್ದ ಅವರು ಪಶ್ಚಿಮದ ಕಲೆಯ ಪರಿಚಯ ಹೊಂದಿದ್ದವರು. ಲಂಡನ್ನಿಗೂ ಭೇಟಿ ನಿಡಿದ್ದರು. ಪೋಲ್ಯಾಂಡ್ ನವ್ಯಕಲೆಯನ್ನು ಮೆಚ್ಚಿಕೊಂಡಿದ್ದರು. ಪ್ಲಾಸ್ಟರ್‌ನಿಂದ ತೀವ್ರಭಾವನೆಯ ಮತ್ತು ವ್ಯಂಗ್ಯ ವಿಡಂಬನೆಯ ಉಬ್ಬುಶಿಲ್ಪಗಳೇ ಅಲ್ಲದೆ; ಲೆನಿನ್, ಗಾರ್ಡಿ, ಮುಸಲೋನಿ, ಗಾಂಧಿ, ಬುದ್ಧ, ಕ್ರಿಸ್ತ, ಬೇಂದ್ರೆ, ಕುವೆಂಪು, ಮೊದಲಾದವರ ಭಾವ ಶಿಲ್ಪಗಳನ್ನು ಅವರು ಸೃಷ್ಟಿಸಿದರು.

ರಾಜ್ಯದಲ್ಲಿ ನಿಜವಾದ ಅರ್ಥದಲ್ಲಿ ಆಧುನಿಕ ಶಿಲ್ಪಕಲೆ ಪ್ರಾರಂಭವಾದದು. ಕೊಡಗಿನವರಾದ ಪೊನ್ನಪ್ಪ ರಾಜರಾಮ್ ಅವರು ಮರಕೆತ್ತನೆಯಲ್ಲಿ ಸೃಷ್ಟಿಸಿರುವ ಅನೇಕ ಶಿಲ್ಪಗಳು ಹೊಸ ಅಭಿವ್ಯಕ್ತಿತನದಿಂದ ಕೂಡಿದ್ದು, ಅಮೂರ್ತ ಶೈಲಿಯ ಈ ಶಿಲ್ಪಗಳಲ್ಲಿ ಹೊಸತನವನ್ನು ಕಾಣಬಹುದು. 1961–62ರ ಕಾಲಕ್ಕೆ ರಾಜ್ಯದಲ್ಲಿ ಕಲಾವಿಮರ್ಶಕ ಜಿ.ವೆಂಕಟಾಚಲಂ ಪ್ರಯತ್ನದಿಂದ ಲಲಿತಕಲಾ ಅಕಾಡೆಮಿ ಪ್ರಾರಂಭವಾಗಿ ಕಲಾಚಟುವಟಿಕೆಗಳಿಗೆ ಹೊಸ ಜೀವ ನೀಡಿತು. ಚಿತ್ರಕಲೆಯಲ್ಲಿ ಹೊಸ ದೃಷ್ಟಿಕೋನ ಮೂಡಲು ಕಾರಣವಾದದ್ದು 1964ರ 'ಎಫೋರ್' ಕಲಾ ಪ್ರದರ್ಶನ ಶಿಲ್ಪಕಲೆಯ ಮೇಲೂ ಪರೋಕ್ಷವಾಗಿ ಈ ಪ್ರದರ್ಶನ ಪ್ರಭಾವ ಬೀರಿತು. ಬಾದಾಮಿಯಲ್ಲಿ ಹುಟ್ಟಿದ ನಾರಾಯಣ. ಎಚ್.ಕುಲಕರ್ಣೀ (1937) ಪ್ರಾರಂಭದಲ್ಲಿ ಹಡಪದ್ ಅವರ ಮಾರ್ಗದರ್ಶನದಲ್ಲಿ ಚಿತ್ರಕಲೆಯ ಮೂಲ ಪಾಠಗಳನ್ನು ಕಲಿತವರು. ನಂತರ

ಬರೋಡಾ ವಿಶ್ವವಿದ್ಯಾಲಯದಲ್ಲಿ ಫೌಂಡೇಷನ್ ಕೋರ್ಸಿಗೆ ಚಿತ್ರಕಲೆಯನ್ನು ಆರಿಸಿಕೊಂಡವರು ಮೂರನೆಯ ವರ್ಷದ ನಂತರ ಶಿಲ್ಪಕಲೆಯನ್ನು ಆಯ್ಕೆಮಾಡಿಕೊಂಡು ವಿಶೇಷ ಶ್ರಮವಹಿಸಿ ಕಲಿತು ಡಿಪ್ಲೋಮಾ ಗಳಿಸಿದರು. ಆಗ ಅವರ ಗುರುಗಳಲ್ಲೊಬ್ಬರಾಗಿದ್ದ ಶಂಖು ಚೌದರಿಯವರ ಶಿಲ್ಪ ಸೃಷ್ಟಿ ಅದರ ಪ್ರಭಾವ ಬೀರಿತು. ಕಲಾಶಾಲೆಯಲ್ಲಿ ಕಲಿಯುತ್ತಿರುವಾಗ ಮಾನವಾಕಾರಗಳ ಹಾಗೂ ಇತರ ಆಕೃತಿಗಳ ಬಗ್ಗೆ ಇದ್ದ ಆಸಕ್ತಿ ನಂತರದ ದಿನಗಳಲ್ಲಿ ಅಬ್ಸ್ಟ್ರಾಕ್ಟ್ ಕಲಿಯುತ್ತ ವಾಲಿತು. ಅನುಭವಗಳ ಸಂವೇದನಾಶೀಲ ಅಭಿವ್ಯಕ್ತಿಗೆ ಅವರು ಕಂಡುಕೊಂಡ ವಿಧಾನಗಳು ನಡೆಸಿದ ಪ್ರಯೋಗಗಳು ಅಸಂಖ್ಯಾತ. ಹರಿತವಾದ ಬುದ್ಧಿ, ವೈಚಾರಿಕ ದೃಷ್ಟಿ, ಹೊಸ ಹಾದಿ ತುಳಿದೂ ಪರಿಶ್ರಮ ಎಷ್ಟಾದರೂ ಸಫಲತೆ ಸಾಧಿಸುವ ಮನೋದಾರ್ಢ್ಯದ ಕಾರಣ ಉತ್ತರ ಭಾರತದಲ್ಲಿ (ದೆಹಲಿಯಲ್ಲಿ) ನೆಲೆಸಿದ ನಂತರವೂ ಸ್ಪರ್ಧಾತ್ಮಕವಾದ ಸಮಕಾಲೀನ ಶಿಲ್ಪಿಗಳ ಚಟುವಟಿಕೆಯ ನಡುವೆಯೂ ಯಶಸ್ಸು ಸಾಧಿಸಿದ್ದಾರೆ. 1965ರ ಲೋಹ ಶಿಲ್ಪದ ಎರಕದ ಸೌಲಭ್ಯ ಸಾಧಿಸಲು ಮಿಶ್ರಲೋಹದಲ್ಲಿ ಹಲವು ಶಿಲ್ಪಗಳನ್ನು ಸೃಷ್ಟಿಸಿದರು. 1982ರಲ್ಲಿ ದೆಹಲಿಯ ಹೊರವಲಯದಲ್ಲಿ ಸ್ಟುಡಿಯೋ ಸ್ಥಾಪಿಸಿ ವೃತ್ತಿ ಪ್ರವೃತ್ತಿಗಳೆರಡಕ್ಕೂ ಶಿಲ್ಪಕಲೆಯನ್ನೇ ಆಶ್ರಯಿಸಿದರು. ಭಾರತೀಯ ಜಾನಪದ ಕಲೆ ಮತ್ತು ಸಾಂಪ್ರದಾಯಕ ಕಲೆಗಳು ಸಮಕಾಲೀನ ಪಶ್ಚಿಮದ ಪ್ರಭಾವಗಳ ಜೊತೆ ಸಮೀಕರಣಗೊಂಡು ತಮ್ಮಂಥವರ ಅಭಿವ್ಯಕ್ತಿಗಳಲ್ಲಿ ವೈವಿಧ್ಯಮಯ ಕಲ್ಪನೆಗಳು ಬರಲು ಸಾಧ್ಯವಾಗಿದೆ ಎಂದು ಅವರು ಹೇಳಿಕೊಂಡಿದ್ದಾರೆ. ಬದುಕಿಗೆ ಬಹು ಹತ್ತಿರವಾದ ಜೀವನ ಮತ್ತು ಕಲೆಯ ಸಮನ್ವಯದಿಂದ ಅವರ ಸೃಷ್ಟಿಗಳು ವೀಕ್ಷಕರನ್ನು ತಟ್ಟುತ್ತವೆ. ಶಿಲ್ಪವೊಂದರ ಎಲ್ಲಾ ಲಕ್ಷಣಗಳನ್ನು ಹೊಂದಿರುವ ಅವರ ಸೃಷ್ಟಿಗಳಲ್ಲಿ ಹಲವು ಮಾಧ್ಯಮಗಳನ್ನು ದುಡಿಸಿಕೊಳ್ಳಲಾಗಿದೆ. ಹಲವು ಹಂತಗಳ ನಂತರ ಅವರು ಪ್ರಿಂಟಿಂಗ್ ಟೈಪಗಳನ್ನು ರೂಪಿಸಿದರು. ನಂತರ ಪ್ರಕೃತಿಯ ಸ್ಫೂರ್ತಿಯಿಂದ ಸೃಷ್ಟಿಸಿದ ಅಶ್ವಸರಣಿ ಶಿಲ್ಪಗಳು, ಸಪ್ತಾಶ್ವಗಳ ಸೃಷ್ಟಿ 1970ರ ದಶಕದ ಸಮಕಾಲೀನ ರಾಜಕೀಯ ಸ್ಥಿತಿಯನ್ನು ಬಿಂಬಿಸುವುದು ಕುತುಹಲಕಾರಿ. ಸುತ್ತಲಿನ ದೃಶ್ಯದೊಂದಿಗೆ ಹೊಂದಿಕೊಳ್ಳುವ ಶಿಲ್ಪಗಳ ಕಲ್ಪನೆ ಹೊಸದೇ ಸರಿ. ಪಶ್ಚಿಮದ ಲ್ಯಾಂಡ್ ಆರ್ಟನಂತೆ ಇಂಥ ಪರಿಸರ ಶಿಲ್ಪಗಳಲ್ಲಿ ಬಿಲೈನ್ ಉಕ್ಕು ಸ್ಥಾವರದ ಸ್ಮಾರಕ. ದೆಹಲಿಯ ಕಾನಾಟ್

ವೃತ್ತದ ಕಾರಂಜಿಯ ಕಲ್ಪನೆ ಅನನ್ಯವಾಗಿದೆ. ಪ್ಲಾಸ್ಟರ್, ಶಿಲೆ, ಮಿಶ್ರಲೋಹಗಳು, ಥರ್ಮಾಕೋಲ, ಉಕ್ಕು, ಸಿಮೆಂಟ್ ಉಪಯೋಗಿಸಿದ ನಿರುಪಯೋಗಿ ವಸ್ತುಗಳು, ಫೈಬರ್, ಕಂಚಿನ ಹಾಳೆ, ಟೆರ್ರಾಕೋಟಾ, ಇತ್ಯಾದಿ ವೈವಿಧ್ಯಮಯ ಮಾಧ್ಯಮಗಳಲ್ಲಿ ಅವರು ಅಭಿವ್ಯಕ್ತಿಸಿದ್ದಾರೆ. 1983–84ರಲ್ಲಿ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ನಡೆದ ಶಿಲ್ಪಿಗಳ ಶಿಬಿರಕ್ಕೆ ನಿರ್ವಾಹಕರಾಗಿ ಕುಲಕರ್ಣಿ ಅವರು ಆಗಮಿಸಿದ್ದರು.

ರಾಜ್ಯದ ಲಲಿತಕಲಾ ಅಕಾಡೆಮಿಯ ವಾರ್ಷಿಕ ಕಲಾ ಪ್ರದರ್ಶನಗಳಲ್ಲಿ ನಮ್ಮ ಸಾಂಪ್ರದಾಯಕ ಶಿಲ್ಪಕಲೆಗೆ ಹೊಂದಿಕೊಂಡಿದ್ದ ಕಲಾಭಿಮಾನಿಗಳ ಅಭಿರುಚಿ ಆಧುನಿಕ ಕಲೆಯತ್ತ ಸೆಳೆಯುವ ದಿಸೆಯಲ್ಲಿ ಬಹಳ ಪ್ರಯತ್ನಗಳಾಗಿವೆ. ಆಗುತ್ತಿವೆ. ಅಕಾಡೆಮಿ ಪ್ರದರ್ಶನಗಳಲ್ಲಿ ಮೊದಲಬಾರಿಗೆ ಅಪ್ಪುಕುಟ್ಟನ್ ಆಚಾರಿ ಮತ್ತು ಅಲ್ಲೊಮ್ಮೆ ಇಲ್ಲೊಮ್ಮೆ ವಿ.ಗೋಪಾಲ್‌ರವರುಗಳ ಆಧುನಿಕ ಕಲ್ಪನೆಯ ಶಿಲ್ಪಗಳನ್ನು ನೋಡುತ್ತಿದ್ದ ಜನರು 1979ರಲ್ಲಿ ವೆಂಕಟಾಚಲಪತಿ ಜಾನಪದ ಸತ್ವಗಳನ್ನು ತುಂಬಿಕೊಂಡ ಆಧುನಿಕ ರೂಪಕಲ್ಪನೆಯ ಶಿಲ್ಪಗಳನ್ನು ಪ್ರದರ್ಶಿಸಿದಾಗ ಸಂತಸದಿಂದ ಸ್ವಾಗತಿಸಿದರು. ಸ್ವಲ್ಪ ದಿನಗಳಲ್ಲೇ ಪಶ್ಚಿಮದ ಅಸ್ಸೆಂಬ್ಲೇಜ್ ಹಾದಿನ ಸನ್ ಗಾಡ್ ಕಂಚಿ ಶಿಲ್ಪ ಸೃಷ್ಟಿಯಾಯಿತು.

ಆನಂತರ 1980ರಿಂದ ವಿಕೃತಿಯನ್ನು ದುಡಿಸಿಕೊಂಡ ಜಾನಪದೀಯ ಸೆಳಕುಗಳೊಂದಿಗೆ ಆಧುನಿಕ ದೃಷ್ಟಿಕೋನದ ಗ್ರಹಿಕೆಗಳಿದ್ದ ಹಲವು ಶಿಲ್ಪಗಳು ಮೂಡಿ ಬಂದವು. ಶಿಲಾಮಾಧ್ಯಮದ 'ರಾಹು ಕೇತು' (1980) ಪೇನ್ (1981) ಕೃತಿಗಳು ಆ ಸಂದರ್ಭದ ಗಮನಾರ್ಹ ಕೃತಿಗಳು 'ಪೇನ' ಮಧ್ಯವಯಸ್ಕ ಹೆಣ್ಣಿನ ಮುಚ್ಚಿದ ಕಣ್ಣುಗಳು, ಉಬ್ಬಿದ ಮೂಗಿನ, ದಪ್ಪ ಚಪ್ಪಟೆ ತುಟಿಗಳ ಅರೆಮೊಗದ ಸುಂದರ ವಿಕೃತ ಶಿಲ್ಪ.

ಆ ವೇಳೆಗೆ ಬೆಂಗಳೂರಿನ ವಿಶ್ವೇಶ್ವರಯ್ಯ ತಾಂತ್ರಿಕ ಮ್ಯೂಸಿಯಂನಲ್ಲಿ ಕೆಲಸ ಮಾಡಲಾರಂಭಿಸಿದ ಅವರಿಗೆ ಅಲ್ಲಿನ ತಾಂತ್ರಿಕತೆಯ ಹೊಸ ಅನುಭವ, ಅನುಕೂಲಗಳು ಶಿಲ್ಪ ಸೃಷ್ಟಿಯ ವಿವಿಧ ಮಜಲುಗಳಲ್ಲಿ ನೆರವಾದವು. ಆ ಹಿಂದಿನ ಕಲ್ಪನೆಗಳಿಗಿಂತ ಭಿನ್ನವಾದ

ಸೃಷ್ಟಿಗಳಿಗೆ ಅವರು ಕಾರಣರಾದರು. ಪಶ್ಚಿಮದ ಪ್ರಭಾವ ದಟ್ಟವಾಗಿ ಅವರನ್ನು ಆಲಂಗಿಸಿತು. ಹೆನ್ರಿಲಾರೆನ್ಸ ಲೂನ, ಅಲೆಕ್ಸಾಂಡರ್ ಅರ್‌ಚಿಪೆಂಕಾ, ಮರಿನೋಮೆರಿನಿ, ಜಿಯಾಕೊಮೆಟ್ಟಿ, ಹೆನ್ರಿಮೂರ್, ಎಫ್.ಇ. ಮ್ಯಾಕ್ ವಿಲಿಯಮ್, ಮೋರಿಸ್ ಲಿಪ್ಸೆ, ಕೆನೆತ್ ಹೆರ್‌ಮಿಟೇಜ್, ಮೊದಲಾದವರ ಪ್ರಭಾವ ಅವರ ಶಿಲ್ಪಗಳಲ್ಲಿದೆ.

ವೆಂಕಟಾಚಲಪತಿ ದೇವನಹಳ್ಳಿಯ ಸಾಂಪ್ರದಾಯಕ ಶಿಲ್ಪಿ ಎ.ಸಿ.ಎಚ್. ಆಚಾರ್ಯರಲ್ಲಿ ಕಲಿತವರು. ಅವರ ಹೊಸ ಅನ್ವೇಷಣಾ ಮನೋಧರ್ಮವನ್ನು ಕುತೂಹಲದಿಂದ ಕಂಡಿದ್ದವರು. ಹೀಗಾಗಿ ಪ್ಲಾಸ್ಟರ್, ಶಿಲೆ, ಸಿಮೆಂಟ್, ಟೆರಾಕೋಟಾ, ಕಂಚು, ಕಬ್ಬಿಣ, ಫೈಬರ್‌ಗಾಜು, ಇತ್ಯಾದಿ ಮಾಧ್ಯಮಗಳಲ್ಲಿ ಶಿಲ್ಪಗಳನ್ನು ಸೃಷ್ಟಿಸಿರುವ ಮತ್ತು ಹೊಸ ಮಾಧ್ಯಮಗಳಿಗೆ ಕೈ ಚಾಚುತ್ತಿರುವ ವೆಂಕಟಾಚಲಪತಿ ಸಂಪ್ರದಾಯದ ಹಾದಿಯಿಂದ ಆಧುನಿಕತೆಗೆ ಹಾರಿಕೊಂಡವರು. ನೋವಿನ ಆನಂದದ ಅಭಿವ್ಯಕ್ತಿಗೆ ರೂಪ ನೀಡುತ್ತಿದ್ದ ಅವರು ಇತ್ತೀಚೆಗೆ ನೆರಳು ಬೆಳಕಿನ ಆಟವನ್ನು ತಮ್ಮ ಶಿಲ್ಪಗಳಲ್ಲಿ ಅಭಿವ್ಯಕ್ತಿಸಲಾರಂಭಿಸಿದ್ದಾರೆ.

1981ರಲ್ಲಿ ಬೆಂಗಳೂರಿನ ವಿಶ್ವೇಶ್ವರಯ್ಯ ಇಂಡಸ್ಟ್ರೀಯಲ್ ಮತ್ತು ಟೆಕ್ನೊಲಾಜಿಕಲ್ ಮ್ಯೂಸಿಯಂನಲ್ಲಿ 'ಟೆಕ್ನೊ ಆರ್ಟ್ ಕ್ಯಾಂಪ್' ರಾಷ್ಟ್ರದಲ್ಲಿ ಮೊದಲ ಬಾರಿಗೆ ನಡೆದಾಗ ವೆಂಕಟಾಚಲಪತಿಯವರ ಕಲ್ಪನೆಗಳು ಶಿಬಿರದಲ್ಲಿ ಶಿಲ್ಪಗಳನ್ನು ಸೃಷ್ಟಿಸಿದ ಭಾರತದ ಖ್ಯಾತ ಶಿಲ್ಪಿಗಳ ಸನಿಹದಿಂದ ಗರಿಗೆದರಿದವು. ಮೊದಲಬಾರಿಗೆ ನಮ್ಮ ಶಿಲ್ಪಿಗಳು ವೈಜ್ಞಾನಿಕತೆಯ ಫಲವಾಗಿ ಲಭ್ಯವಾದ ತಾಂತ್ರಿಕ ಸವಲತ್ತುಗಳನ್ನು ತಮ್ಮ ಶಿಲ್ಪಗಳ ಸೃಷ್ಟಿಗೆ ದುಡಿಸಿಕೊಂಡರು. ನಮ್ಮ ಕಲಾವಿದರಾದ ಎಸ್.ಜಿ.ವಾಸುದೇವ್, ಜಿ.ಎಸ್.ಶೆಣೈ, ಭಾಸ್ಕರ್‌ರಾವ್, ಅಂಚನ್, ವಿ.ಎ.ದೇಶಪಾಂಡೆ ರವರುಗಳು ತಮ್ಮ ಕಲ್ಪನೆಗಳಿಗೆ ಹೊಸ ದೃಷ್ಟಿಕೋನಗಳನ್ನು ಅನ್ವೇಷಿಸಿಕೊಂಡರು. 1985ರ ನಂತರ ನಮ್ಮ ಯುವಶಿಲ್ಪಿಗಳು ಹಿರಿಯರ ಜೊತೆಗೆ ಹೆಚ್ಚು ಹೆಚ್ಚು ಅಭಿವ್ಯಕ್ತಿಸಲಾರಂಭಿಸಿದರು. ಚಿತ್ರಕಲೆಯ ಜೊತೆಗೆ ಶಿಲ್ಪಗಳನ್ನು ಆಗೊಮ್ಮೆ ಈಗೊಮ್ಮೆ ಸೃಷ್ಟಿಸುತ್ತಿದ್ದವರು, ಹಲವರಾದರೆ (ಯೂಸುಫ್, ಇ.ಕೆ. ಜನಾರ್ಧನ್, ರಾಮದಾಸ್,

ಶ್ಯಾಮಸುಂದರ, ಭಾಸ್ಕರ್‌ರಾವ್, ನಟರಾಜ ಶರ್ಮ, ಜಾನದೇವರಾಜ, ವಿ.ಆರ್.ಸಿ.ಶೇಖರ್, ಮರಿಶಾಮಾಚಾರ್, ಕೃಷ್ಣದೇವಾಡಿಗ) ಶಿಲ್ಪವನ್ನೇ ತಮ್ಮ ಪೂರ್ಣ ಅಭಿವ್ಯಕ್ತಿ ಮಾಧ್ಯಮವಾಗಿಸಿಕೊಂಡವರು ಕೆಲವರು (ಬಾಲನ್ ನಂಬಿಯಾರ್, ಎ.ವಿ.ದೇಶಪಾಂಡೆ, ಎಂ. ರಾಮಮೂರ್ತಿ, ಪುಷ್ಪಮಾಲಾ) ಇವರೆಲ್ಲ ಬಹುತೇಕ ಭಾರತೀಯ ಜಾನಪದ ಪಶ್ಚಿಮದ ಆಧುನಿಕ ಸತ್ವಗಳನ್ನು ಹೀರಿಕೊಂಡ ಸಮಕಾಲೀನ ಸೊಗಡಿನ ಸೃಷ್ಟಿಗಳಿಗೆ ಕಾರಣರಾದರು. ಭಿನ್ನ ಮಾಧ್ಯಮ ಶೈಲಿಗಳಲ್ಲಿ ಅಭಿವ್ಯಕ್ತಿಸಿದರು. ಯೂಸುಫ್ ಅರಕ್ಕಾಲ್, ಶ್ಯಾಮಸುಂದರ, ಪುಷ್ಪಮಾಲಾ ಮತ್ತು ಜಾನ್ ದೇವರಾಜ್ ರವರುಗಳ ಅಭಿವ್ಯಕ್ತಿ ಅಸಾಮಾನ್ಯ. ಈ ನಾಲ್ವರೂ ಮಾನವನ ನೋವಿನ ಮೂಲದ ಒಳನೋಟಗಳಿಗೆ, ಬದುಕಿನ ಬೆಡಗು ವಿಡಂಬನೆಗಳಿಗೆ ವಿಶಿಷ್ಟ ರೂಪ ನೀಡಿದ್ದಾರೆ. ಹಾಗೆ ನೋಡಿದರೆ ಯೂಸುಫ್ ಅರಕ್ಕಾಲ್ ಮತ್ತು ಜಾನದೇವರಾಜರ ಶಿಲ್ಪಗಳು ವಿಕೃತಿಯನ್ನು ದುಡಿಸಿಕೊಂಡಿರುವುದೇ ಆಗಿವೆ.

ಯೂಸುಫ್‌ರವರ 1986ರ ಶಿಲ್ಪಗಳಲ್ಲಿ ಮೂರನೆಯ ವಿಶ್ವದ ದೇಶಗಳ ಹಸಿವಿನ ಅದರ ಸಂಭವಿಸುತ್ತಿರುವ ಸಾವುಗಳ ವಿರಾಟ ದರ್ಶನಕ್ಕಾಗಿ ಟೆರಾಕೋಟಾ ಮತ್ತು ಸೆರಾಮಿಕ್ಸ್ ಮಾಧ್ಯಮಗಳನ್ನು ದುಡಿಸಿಕೊಳ್ಳಲಾಗಿತ್ತು. ಕಬ್ಬಿಣ ಕಂಚೂ ಸಹ ಇಲ್ಲಿ ವಿಕೃತಿ ವೈಭವೀಕರಣಗೊಂಡಿತ್ತು. 'ಫೇಸ್‌ಸ ಆಫ್ ಹಂಗರ್' ಶೀರ್ಷಿಕೆಯ ಆ ಶಿಲ್ಪಗಳು ಆಫ್ರಿಕ ದೇಶಗಳ ಭೀಕರ ಕ್ಷಾಮದ ಸಾಂದರ್ಭಿಕ ಅಭಿವ್ಯಕ್ತಿಯಾದರೂ ಶಿಲ್ಪಗಳ ನೋವಿನ ಒಳನೋಟಗಳು ಅನನ್ಯ. ನೋವಿನಿಂದ ಬೆಂದ, ಮಾಂಸ ಮತ್ತು ರಕ್ತಗಳ ವಿಕೃತ ಸೌಂದರ್ಯದ ಮಾನವಾಕಾರಗಳು ಪಾರ್ಕಿನ ಕುರ್ಚಿಗಳ ಮೇಲೆ ಭಿಕಾರಿಗಳಂತೆ ವಿಶ್ರಮಿಸಿಕೊಳ್ಳುತ್ತಿರುವ ಕಬ್ಬಿಣ ಕಂಚಿನ ಶಿಲ್ಪಗಳು ಇದೇ ಸಂದರ್ಭದಲ್ಲಿ ಮೂಡಿಬಂದವು.

1986ರಲ್ಲಿ ಗ್ರಾನೈಟ್ ಮಾಧ್ಯಮದಲ್ಲಿ ಚಪ್ಪಡಿಯ ಮೂಲ ಕಲ್ಪನೆ ನೆನಪಿಸುವ ಆದರೆ ಆಧುನಿಕ ದೃಷ್ಟಿಯ ಶಿಲ್ಪಗಳು ಯೂಸುಫರಿಂದ ಸೃಷ್ಟಿಯಾದವು. ಮಾನವನು ತಾಂತ್ರಿಕವಾಗಿ ಸಾಧಿಸಿಕೊಂಡಿರುವ ಪಾರಮ್ಯವನ್ನು ಗೌರವಿಸುವ ಉದ್ದೇಶದ ಹಲವು ಅಮೂರ್ತ ಶಿಲ್ಪಗಳ

ನಡುವೆ ಡಿಜೆಕ್ಷನ್, ಕನ್‌ಫ್ಲೂಯ್ಸ್ ಟೊರ್ಸೋದಂಥ ಎಲ್ಲ ಕೋನಗಳಿಂದಲೂ ನೋಡಿಸಿಕೊಳ್ಳುವ ಶಿಲ್ಪಗಳ ಜೊತೆ 'ಇನ್ ಕನವರ್‌ಜೇಶನ್' ಶಿಲ್ಪ ಜೋಡಿ ಮೌನದ ತೀವ್ರತೆಯ ಸುಂದರ ಗ್ರಹಿಕೆಗಳನ್ನು ನಿರೂಪಿಸಿದೆ. ನುಣುಪು, ಹೊಳಪು ಮತ್ತು ಒರಟುತನಗಳೆರಡನ್ನು ಸಮಸಮವಾಗಿ ದುಡಿಸಿಕೊಂಡ ಪಶ್ಚಿಮದ ಪ್ರಭಾವವನ್ನು ಅರಗಿಸಿಕೊಂಡ ಅತ್ಯುತ್ತಮ ಶಿಲ್ಪವಿದು. ಗಂಡು ಹೆಣ್ಣಿನ ಕಲ್ಪನೆ ಇಲ್ಲಿ ಅನನ್ಯ. ಶಿಲಾ ಮಾಧ್ಯಮವನ್ನು ಯೂಸುಫ್ ಸಮರ್ಥವಾಗಿ ದುಡಿಸಿಕೊಳ್ಳುತ್ತಾರಾದರೂ ಹಲವು ಮಾಧ್ಯಮಗಳಲ್ಲಿ ಅಭಿವ್ಯಕ್ತಿಸುವಾಗ ಎಲ್ಲಾ ಮಾಧ್ಯಮಗಳ ಸಂಪೂರ್ಣ ಸಾಧ್ಯತೆಗಳನ್ನು ದುಡಿಸಿಕೊಳ್ಳುವ ಸಮಸ್ಯೆಯನ್ನು ಅವರು ಎದುರಿಸುತ್ತಿಲ್ಲ. ಒಂದರಿಂದ ಮತ್ತೊಂದಕ್ಕೆ ಲೀಲಾಜಾಲವಾಗಿ ಜಿಗಿಯುತ್ತಾರೆ. ಮರದ ಮುಖಗಳೂ ಅವರಿಂದ ಸೃಷ್ಟಿಯಾಗಿವೆ.

ಈ ರೀತಿಯಾಗಿ ಹಂತ ಹಂತವಾಗಿ ಬೆಳೆದು ಬಂದ ಸಮಕಾಲೀನ ಕಲೆಯು ಮಹಿಳಾ ಕಲಾವಿದೆಯಾದ ಪುಷ್ಪಮಾಲರವರನ್ನು ಸೆಳೆಯಿತು. 1977–85ರ ನಡುವೆ ಬರೋಡಾದಲ್ಲಿ ಶಿಲ್ಪಕಲೆಯನ್ನು ಕಲಿತ ಪುಷ್ಪಮಾಲಾ ಪ್ರಾರಂಭದಲ್ಲಿ ಬೆಂಗಳೂರಿನಲ್ಲಿ ಬಾಲನ್ ನಂಬಿಯಾರ್‌ರವರಿಂದ ಚಿತ್ರಕಲೆಯ ಮೂಲ ಪಾಠಗಳನ್ನು ಕಲಿತವರು. ಸಮಕಾಲೀನ ಖ್ಯಾತ ಶಿಲ್ಪಿಗಳಾದ ರವೀಂದ್ರ ರೆಡ್ಡಿ, ಅಲೆಕ್ಸ ಮ್ಯಾಥ್ಯೂ, ತೃಪ್ತಿಪಟೇಲ್‌ರವರುಗಳ ನಡುವೆ ಅರಳಿದವರು, ಕೆ.ಜಿ. ಸುಬ್ರಮಣ್ಯಂ ಮತ್ತು ಬೂಪೇನ್ ಖಖ್ಖರರವರ ಪ್ರಭಾವಕ್ಕೆ ಸಿಲುಕಿದವರು.

ಜಾನಪದ ಹಾಗೂ ಜನಪ್ರಿಯ ಕಲಾಪ್ರಕಾರಗಳನ್ನು ಭಾರತೀಯ ಸನ್ನಿವೇಶದ ಹಿನ್ನೆಲೆಯಲ್ಲಿ ಪುನರ್ ಪರಿಶೀಲಿಸುವ ಉತ್ಸಾಹವಿದ್ದ ಕಾಲ. ಪುಷ್ಪಮಾಲಾ ತಮ್ಮ ಸಮಕಾಲೀನರೊಡನೆ ಅಚ್ಚ ಭಾರತೀಯವಾದುದ್ದನ್ನು ಸೃಷ್ಟಿಸುವಲ್ಲಿ ತಲ್ಲೀನರಾದರು. 1983–85ರ ನಡುವೆ ಅವರು ರಚಿಸಿದ ಟೆರಾಕೋಟಾ ಕೃತಿಗಳು ಭಾರತೀಯ ಶಿಲ್ಪ ಪರಂಪರೆಯ ಪ್ರಾಣ ಮತ್ತು ಸಂಪೂರ್ಣತೆಯನ್ನು ಮೈಗೂಡಿಸಿಕೊಂಡೇ ಜೀವ ತಳೆದಿದೆ. ಆದರೂ ಅವು ತಮ್ಮ ಸಮಕಾಲೀನತೆ ಹಾಗೂ ಕಲಾವಿದೆಯ ವೈಯಕ್ತಿಕ ದೃಷ್ಟಿಕೋನ ಮತ್ತು ತಾಂತ್ರಿಕ

ನಾವೀನತ್ಯತೆಗಳಿಂದ ಅನನ್ಯವಾಗಿ ಕಾಣುತ್ತವೆ. ಟೆರಾಕೋಟಾ ಮಾಧ್ಯಮದ 'ಅಡೊಲೊಸೆಂಟ್' ಶಿಲ್ಪಸರಣಿ, ಟ್ರೈನಾಲೆ ಪ್ರಶಸ್ತಿ ವಿಜೇತ 'ಪಿಗ್', 'ಗರ್ಲ್ ವಿತ್ ಷೆಲ್', 'ವುಮನ ಅಡ್ಜೆಸ್ಟಿಂಗ್ ಬ್ರಾ' ಶಿಲ್ಪಗಳು, ಫೈಬರ್ ಮಾಧ್ಯಮದ ಹಲವು ಶಿಲ್ಪಗಳು, ಟೆರಾಕೋಟ ಮಾಧ್ಯಮದ 'ದಿ ವೋಯೆಜ್ ದ ಲಾಸ್ಟ್ ಗೇಮ್', 'ದ ಫೂಲ್ಸ್ ಅರ್ಕೆಷ್ಟ್ರಾ' ಶಿಲ್ಪಗಳನ್ನು ಇಲ್ಲಿ ಹೆಸರಿಸಬಹುದು. ಕಂಟೇನರ್ ಸೀರಿಸ್ ಶಿಲ್ಪಗಳೂ 'ಆಂಟಿ ಆರ್ಟ್' ಅಂದರೆ ಸಮಾಜದ ವ್ಯವಸ್ಥೆ ಮತ್ತು ಶಿಲ್ಪಗಳನ್ನು ಪ್ರಸ್ತುತ ನೋಡುವ ದೃಷ್ಟಿ ಹಾಗೂ ಕಲೆಯ ಬಗ್ಗೆ ನಡೆಯುತ್ತಿರುವ ಎಲ್ಲ ಚರ್ಚೆಗಳ ಸಾಂಪ್ರದಾಯಕ ಕ್ಲೀಷೆಗಳ ವಿರುದ್ಧ ಭುಗಿಲೆದ್ದ ಸಿಟ್ಟನ್ನು ಒಳಗೊಂಡಿವೆ. ಅವರ ಶಿಲ್ಪಗಳಲ್ಲಿ ಕಂಡು ಬರುವ ಔದಾಸೀನ್ಯ ಮತ್ತು ಆಕರ್ಷಕವಾದ ವ್ಯಂಗ್ಯದ ನಡುವೆಯೂ ಇರುವ ಹುಡುಗಾಟಿಕೆಯ ಧ್ವನಿ ಇಂಥ ವಿರೋಧಗಳು ವೀಕ್ಷಕನನ್ನು ಆ ಕೃತಿಗಳೊಂದಿಗೆ ನೇರವಾದ ಆಂತರಿಕ ಸಂವಾದಕ್ಕಿಳಿಯುವಂತೆ ಆಹ್ವಾನಿಸುತ್ತವೆ.

ವಿಭಿನ್ನ ಸಂಸ್ಕೃತಿಗಳ ನಡುವೆಯೂ ನಮ್ಮವರ ಹಲವು ಶಿಲ್ಪಗಳು ಪಶ್ಚಿಮದ ಪ್ರಭಾವಗಳನ್ನು ಅರಗಿಸಿಕೊಂಡು ತಾಂತ್ರಿಕ ಆವಿಷ್ಕಾರಗಳನ್ನು ಅಳವಡಿಸಿಕೊಂಡು ಇಂದು ಅಂತರಾಷ್ಟ್ರೀಯ ಮಟ್ಟದಲ್ಲೂ ದಿಟ್ಟವಾಗಿ ನಿಲ್ಲಬಲ್ಲ ಸಾಮರ್ಥ್ಯವನ್ನು ಹೊಂದಿವೆ. ಪಶ್ಚಿಮ ಪೂರ್ವಗಳ ಮುಖಾಮುಖಿಯಾದ ಇಂದಿನ ಸಂದರ್ಭದ ನಮ್ಮ ಆಧುನಿಕ ಸಂವೇದನೆಯ ಶಿಲ್ಪಗಳ ಸೃಷ್ಟಿಗಳಲ್ಲಿ ತಮ್ಮ ಐಡೆಂಡಿಟಿಯನ್ನು ಸಾಧಿಸುವುದುರೊಂದಿಗೆ ಸಾಂಸ್ಕೃತಿಕ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದ ಸವಾಲುಗಳನ್ನು ಎದುರಿಸಿ, ಅಂತರಾಷ್ಟ್ರೀಯ ಸತ್ವಗಳನ್ನು ಅರಗಿಸಿಕೊಳ್ಳುವ ಆಶಯವನ್ನು ಗುರುತಿಸಬಹುದು. ನಮ್ಮ ಶಿಲ್ಪಿಗಳು ವಿಶ್ವದ ವೈವಿಧ್ಯಮಯ ಕಲೆಯನ್ನು ನೋಡುವ, ಹಲವರಲ್ಲಿ ಕಲಿಯುವ, ಅನುಭವಗಳ ಆಳ ಹರವುಗಳನ್ನು ವಿಸ್ತರಿಸಿಕೊಳ್ಳುವ ಅವಕಾಶ ಹೊಂದಿದ್ದಾರೆ. ನಮ್ಮಲ್ಲಿ ಈಗತಾನೇ ಕಲಾವಿದರ ವರ್ಣಚಿತ್ರಗಳನ್ನು ಕೊಂಡು ಸಂಗ್ರಹಿಸಲಾರಂಭಿಸಿರುವ ಕೆಲವರಾದರೂ ಶಿಲ್ಪಗಳನ್ನು ಕೊಳ್ಳುವ, ಸಂಗ್ರಹಿಸುವ ಅಭ್ಯಾಸ ಬೆಳೆಸಿಕೊಳ್ಳಬಹುದು. ವಾಣಿಜ್ಯ ಸಂಸ್ಥೆಗಳು ನಮ್ಮ ಶಿಲ್ಪಿಗಳ ಭಿತ್ತಿ ಶಿಲ್ಪಿಗಳಿಗೆ ಕಾರಣವಾಗಿದೆ.

ಆಧುನಿಕ ದೃಷ್ಟಿಯ ಶಿಲ್ಪಗಳನ್ನು ಪ್ರತಿಷ್ಠಾಪಿಸುವ, ಶಿಲ್ಪೋಧ್ಯಾನಗಳ ಪ್ರಯತ್ನಗಳು ದೊಡ್ಡ ರೀತಿಯಲ್ಲಿ ಆಗಬೇಕಿದೆ.

ಅಪ್ರಕುಟ್ಟನ್ ಆಚಾರ್, ವಿ.ಗೋಪಾಲ್, ಆರ್.ಎಂ. ಹಡಪದ, ಕೆ.ವಿ.ಸೋಮಶೇಖರ ಸಹ ಶಿಲ್ಪ ಮಾಧ್ಯಮದಲ್ಲಿ ಕೆಲವು ಶಿಲ್ಪಗಳನ್ನು ರಚಿಸಿದ್ದು, ಅವುಗಳಲ್ಲಿ ಅಮೂರ್ತತೆಯ ರೂಪಗಳನ್ನು ಕಾಣಬಹುದು. ವೆಂಕಟಾಚಲಪತಿ, ಯು. ಭಾಸ್ಕರರಾವ್, ಬಾಲನ್ ನಂಬಿಯಾರ್, ಯೂಸೂಫ್, ವಿ.ಎ.ದೇಶಪಾಂಡೆ, ಎಸ್.ಶ್ಯಾಮಸುಂದರ, ಜಾನ್‌ದೇವರಾಜ್, ಮುಂತಾದವರು ವಿವಿಧ ಮಾಧ್ಯಮಗಳಾದ ಕಲ್ಲು, ಮರ, ಕಬ್ಬಿನ, ಪೈಭರ್‌ಗ್ಲಾಸ್‌ಗಳಲ್ಲಿ, ಮೈವಳಿಕೆ, ವೈವಿಧ್ಯಮಯ ಕಲ್ಪನೆ, ಅವಕಾಶಗಳಲ್ಲಿ ಹೊಸತನ, ಸಂಯೋಜನೆ, ಸಮಕಾಲೀನತೆಯ ಬದುಕು, ಪರಿಸರದ ಪ್ರಜ್ಞೆ ಕಾಣಬಹುದು. 1980ರಲ್ಲಿ ಮಾನವಾಕೃತಿಗಳ ವಸ್ತು ಬಳಕೆ ಪ್ರಧಾನವಾಗಿತ್ತು. ಎನ್. ಪುಷ್ಪಮಾಲರ ಟೆರ್ರಾಕೋಟಾ ಶಿಲ್ಪಗಳು ಮಹಿಳೆಯ ವೈಯಕ್ತಿಕ ಜಗತ್ತು ಮತ್ತು ಜನಪ್ರಿಯ ಸಂವೇದನಾಶೀಲತೆಯನ್ನು ಅನ್ವೇಷಿಸಿತು.

ವಿಶಿಷ್ಟವಾದ ಲೋಹದ ಹಾಳೆಗಳಿಂದ ಎಲ್.ಪಿ.ಅಂಚನ್ ಮತ್ತು ಎಸ್.ಜಿ.ವಾಸುದೇವ, ಜಿ.ಎಸ್.ಶೆಣೈ ಅವರು ವಿಶಿಷ್ಟ ಶೈಲಿಯ ತಾಮ್ರ ಮತ್ತು ಲೋಹದ ಉಬ್ಬು ಶಿಲ್ಪಗಳು ಹಾಗೂ ಎಂ. ರಾಮಮೂರ್ತಿ, ನಟರಾಜ ಶರ್ಮಾ, ಎನ್.ಮರಿಶಾಮಾಚಾರ್, ಕೃಷ್ಣದೇವಾಡಿಗ, ಜಿ.ಜಯಕುಮಾರ, ಕೆ.ಜಿ.ಅರುಣ, ಎಂ.ಸಿ ರಮೇಶ, ಓಂ ಪ್ರಕಾಶ, ಪಿ.ನಾಗಪ್ಪ, ಎನ್.ಎಸ್.ಪ್ರದೀಪಕುಮಾರ್, ವಿಜಯರಾವ್ ಮುಂತಾದವರು ವಿವಿಧ ಮಾಧ್ಯಮಗಳಲ್ಲಿ ಶಿಲ್ಪಗಳನ್ನು ರಚಿಸಿದ್ದು, ಇವರು ರಚಿಸಿರುವ ಶಿಲ್ಪಗಳ ವೈವಿಧ್ಯತೆ, ಪ್ರಾದೇಶಿಕ ಒಲವು ಹಾಗೂ ರಾಷ್ಟ್ರೀಯ ಮುಖ್ಯವಾಹಿನಿಯ ಭಾಗವಾಗಿವೆ. ಶಿಲ್ಪಕಲೆ ಈಗ ವಿಸ್ತಾರವಾಗಿ ಬೆಳೆಯುತ್ತಿದ್ದು, ಜನರ ಗಮನ ಸೆಳೆಯುತ್ತಿದೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಉದ್ಯಾನದಲ್ಲಿರುವ 'ಸಮೂಹ ಶಿಲ್ಪ' ಮತ್ತು ಕನ್ನಡ ಭವನದ ಮುಂಭಾಗದಲ್ಲಿರುವ 'ಶಿಲ್ಪವನ' ಹಾಗೂ ಧಾರವಾಡದ ಸರ್ಕಾರಿ ಕಲಾ ಗ್ಯಾಲರಿಯ ಆವರಣದಲ್ಲಿರುವ 'ಸಮೂಹ ಶಿಲ್ಪ'ಗಳು ಇದೇ ರೀತಿಯಾಗಿ ಇರುವ ಹಂಪಿಯ

ಕನ್ನಡ ವಿಶ್ವವಿದ್ಯಾಲಯದ ಶಿಲ್ಪವನದ ಶಿಲ್ಪಗಳು ಇದಕ್ಕೆ ಸಾಕ್ಷಿಯಾಗಿದೆ. ಕರ್ನಾಟಕ ಸರ್ಕಾರ ಶಿಲ್ಪಕಲೆಯ ಅಭಿವೃದ್ಧಿಗಾಗಿ ರಾಷ್ಟ್ರದಲ್ಲೇ ಪ್ರಥಮವಾಗಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯನ್ನು ಸ್ಥಾಪಿಸಿ ಅಮೂಲ್ಯವಾದ ಕಾರ್ಯನಿರ್ವಹಿಸುತ್ತಿರುವುದು ಗಮನಾರ್ಹವಾಗಿದೆ.

ಅನಂತರ ಶಿಲ್ಪಕಲಾ ಬೆಳವಣಿಗೆಯಲ್ಲಿ ಕೆಲವು ಪ್ರಜ್ಞಾವಂತ ಯುವ ಶಿಲ್ಪಿಗಳು, ಹೊಸ ಸಾಧ್ಯತೆಗಳ ಅನ್ವೇಷಣೆಯತ್ತ ಒಲವನ್ನು ತೋರಿದರು. ಇವರು ಆಧುನಿಕ ಶಿಲ್ಪಕಲೆಯ ಆಸ್ತಿಭಾರದ ಗುಣಮಟ್ಟವನ್ನು ನಿರಾಕರಿಸಿದರು. ವಿವಿಧ ಬದಲಾವಣೆಗಳು ಪಶ್ಚಿಮದಿಂದ ಬಂದಿದ್ದರೂ, ಪರಿಕಲ್ಪನಾತ್ಮಕ ಭೂದೃಶ್ಯ, ಇನ್‌ಸ್ಟಾಲೇಷನಗಳು ಅತ್ಯಂತ ಪ್ರಭಾವ ಬೀರಿ ತನ್ನ ಪರಿಸರದ ಭೂಮಿಯ ಅನುಭವದ ಹಾಗೂ ಜನನಿಬಿಡವಾದ ದೂರದ ಸ್ಥಳದಲ್ಲಿ ಕೆಲವರು 'ಅರ್ಥ ಆರ್ಟ್ಸ್' ಸೃಷ್ಟಿಸಿದರು. ಇದು ನೋಡುಗರಿಗೆ ಹೊಸ ಅನುಭವ ನೀಡಿತು. ಕಿರಣ್ ಸುಬ್ಬಯ್ಯ, ಸುರೇಶ ಕುಮಾರ್. ಎಂ.ಎಸ್.ಉಮೇಶ್, ಶ್ರೀನಿವಾಸ್ ಪ್ರಸಾದ ಶ್ಯಾಮಲ, ರಂಜನಿ ಶೆಟ್ಟರ್, ಪುಷ್ಪಮಾಲಾ ಎನ್, ಎಮ್. ಶಾಂತಮಣಿ, ಶೀಲಾಗೌಡ ಮುಂತಾದವರು ಶಿಲ್ಪಕಲೆಯಲ್ಲಿ ಹೊಸ ಸಂವೇದನೆಗಳತ್ತ ಸಾಗುತ್ತಿದ್ದಾರೆ.

ಶಿಲ್ಪಶಾಸ್ತ್ರಕ್ಕೆ ಸಂಬಂಧಿಸಿದ ಪ್ರಾಚೀನ ವಿಷಯ

'ಶಿಲ್ಪಶಾಸ್ತ್ರ'[2] ವಿಷಯಕ್ಕೆ ಸಂಬಂಧಿಸಿದಂತೆ ಈ ಗ್ರಂಥಗಳ ಸಂಖ್ಯೆಯು ಬಹುಶಃ ಎರಡು ನೂರಕ್ಕಿಂತಲೂ ಅಧಿಕವಾಗಿದೆ. ಹಳೆಯ ಹಸ್ತಲಿಖಿತ ಗ್ರಂಥ ಸಂಗ್ರಹದಿಂದ ಈ ಗ್ರಂಥಗಳನ್ನು ಬೆಳಕಿಗೆ ತಂದ ವಿದ್ವಾಂಸರಲ್ಲಿ ಮಹಾಮಹೋಪಾಧ್ಯಾಯ ಪಂಡಿತ ಗಣಪತಿಶಾಸ್ತ್ರಿಯವರ ಹೆಸರು ಉಲ್ಲೇಖನೀಯ. ಅವರು ಸಂಪಾದಿಸಿದ ಶಿಲ್ಪಶಾಸ್ತ್ರದ ಗ್ರಂಥಗಳ ಹೆಸರುಗಳು ಹೀಗಿವೆ. 1) ವಾಸ್ತುವಿದ್ಯಾ, 2) ಮಯಮತಮ್, 3) ಮನುಷ್ಯಾಲಯ ಚಂದ್ರಿಕಾ 4) ಶಿಲ್ಪರತ್ನಮ್, ಮತ್ತು 5) ಸಮರಾಂಗಣ ಸೂತ್ರಧಾರಮ್. ಪ್ರಾಚೀನ ಪದ್ಧತಿಯಿಂದ ಶಿಲ್ಪಶಾಸ್ತ್ರದ ವಿಧಾನಗಳ ಅನುಸಾರ ಮೂರ್ತಿಗಳನ್ನು ನಿರ್ಮಿಸುವ, ಓಡಿಸಾದ ಶಿಲ್ಪಿಕಾರರ ಹತ್ತಿರ ಇಂದಿಗೂ ಅನೇಕ ಮಹತ್ವಪೂರ್ಣ ಹಸ್ತಲಿಖಿತ ಗ್ರಂಥಗಳು ಇದ್ದು ಈ ಪ್ರಕಾರದ ಗ್ರಂಥಗಳಲ್ಲಿ ಭುವನ ಪ್ರವೇಶ, ಶಿಲ್ಪಸದಾಜಯ ಮತ್ತು ಶಿಲ್ಪಶಾಸ್ತ್ರ ಮುಂತಾದವುಗಳ ಹೆಸರನ್ನು ಹೇಳಬಹುದು.

ಮಹಾಮಹೋಪಾಧ್ಯಯ ಪಂಡಿತ ಗೌರಿಶಂಕರ ಹರಿಚಂದ ಓಝಾ ಅವರ ಗ್ರಂಥ ಮಧ್ಯಕಾಲೀನ ಭಾರತೀಯ ಸಂಸ್ಕೃತಿ' (ಪು. 107, 1951) ಯಲ್ಲಿ ಈ ಮುಂದಿನ ಅನೇಕ ಶಿಲ್ಪವಿಷಯ ಗ್ರಂಥಗಳ ಹೆಸರನ್ನು ಕೊಡಲಾಗಿದೆ. 1) ವಾಸ್ತುಸೌಖ್ಯ, 2) ಅಪರಾಜಿತ ವಾಸ್ತುಶಾಸ್ತ್ರ 3) ಪ್ರಾಸಾಧನುಕೀರ್ತನ, 4) ಚಕ್ರಶಾಸ್ತ್ರ 5) ಚಿತ್ರಪಟ, 6) ಜಲಾರ್ಗಲ, 7) ಪಕ್ಷಿಮನುಷ್ಯಾಲಯ ಲಕ್ಷಣ, 8) ರಥಲಕ್ಷಣ 9) ವಿಮಾನವಿದ್ಯಾ, 10) ವಿಮಾನಲಕ್ಷಣ, 11) ವಿಶ್ವಕರ್ಮಿಯ, 12) ಕಾತುಕ ಲಕ್ಷಣ, 13) ಮೂರ್ತಿ ಲಕ್ಷಣ, 14) ಪ್ರತಿಮಾದ್ರವ್ಯಾದಿ ವಚನ, 15) ಸಕಲಾಧಿಕಾರ, 16) ಸಾರಸ್ವತೀಯ ಸಮರಾಂಗಣ ಸೂತ್ರಧಾರ, 17) ವಿಶ್ವವಿದ್ಯಾಭರಣ, 18) ವಿಶ್ವಕರ್ಮ ಪ್ರಕಾಶ, 19) ಸಮರಾಂಗಣ ಸೂತ್ರಧಾರ, 20) ಮಯ ಶಿಲ್ಪ ಮತ್ತು 21) ವಿಶ್ವಕರ್ಮಿಯ ಶಿಲ್ಪ ಮುಂತಾದವುಗಳು.

ಶಿಲ್ಪಶಾಸ್ತ್ರ ಮತ್ತು ವಾಸ್ತುಶಾಸ್ತ್ರಕ್ಕೆ ಸಂಬಂಧಪಟ್ಟ ಗ್ರಂಥಗಳಲ್ಲಿ ಗನ್ನಮಾಚಾರ್ಯನ 'ಮಯಮತ ಶಿಲ್ಪಶಾಸ್ತ್ರ', ಕಶ್ಯಪನ 'ಅಂಶುಮದ ಭೇದ', 'ವಿಶ್ವಕರ್ಮೀಯ ಶಿಲ್ಪ' (ಅಥವಾ

ವಿಶ್ವಕರ್ಮ ಪ್ರಕಾಶ, ವಿಶ್ವಕರ್ಮ ವಾಸ್ತುಶಾಸ್ತ್ರ, ವಿಶ್ವಕರ್ಮೀಯ ಶಿಲ್ಪಶಾಸ್ತ್ರ), ಅಗಸ್ತ್ಯನಿಂದ ರಚಿತವಾದ 'ಅಗಸ್ತ್ಯ ಸಕಲಾಧಿಕಾರ, ಸನತ್ಕುಮರ ಕೃತ ಸನತ್ಕುಮಾರ ವಾಸ್ತುಶಾಸ್ತ್ರ', (ಅಥವಾ ವಾಸ್ತುಶಾಸ್ತ್ರ, ಪ್ರಸಾದಮಂಡನ ವಾಸ್ತುಶಾಸ್ತ್ರ) ಇತ್ಯಾದಿ ಗ್ರಂಥಗಳ ಹೆಸರು ಉಲ್ಲೇಖನೀಯ, ಇವೆಲ್ಲವುಗಳಲ್ಲದೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನಸಾರ, ಮಯಮತ, ಕಶ್ಯಪ, ವಿಶ್ವಕರ್ಮ, ಅಗಸ್ತ್ಯ, ಪೌಲಸ್ತ್ಯ, ನಾರದ ನಾರಾಯಣ, ಮೌಷಲ್ಯ, ಶೇಷಭಾಷ್ಯ, ಚಿತ್ರಸಾರ, ಸಾರಸ್ವತ, ವಿಶ್ವಸಾರ, ಚಿತ್ರಜ್ಞಾನ ಕಂಪಿಜಲ ಸಂಹಿತಾ, ಕೌಮುದೀ, ಬ್ರಹ್ಮಶಿಲ್ಪ, ಬ್ರಹ್ಮಯಾಮಲ, ದೀಪ್ತಿತಂತ್ರ ಮತ್ತು ದೀಪ್ತಿಸಾರ ಮುಂತಾದ 19 ಗ್ರಂಥಕಾರರ ಮತ್ತು ಗ್ರಂಥಗಳ ಅಬಿಪ್ರಾಯಗಳನ್ನು ಉಲ್ಲೇಖಿಸಿರುವ ಒಂದು ಸಂಗ್ರಹ ಗ್ರಂಥವೂ ಇದೆ.

ಡಾ. ದ್ವಿಜೇಂದ್ರನಾಥ ಶುಕ್ಲ ಅವರು ಭೋಜನ 'ಸಮರಾಂಗಣ ಸೂತ್ರಧಾರ'ದ ಬಗೆಗೆ ಸಂಶೋಧನೆ ಮಾಡಿದ್ದು ಐದು ಖಂಡಗಳಲ್ಲಿ ಪ್ರಕಾಶಿತಗೊಳಸಿದ್ದಾರೆ. ಅವರು ತಮ್ಮ ಈ ಸಂಶೋಧನ ಪ್ರಬಂಧದಲ್ಲಿ ಶಿಲ್ಪಶಾಸ್ತ್ರದ ವಿಷಯದಲ್ಲಿ ಸಾಧ್ಯವಾದಷ್ಟೂ ಸಮಸ್ತ ಸಾಮಗ್ರಿಯ ವಿಶ್ಲೇಷಣೆ ಮಾಡಿದ್ದಾರೆ. ಈ ಗ್ರಂಥದ ಪ್ರಥಮ ಖಂಡದಲ್ಲಿ ಅವರು ಶಿಲ್ಪಶಾಸ್ತ್ರ ವಿಷಯಕ್ಕೆ ಸಂಬಂಧಿಸಿದ 194 ಗ್ರಂಥಗಳ ಸೂಚಿಯನ್ನು ನೀಡಿದ್ದಾರೆ. ಇದಲ್ಲದೆ ಡಾ.ಪಿ.ಕೆ.ಆಚಾರ್ಯ ಅವರು 7 ಭಾಗಗಳಲ್ಲಿ ಸಂಪಾದಿಸಿದ ಮಾನಸಾರ ಗ್ರಂಥದಲ್ಲಿ 31 ಪೂರ್ವಿಕ ಆಚಾರ್ಯರ ಉಲ್ಲೇಖವಿದೆ. ಇದರಿಂದ ವಾಸ್ತುಶಿಲ್ಪದ ಬಗ್ಗೆ ಲಕ್ಷಣ ಗ್ರಂಥಗಳ ರಚನೆಯು ತುಂಬ ಪ್ರಾಚೀನ ಕಾಲದಿಂದಲೇ ಪ್ರಾರಂಭವಾಗಿತ್ತು ಎಂದು ತಿಳಿದುಬರುತ್ತದೆ.

ಈ ರೀತಿಯಲ್ಲಿ ಶಿಲ್ಪಕ್ಕೆ ಸಂಬಂಧಿಸಿದ ರಚನೆಯೂ ವಿಶ್ವಕರ್ಮನಿಂದ ಆರಂಭವಾಗಿ ಸುಮಾರು 16ನೇ ಶತಮಾನದವರೆಗೆ ನಿರಂತರವಾಗಿಯೂ ನಡೆದಿದೆ. ಶ್ರೀಕುಮಾರ ಅವರ 'ಶಿಲ್ಪರತ್ನ' ವು ಗ್ರಂಥವು ಅಂತಿಮ ಪ್ರೌಢಗ್ರಂಥವಾಗಿದ್ದು, ಇದನ್ನು 16ನೇ ಶತಾಬ್ಧಿಯಲ್ಲಿ ರಚಿಸಲಾಯಿತು.

ಅಡಿಟಿಪ್ಪಣಿಗಳು:

1) ಎನ್.ಮರಿಶಾಮಾಚಾರ್ : ಭಾರತೀಯ ಶಿಲ್ಪಕಲೆ ಪುಟ–110

2) ಎನ್.ಮರಿಶಾಮಾಚಾರ್ : ಭಾರತೀಯ ಶಿಲ್ಪಕಲೆ ಪುಟ–5

3) ಕನಕಾಮೂರ್ತಿ: ಹೌದು ಇದು ನಾನೇ! (ಆತ್ಮಚರಿತ್ರೆ)

4) ಕನಕಾಮೂರ್ತಿ: ಹೌದು ಇದು ನಾನೇ! (ಆತ್ಮಚರಿತ್ರೆ)

ಅಧ್ಯಾಯ–ಮೂರು

ಕರ್ನಾಟಕದ ಸಾಂಪ್ರದಾಯಕ ಶಿಲ್ಪಕಲಾವಿದೆಯರ ಜೀವನ ಮತ್ತು ಕಲಾಕೃತಿಗಳು

ಕರ್ನಾಟಕದಲ್ಲಿ ಸಾಂಪ್ರದಾಯಕ ಶಿಲ್ಪಕಲೆಯು ಪರಂಪರಾನುಗತವಾಗಿ ಬೆಳೆದು ಬಂದ ಕಲೆಯಾಗಿದೆ. ಸಮಾಜದಲ್ಲಿ ಶಿಲ್ಪಕಲೆಯು ಪುರುಷ ಪ್ರಧಾನವೆಂಬ ಹಾಗೂ ಸೀಮಿತ ಜಾತಿಯ ವರ್ಗದವರು ಮಾತ್ರ ಮಾಡುವರೆಂಬ ನಂಬಿಕೆ ಮತ್ತು ಅಪನಂಬಿಕೆ ರೂಢಿಯಲ್ಲಿತ್ತು. ಆದರೆ ಇದೆಲ್ಲವನ್ನು ಮೀರಿ ಮಹಿಳಾ ಶಿಲ್ಪ ಕಲಾವಿದರು ಕರ್ನಾಟಕದಲ್ಲಿ ಹುಟ್ಟಿಕೊಂಡರು. ಮಹಿಳೆಯರು ಕೂಡ ಶಿಲ್ಪಗಳನ್ನು ಮಾಡಬಹುದು ಎಂದು ನಿರೂಪಿಸಿದರು. ಸಾಂಪ್ರದಾಯ ಶಿಲ್ಪಕಲೆಯು ಬಹು ಕಠಿಣವಾಗಿದ್ದು ತನ್ನದೇ ಆದ ನಿಯಮಗಳೊಂದಿಗೆ ಬೆಳೆದು ಬಂದಿರುವ ಕಲೆಯಾಗಿದೆ. ಆದಕಾರಣ ಕರ್ನಾಟಕದಲ್ಲಿ ಕೆಲವು ಸಾಂಪ್ರದಾಯಕ ಮಹಿಳಾ ಕಲಾವಿದರನ್ನು ಗುರುತಿಸಬಹುದಾಗಿದೆ. ಅದರಲ್ಲಿ ಪ್ರಮುಖರು ಶಿಲ್ಪ ಎಂಬ ಪದವು ಸೃಜಿಸು ಎಂಬ ಅರ್ಥವನ್ನು ಸೃಜನಶೀಲತೆಯೇ ಶಿಲ್ಪಕಲೆಯ ಜೀವಾಳ. ಹೀಗಾಗಿ ಶಿಲ್ಪ ರಚನಾಕ್ರಮವು ಭಾರತೀಯ ಸಂಸ್ಕೃತಿಯ ಕೈಗನ್ನಡಿಯಾಗಿ ನಿರಂತರವಾಗಿ ಕಾಲದಿಂದ ಕಾಲಕ್ಕೆ ಸಾಗಿ ಬರುತ್ತಲಿದೆ. ವೈಜ್ಞಾನಿಕ ನೆಲೆಯನ್ನು ಪಡೆದ ಶಿಲ್ಪರಚನಾಕ್ರಮವು ಶಾಸ್ತ್ರ ಮತ್ತು ಪ್ರಯೋಗಗಳ ಆಧಾರದ ಮೇಲೆ

ರೂಪುಗೊಂಡು ಶಿಲ್ಪಿಯ ಅಥವಾ ರೂವಾರಿಯ ಕೈಯಲ್ಲಿ ಕಲೆಯಾಗಿ ಅರಳಿದೆ. ಶಿಲ್ಪಕಲೆಯು ಕಲಾ ಇತಿಹಾಸದ ಸೃಷ್ಟಿಯಿಂದ ಒಂದು ಅಗ್ರ ಸಾಧನೆಯ ರೂಪದಲ್ಲಿ ವಿಕಸಿತಗೊಂಡಿದೆ. ಭಾರತೀಯ ಕಲಾಪರಂಪರೆಗೆ ವಾಸ್ತುಶಿಲ್ಪದೊಂದಿಗೆ ಸೇರ್ಪಡೆಯಾಗಿ ಬೆಳೆದು ಬಂದಿರುವ ಶಿಲ್ಪಕಲೆಯು ಮೈಲಿಗಲ್ಲಿನ ರೂಪದಲ್ಲಿದ್ದು ಆಯಾ ಕಾಲದ ಜನಜೀವನವನ್ನು ತೆರೆದಿಡುವ ಸಾಧನವಾಗಿದೆ ಹಾಗೂ ಶಿಲ್ಪಕಲಾ ರಚನೆಗಳು ಐತಿಹಾಸಿಕ ಮಾಹಿತಿಯನ್ನು ನೀಡುವ ದಾಖಲೆಗಳಾಗಿ ಇತಿಹಾಸ ರಚನಾಕ್ರಮಕ್ಕೆ ಪುಷ್ಟಿ ನೀಡುತ್ತವೆ.

ಶಿಲ್ಪಿ ರೂವಾರಿಯ ಬೆಸ (ಕಾರ್ಯ) ವಿಶಿಷ್ಟ ರೂಪದ್ದು. ಶಿಲ್ಪಿಯು ಯಾವುದೇ ಮೂರ್ತಿಯನ್ನು ಕೃತಿಯ ರೂಪದಲ್ಲಿ ತರುವಾಗ ತನ್ನ ಗುರುಪರಂಪರೆಯನ್ನು ಅನುಸರಿಸಬೇಕಾಗುತ್ತದೆ. ಅದರೊಂದಿಗೆ ಪರಂಪರಾನುಗತವಾಗಿ ಬಂದಿರುವ ಕೈಪಿಡಿ ಮತ್ತು ರಚನಾಕ್ರಮಗಳನ್ನು ಎದುರಿಗೆ ಇಟ್ಟುಕೊಳ್ಳಬೇಕಾಗುತ್ತದೆ. ಲೋಹ, ಮಣ್ಣು, ಶಿಲೆ, ಮರ, ಇಂದಿನ ಕೆಲವು ಮಾಧ್ಯಮಗಳನ್ನು ಬಳಸಿಕೊಂಡು ಆಕಾರ ಕೊಡಲು ತೊಡಗಬೇಕಾಗುತ್ತದೆ. ಆಗ ಅನೇಕ ವಿಷಯಗಳನ್ನು ಸಾಂಕೇತಿಕ ರೂಪದಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ. ತಾನು ಕೊಡುವ ಆಕಾರಕ್ಕೆ ಒಂದು ನಿರ್ದಿಷ್ಟ ಅರ್ಥ, ಚೆಲವು, ಭಾವ, ನಿಲುವು ಮತ್ತು ಸೊಬಗನ್ನು ತಾಂತ್ರಿಕ ಲಕ್ಷಣಗಳನ್ನು ಅನುವಾಗಿಸಿಕೊಂಡು ಸೇರಿಸುವುದು ಸುಲಭ ಸಾಧ್ಯವಲ್ಲ. ವೈಯಕ್ತಿಕ ಗುಣಧರ್ಮಗಳನ್ನು ಮೀರಿ ಅಲೌಕಿಕ ಅನುಭವವನ್ನು ಹೊರಸೂಸುವುದೆಂದರೆ ಶಿಲ್ಪಿಗೆ ಒಂದು ಸವಾಲೇ ಸರಿ.

ಈ ಎಲ್ಲಾ ವಿಶಿಷ್ಟ ರೀತಿನೀತಿಗಳು ಸಾಂಪ್ರದಾಯಕ ಶಿಲ್ಪಿಗಳಿಗೂ, ಸಮಕಾಲಿನ ಶಿಲ್ಪಿಗಳಿಗೂ ಅನ್ವಯಿಸುತ್ತವೆ ಸಾಂಪ್ರದಾಯಕ ಶಿಲ್ಪಿಗಳಿಗೆ ಖಚಿತವಾದ ಒಂದು ಚೌಕಟ್ಟು ವಿಗ್ರಹಶಾಸ್ತ್ರದ ಆಳವಾದ ಅಧ್ಯಯನ ಅಭ್ಯಾಸದ ಅಗತ್ಯತೆ ಇದೆ. ಸಮಕಾಲೀನ ಶಿಲ್ಪಿಗಳಿಗೆ ಹೊಸ ಪರಿಕಲ್ಪನೆಗಳನ್ನು ಆಯಾ ಮಾಧ್ಯಮಕ್ಕೆ ಅಳವಡಿಸಿ ಸೃಜನಶೀಲತೆಯನ್ನು ಮೆರೆಯುವ ಅವಕಾಶವಿರುತ್ತದೆ ಇದರೊದಿಗೆ ಭಾರತೀಯ ಜಾನಪದ ಶಿಲ್ಪ ಪರಂಪರೆಯು ಸ್ವಾಭಾವಿಕತೆ, ಪರಿಸರ ಪ್ರಜ್ಞೆ ಮತ್ತು ಸಹಜ ಗುಣಧರ್ಮ ಪ್ರತಿಪಾದನೆಗೆ ಒತ್ತುಕೊಟ್ಟು ಜನಮನವನ್ನು ಗೆಲ್ಲುತ್ತದೆ.

ಈ ರೀತಿ ಭಾರತೀಯ ಶಿಲ್ಪಕಲಾ ಬೆಳವಣಿಗೆಯಲ್ಲಿ ವೈಶಿಷ್ಟ್ಯ ಪೂರ್ಣವಾಗಿ ಬೆಳೆದುಬಂದ ಕರ್ನಾಟಕ ಶಿಲ್ಪಕಲಾ ಪರಂಪರೆಯ ವಾಹಿನಿಯನ್ನು ಇಂದಿಗೂ ಶಿಲ್ಪಿಗಳು ಬೆಳೆಸಿಕೊಂಡು ಬರುತ್ತಿರುವುದು ನಮಗೆ ಕಾಣಸಿಗುತ್ತದೆ. ಈ ರೀತಿಯಾಗಿ ಬೆಳೆದು ಬಂದ ಕಲಾವಿದರಲ್ಲಿ ಕೆಲವು ಪ್ರಮುಖ ಮಹಿಳಾ ಶಿಲ್ಪಕಲಾವಿದರ ಜೀವನ ಮತ್ತು ಶಿಲ್ಪಕೃತಿಗಳನ್ನು ಅಧ್ಯಯನ ಮಾಡಲಾಗಿದೆ.

ದೇವರ ವಿಗ್ರಹ ಪ್ರತಿಷ್ಠಾಪನೆಯ ವಿಧಿವಿಧಾನಗಳು:

ಹಿಂದೂ ದೇವಾಲಯಗಳು ಕೇವಲ ಮೂರ್ತಿಗಳಿರುವ, ಶಿಲ್ಪಗಳಿರುವ, ಆರಾಧಿಸುವ ಮತ್ತು ಪ್ರಾರ್ಥಿಸುವ ಮಂದಿರಗಳಲ್ಲ. ಬದಲಿಗೆ ಆಗಮಶಾಸ್ತ್ರ ಮತ್ತು ವಾಸ್ತುಶಾಸ್ತ್ರಗಳ ಆಧಾರದ ಮೇಲೆ ಪ್ರಾಣಶಕ್ತಿಯನ್ನು ಹೊರಹೊಮ್ಮಿಸುವಂತೆ ಹಾಗೂ ಆ ಮೂಲಕ ಮನಸ್ಸಿನ ಏಕಾಗ್ರತೆಯನ್ನು ಮೂಡಿಸುವಂತೆ ಗರ್ಭಗುಡಿಯಲ್ಲಿ ಪ್ರಧಾನ ಮೂರ್ತಿಗಳನ್ನು ಪ್ರತಿಷ್ಠಾನ ಮಾಡಲಾದ ಪವಿತ್ರ ಸ್ಥಳಗಳು.

ನದಿ ತೀರ, ಪರ್ವತ, ಗ್ರಾಮದ ಮಧ್ಯಭಾಗ ಅಥವಾ ಹಿಂದೆ ಮಹಾತ್ಮರು ವಾಸ ಮಾಡಿ ಸಿದ್ಧಿ ಪಡೆದ ಸ್ಥಳಗಳನ್ನು ಆಯ್ಕೆ ಮಾಡಿ ಭೂ ಶೋಧನೆ ನಡೆಸಿ ಅಲ್ಲಿ ವಾಸ ಮಾಡಿರಬಹುದಾದ ಕ್ಷುದ್ರ ಶಕ್ತಿಗಳನ್ನು ಬೇರೆಡೆಗೆ ವರ್ಗಾಯಿಸುತ್ತಾರೆ. ಅದರಲ್ಲಿ ವಾಸ್ತು ಪುರುಷನು ಇತರ ದೇವತೆಗಳನ್ನು ಆಹ್ವಾನಿಸಿ ಪೂಜಿಸಲಾಗುವುದು.

ಶುಭ ಮಹೂರ್ತದಲ್ಲಿ ಈಶಾನ್ಯ ದಿಕ್ಕಿನಲ್ಲಿ ಶಿಲಾನ್ಯಾಸ ಮಾಡಿ ದೇವಾಲಯವನ್ನು ಕಟ್ಟಲು ಶುರುಮಾಡುವವರು. ದೇವಾಲಯವನ್ನು ನಿರ್ಮಿಸುವ ಯಜಮಾನರು ಈ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಬಲ್ಲ ಆಚಾರ್ಯ ಮತ್ತು ಶಿಲ್ಪಿಗಳನ್ನು ಆರಿಸಿಕೊಳ್ಳುತ್ತಾರೆ. ಆಚಾರ್ಯನು ವೇದ ಆಗಮ ಶಾಸ್ತ್ರಗಳಲ್ಲಿ ನಿಪುಣನಾಗಿ, ಸದಾಚಾರ ಸಂಪನ್ನನಾಗಿರಬೇಕು.

ಗರ್ಭಗುಡಿಯ ರಚನೆಯು ತೀರ ವಿಶಿಷ್ಟವಾದುದು.

1. ಆಧಾರ ಶಿಲೆ
2. ನಿಧಿ ಕುಂಭ
3. ನಂತರ ಕ್ರಮವಾಗಿ ಶಿಲೆಯಲ್ಲಿ ಮಾಡಿದ ಪದ್ಮ
4. ಕೂರ್ಮ
5. ಇದರ ಮೇಲೆ ಮತ್ತೆ ಬೆಳ್ಳಿಯ ಪದ್ಮ

6. ಬೆಳ್ಳಿಯ ಕೂರ್ಮಗಳನ್ನ ಸ್ಥಾಪಿಸುತ್ತಾರೆ.

ದೇವಾಲಯ ಕಟ್ಟಡ ಪೂರ್ತಿ ಆದ ಮೇಲೆ ಯಾಗಶಾಲೆಯಲ್ಲಿ ವಿಧ್ಯುಕ್ತವಾಗಿ ರಚಿತವಾದ ಮಂಡಲಗಳ ಮೇಲೆ ಸಾವಿರದ ಸಂಖ್ಯೆಯವರೆಗೆ ಕುಂಭ (ಕಲಶಗಳನ್ನು) ಇಟ್ಟು ಅವುಗಳಲ್ಲಿ ನೀರು, ಪಂಚಾಮೃತ, ಗಂಧ, ದ್ರವ್ಯ ಮುಂತಾದ ವಸ್ತುಗಳನ್ನು ಇಟ್ಟು ಪೂಜಿಸಲಾಗುತ್ತದೆ. ಅಂತೆಯೇ ಅಗ್ನಿ ಕುಂಡಗಳಲ್ಲಿ ನಾನಾ ರೀತಿಯ ಹೋಮ ಹವನಗಳು ನಡೆಯುತ್ತವೆ. ನಂತರ ದೇವತೆಗೆ ಸಂಬಂಧಿಸಿದ ಯಂತ್ರವನ್ನು ವಿಗ್ರಹದ ಕೆಳಗೆ ಸ್ಥಾಪಿಸುತ್ತಾರೆ. ಆ ನಂತರ ವಿಗ್ರಹಕ್ಕೆ ಪ್ರಾಣ ಪ್ರತಿಷ್ಠಾಪನೆ, ಕುಂಬಾಭಿಷೇಕ, ಅರ್ಚನೆಗಳು ನಡೆಯುತ್ತವೆ. ಈ ಧಾರ್ಮಿಕ ಕಾರ್ಯಕ್ರಮಗಳು ಒಂದು ವಾರದವರೆಗೆ ನಡೆಯುತ್ತವೆ. ಈ ಸಮಯದಲ್ಲಿ ವೇದಶಾಸ್ತ್ರ ಪಾರಾಯಣ, ಪ್ರವಚನ, ಸಂಕೀರ್ತನೆ, ಸಂಗೀತ, ನಾಟ್ಯ, ಅನ್ನದಾನ, ಮುಂತಾದವು ಸಂಭ್ರಮದಿಂದ ಸಾಗುತ್ತವೆ. ಕೊನೆಯಲ್ಲಿ ಯಜಮಾನ, ಆಚಾರ್ಯ, ಸ್ಥಪತಿ, ಮತ್ತು ಇತರ ಕಾರ್ಯಸ್ಥರು, ಅವಭೃತಸ್ನಾನ ಮಾಡಿ ತಮ್ಮ ದೀಕ್ಷೆಯನ್ನು ಮುಕ್ತಾಯಗೊಳಿಸಿ ಈ ಮಹತ್ ಕಾರ್ಯವನ್ನು ಯಶಸ್ವಿಯಾಗಿ ಸಮಾಪನಗೊಳಿಸಿದ ಧನ್ಯತಾ ಮನೋಭಾವ ತಳೆಯುತ್ತಾರೆ.

ಸರೋಜಾದೇವಿ ಆಚಾರ್ಯ

ಕರ್ನಾಟಕದಲ್ಲಿ ಆರನೇಯ ಶತಮಾನದಿಂದ ಹಿಡಿದು ಇಂದಿನವರೆಗೂ ಸಾವಿರಾರು ಆಚಾರ್ಯರ ಹೆಸರುಗಳು ಅವರು ಶಿಲ್ಪ, ವಾಸ್ತುಶಿಲ್ಪ ಕ್ಷೇತ್ರಕ್ಕೆ ನೀಡಿದ ಕಾಣಿಕೆಗಳೊಂದಿಗೆ ದೊರೆಯುತ್ತವೆ. ಆದರೆ ಅವೆಲ್ಲಾ ಪುರುಷರದೇ ಆಗಿರುವುದು ಶಾಸ್ತ್ರ ಸಮ್ಮತವಾಗಿರಬಹುದಾದರೂ ಮಹಿಳಾವರ್ಗ ಈ ಒಂದು ಕಲೆಯಿಂದ ದೂರ ಉಳಿಯುವಂತಾಗಿದ್ದು ಸತ್ಯ. ಆದರೆ ಅಂತಹ ಅಪವಾದದಿಂದ ಮುಕ್ತಗೊಳಿಸಿ ಇಪ್ಪತ್ತನೇ ಶತಮಾನದ ಹಲವಾರು ಸ್ತ್ರೀ ಶಿಲ್ಪಿಗಳಲ್ಲಿ ದೇವನಹಳ್ಳಿಯಲ್ಲಿ 30.01.1948ರಲ್ಲಿ ಜನಿಸಿದ ಶಿಲ್ಪಿ ಶ್ರೀಮತಿ ಸರೋಜಾದೇವಿ ಆಚಾರ್ಯರು ಅತ್ಯಂತ ಗಣನೀಯರಾಗಿದ್ದಾರೆ. ಖ್ಯಾತ ಶಿಲ್ಪಿ ಶ್ರೀ ಎ.ಸಿ.ಎಚ್. ಆಚಾರ್ಯರು ಇಂದು ನಮ್ಮೊಂದಿಗೆ ಇಲ್ಲವಾದರೂ ಶಿಲ್ಪಕಲಾ ಎನ್ನಬಹುದಾದ ನಿಲುವುಗಳು ಶಿಲ್ಪಕಲಾ ಕ್ಷೇತ್ರದಲ್ಲಿ ಅವರು ತೆಗೆದುಕೊಂಡ ಕ್ರಾಂತಿಕಾರಿ ಎನ್ನಬಹುದಾದ ನಿಲುವುಗಳು ಇಡೀ ಕ್ಷೇತ್ರಕ್ಕೆ ಹೊಸರೂಪವೊಂದನ್ನು ನೀಡಿತೆನ್ನಬಹುದು. ಮುಸ್ಲಿಂ ತರುಣ, ತರುಣಿಯರಿಗಾಗಿ ಹಾಗೂ ಯುವ ಕಲಾವಿದರಿಗೆ ಆಶ್ರಯ ನೀಡಿದ್ದು, ಆಚಾರ್ಯರ ಪತ್ನಿ ಶ್ರೀಮತಿ ಸರೋಜದೇವಿಯವರೂ ಮುಂದುವರಿಸಿದ್ದಾರೆ. ಆಚಾರ್ಯರ ದೇವನಹಳ್ಳಿಯ ಶಿಲ್ಪ ಕಲಾಶಾಲೆಯಲ್ಲಿಯೇ ಕಲಿತು ಆಚಾರ್ಯರೊಂದಿಗೆ ಹಗಲಿರುಳು ದುಡಿದು, ಆಚಾರ್ಯರ ನಂತರವೂ ಶಾಲೆಯನ್ನು ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ.

ಶ್ರೀಮತಿ ಆಚಾರ್ಯರ 'ನಿಸರ್ಗಸುಂದರಿ' ಎಂಬ ಶಿಲ್ಪ ಕಲಾಕೃತಿಗೆ ರಾಜ್ಯ ಲಲಿತಕಲಾ ಅಕಾಡೆಮಿಯ ವಾರ್ಷಿಕ ಪ್ರದರ್ಶನದಲ್ಲಿ ಬಹುಮಾನವೂ, ಮತ್ತೊಂದು ತೈಲವರ್ಣದ 'ಲೈಫ್' ಎಂಬ ಕಲಾಕೃತಿ ಹಾಲೆಂಡ್ ದೇಶದ ಪ್ರದರ್ಶನವೊಂದಕ್ಕೆ ಆಯ್ಕೆಯಾಗಿದ್ದೂ ಶ್ರೀಮತಿಯವರ ಕಲಾ ಸಾಧನೆಗೆ ಸಂದ ಗೌರವ, ಅಂತೆಯೇ ಬೆಂಗಳೂರು ನಗರ ಮಹಿಳಾ ಮಂಡಳಿಯಿಂದ 'ವಿಶ್ವಮಹಿಳೆ–95' ಪ್ರಶಸ್ತಿ, ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಪ್ರಶಸ್ತಿ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಅವರ ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಬೆಂಗಳೂರಿನಲ್ಲಿ ನಡೆದ ಅಖಿಲ

ಭಾರತ ಮಹಿಳಾ ಕರಕುಶಲ ಶಿಲ್ಪ ಕಲಾವಿದರ ಶಿಬಿರ ರಾಜ್ಯ ಸರ್ಕಾರದ ಶಿಲ್ಪಕಲಾವಿದರ ಶಿಬಿರಗಳಲ್ಲಿ ಭಾಗವಹಿಸುವ ಅವಕಾಶ ಸಹ ಲಭ್ಯವಾಗಿತ್ತು.

ತಿರುಪತಿಯಲ್ಲಿ ಆಳೆತ್ತರದ ಶ್ರೀನಿವಾಸಮೂರ್ತಿ, ವಾರಂಗಲನಲ್ಲಿ ಅಂಜನೇಯ, ಬೆಂಗಳೂರಿನ ಖಾದಿ ಭಂಡಾರಕ್ಕೆ ಮಹಾತ್ಮಗಾಂಧಿಯವರ ಎದೆಮಟ್ಟದ ಶಿಲ್ಪ, ಚಿತ್ರದುರ್ಗಕ್ಕೆ ಗಣೇಶಮೂರ್ತಿ, ಬೆಂಗಳೂರಿನ ಶನಿಮಹಾತ್ಮ, ಪಾರ್ವತಿ ಹಾಗೂ ಗಣೇಶಮೂರ್ತಿ, ಮುಂಬಯಿಗೆ ಶ್ರೀದೇವಿ, ಭೂದೇವಿ, ನವದೆಹಲಿಗೆ ಬುದ್ಧನ ಮೂರ್ತಿ ಇತ್ಯಾದಿಗಳನ್ನು ರಚಿಸಿ ಶಿಲ್ಪ ಪರಂಪರೆಯನ್ನು ಮುಂದುವರಿಸುತ್ತಿರುವ ಶ್ರೀಮತಿ ಸರೋಜಾದೇವಿ ಆಚಾರ್ಯ ಅವರಿಗೆ 2007ನೇ ಸಾಲಿನ ಗೌರವ ಪ್ರಶಸ್ತಿ ನೀಡಿ ಶಿಲ್ಪಕಲಾ ಅಕಾಡೆಮಿಯು ಗೌರವಿಸಿದೆ.

ಕನಕಾಮೂರ್ತಿ

ಕನಕಾಮೂರ್ತಿಯವರು ತ್ರಿಪುರ ಸುಂದರಿ ಮತ್ತು ಮುತ್ತತ್ತಿ ಸುಬ್ಬುರಾವ್ ಎಂಬ ದಂಪತಿಗಳಿಗೆ ಜನಿಸಿದರು. ಕನಕಾಮೂರ್ತಿಯವರಿಗೆ ಮೊದಲಿನಿಂದಲೂ ನೋಡಿದ್ದೆಲ್ಲಾ ಕಲಿಯುವ ಆಸೆ. ಬಾಲ್ಯದಲ್ಲಿಯೇ ಕವಿತೆ, ನೃತ್ಯ, ಹಾಡು, ಸಾಹಿತ್ಯ ಹೀಗೆ ಎಲ್ಲವನ್ನು ಕಲಿಯುವ ಆಸೆ. ಟಿ.ನರಸಿಪುರದಲ್ಲಿ ಬಾಲ್ಯವನ್ನು ಕಳೆದ ಕನಕಾಮೂರ್ತಿ ಅವರು ಚೌಡಯ್ಯನವರ ಪೀಟಿಲು ವಾದನಕ್ಕೆ ಮನಸೋರೆಗೊಂಡವರು. ಅವರ ತಂದೆಯವರು ಬೆಳಗಿನ ಜಾವ 4 ಗಂಟೆಗೆ ಮಕ್ಕಳಿಗೆಲ್ಲಾ ಸಂಗೀತಾಭ್ಯಾಸ ಮಾಡಿಸುತ್ತಿದ್ದರು. ಆದ್ದರಿಂದ ಕನಕಾಮೂರ್ತಿಯವರಿಗೆ ಸಂಗೀತದಲ್ಲಿಯು ಒಲವು ಮೂಡಿತು. ಕನಕಾಮೂರ್ತಿಯವರು[3] ಪಿ.ಯು.ಸಿ ವರೆಗೂ ತಮ್ಮ ಊರಿನಲ್ಲೇ ಅಭ್ಯಾಸವನ್ನು ಮುಗಿಸಿದರು. ಓದನ್ನು ಬಹಳ ಪ್ರೀತಿಸುತ್ತಿದ್ದ ಕನಕಾರವರು ಓದಿನಲ್ಲಿ ಪ್ರಗತಿ ಹೊಂದುತ್ತಾ, ಡಾಕ್ಟರಾಗುವ ಕನಸು ಕಂಡರು. ನಂತರ ಬೆಂಗಳೂರಿನಲ್ಲಿ ಬಿ.ಎಸ್ಸಿ. ಓದಲು ವಿಜಯಾ ಕಾಲೇಜಿಗೆ ಸೇರಿಕೊಂಡರು. ಬಿ.ಎಸ್ಸಿ ನಂತರ ಮುಂದೆ ಓದಲು ಅಥವಾ ಕೆಲಸ ಮಾಡಲು ಪೋಷಕರಿಂದ ಒಪ್ಪಿಗೆ ದೊರೆಯಲಿಲ್ಲ. ನಂತರ ಅವರ ಅಣ್ಣ ಕಲಿಯುವ ಬಯಕೆಯನ್ನು ಅರಿತು ಗಾಂಧಿಬಜಾರಿನಲ್ಲಿದ್ದ ಕಲಾಮಂದಿರಕ್ಕೆ ಸೇರಿಸಿದರು. ಕಲಾಮಂದಿರದ ಕಲಿಕೆ ಕನಕಾ ಅವರಲ್ಲಿ ಉತ್ಸಾಹ ಮೂಡಿಸಿತು. ಕಲಿಕೆಗೆ ಸಹಾಯವಾಗಲೆಂದು ಶ್ರೀ ಸರಸ್ವತಿ ವಿದ್ಯಾಮಂದಿರದಲ್ಲಿ ಸುಬ್ಬರಾಯರ ಸಹಾಯದಿಂದ ಶಿಕ್ಷಕಿಯಾಗಿ ಕೆಲಸಕ್ಕೆ ಸೇರಿಕೊಂಡರು. ಇವರ ಕಲಾ ಬೆಳವಣಿಗೆಗೆ ಸುಬ್ಬರಾಯರ ಪ್ರೋತ್ಸಾಹ ಅಪಾರವಾದಂತಹುದು.

ಸುಬ್ಬರಾಯರ ಆಸೆಯಂತೆ ಗ್ರೇಡ್ ಪರೀಕ್ಷೆ ಮುಗಿಸಿದರು. ನಂತರ 4 ವರ್ಷಗಳ ಡಿಪ್ಲೋಮಾ ಪದವಿಯನ್ನು ಪಡೆದರು. ಒಮ್ಮೆ ಶ್ರೀ ಸುಬ್ಬರಾಯರು ಬೇಲೂರಿನ ಒಂದು ಶಿಲಾಬಾಲಿಕೆಯ ಛಾಯಾಚಿತ್ರ ಕೊಟ್ಟು ಅದನ್ನು ಬಟ್ಟೆಯ ಮೇಲೆ ರೇಖಾಚಿತ್ರವಾಗಿ ಬಿಡಿಸಲು ತೋರಿಸಿಕೊಟ್ಟರು. ಅದನ್ನು ಚಿತ್ರಿಸುತ್ತಿರುವಾಗ ಇದ್ದಕ್ಕಿಂದಂತೆ ವಾದಿರಾಜರು ಬಂದು ಕನಕಾರವರ ಕೆಲಸವನ್ನು ನೋಡಿ ಆಶ್ಚರ್ಯಪಟ್ಟು ಗಮನವಿಟ್ಟು ಮಾಡುತ್ತಿದ್ದ ರೇಖಾಚಿತ್ರ ನೋಡಿ

ಸಂತೋಷಪಟ್ಟರು. ಅವರ ಶ್ರದ್ಧೆಯನ್ನು ಅರಿತು ವಾದಿರಾಜರು ಮನೆಗೆ ಕರೆದುಕೊಂಡು ಹೋಗುತ್ತಾರೆ. ಆಗ ವಾದಿರಾಜರು ಆಳೆತ್ತರದ ಏಸುಕ್ರಿಸ್ತನ ವಿಗ್ರಹವನ್ನು ಮರದಲ್ಲಿ ಮಾಡುತ್ತಿದ್ದರು. ಜೊತೆಗೆ 1 ಅಡಿ ಎತ್ತರದ ಗೋಪಾಲಕೃಷ್ಣನ ವಿಗ್ರಹವನ್ನು ದಂತದಲ್ಲಿ ಮಾಡುತ್ತಿದ್ದರು. ಗೋಪಾಲಕೃಷ್ಣ ವಿಗ್ರಹಕ್ಕಾಗಿ ಅವರು ಮಾಡಿಕೊಂಡಿದ್ದ ರೇಖಾಚಿತ್ರ ಕನಕಾರವರನ್ನು ಆಕರ್ಷಿಸಿತು. ಇವರು ಶಿಲ್ಪಕಲೆ ಕಲಿಯಬೇಕೆಂಬ ಬಯಕೆ ಹುಟ್ಟಿತು. ಬಯಕೆಯನ್ನು ತಂದೆ ತಾಯಿಯರಲ್ಲಿ ಹೇಳಿಕೊಂಡು ಒಪ್ಪಿಗೆ ಪಡೆದರು.

ಸರಸ್ವತಿ ಮಂದಿರದ ಕೆಲಸ ಮುಗಿದ ಮೇಲೆ ಮದ್ಯಾಹ್ನ ವಾದಿರಾಜರಲ್ಲಿ ಕಲಿಯಲು ಪ್ರಾರಂಭಿಸಿದರು. ಆಗ ವಾದಿರಾಜರು ಡಬಲ್ ರೋಡಿನ ಶಾಂತಿನಗರದಲ್ಲಿದ್ದರು. ಅವರು ಖ್ಯಾತ ಕಲಾವಿದರಾಗಿದ್ದ ಶ್ರೀ ಎ.ಪಿ. ದುಬೆಯವರ ಜೊತೆ ಇದ್ದರು. ದುಬೆಯವರು ದಕ್ಷಿಣದ ಶಿಲ್ಪಕಲೆಗೆ ಮಾರುಹೋಗಿ ವಾರಣಾಸಿಯಿಂದ ಬೆಂಗಳೂರಿಗೆ ಬಂದು ನೆಲೆಸಿದ್ದರು. ಕೆಲವೊಮ್ಮೆ ವಾದಿರಾಜರ ಮನೆಗೆ ಹೋಗಿ ಕಲಿಯುತ್ತಿದ್ದರು. ಕೆಲವೊಮ್ಮೆ ವಾದಿರಾಜರೇ ಕನಕಾರವರ ಮನೆಗೆ ಬಂದು ಕಲಿಸುತ್ತಿದ್ದರು. ಕನಕಾಮೂರ್ತಿಯವರಿಗೆ ವ್ಯಕ್ತಿ ಚಿತ್ರಗಳನ್ನು ಬರೆಯುವ ಅಭ್ಯಾಸವಿದ್ದುದ್ದರಿಂದ ವ್ಯಕ್ತಿ ಶಿಲ್ಪಗಳನ್ನು ಮಾಡಲು ಪ್ರಾರಂಭಿಸಿದರು. ಅವರಿಗೆ ಅವರ ತಂಗಿ ಸತ್ಯವತಿಯೇ ಮೊದಲ ರೂಪದರ್ಶಿ.

ಈ ರೀತಿಯಾಗಿ ಜೇಡಿಮಣ್ಣಿನಲ್ಲಿ[4] ಶಿಲ್ಪಗಳನ್ನು ರಚಿಸುವುದರಲ್ಲಿ ಆಸಕ್ತಿ ತೋರಿಸಿ ಕಲಾ ಮಂದಿರಕ್ಕೆ ಹೋಗುವುದನ್ನು ಕಡಿಮೆ ಮಾಡಿದರು. ಆದ್ದರಿಂದ ಸುಬ್ಬರಾಯ ಗುರುಗಳಿಗೆ ನಿರಾಸೆಯಾದರೂ, ಬೇಸರವಾದರೂ ಅದನ್ನು ತೋರಿಸಿಕೊಳ್ಳದೆ, ಶಿಲ್ಪ ಮಾಡುವುದು ಕಲೆಯೇ ಅಲ್ಲವೇ? ಅದನ್ನು ಕಲಿತರೂ ತಪ್ಪಿಲ್ಲ, ಒಳ್ಳೆಯ ಗುರು ಸಿಕ್ಕಿದ್ದು ಪುಣ್ಯವೇ ಎಂದು ಹೇಳಿ ತಮ್ಮ ನಿರಾಸೆಯನ್ನು ಮುಚ್ಚಿಟ್ಟುಕೊಂಡರು. ಆ ಸಮಯದಲ್ಲಿ ಅವರ ಮೊದಲ ಪ್ರಯತ್ನಗಳನ್ನು ನೋಡಿದ ಕೆಲವರು ಶಿಲ್ಪ ಮಾಡುವುದಕ್ಕಿಂತ ಹಾಡುವುದೇ ಚೆನ್ನಾಗಿತ್ತು ಎಂದು ಮಾತನಾಡಿದವರು ಉಂಟು ಎನ್ನುತ್ತಾರೆ ಕನಕಾಮೂರ್ತಿಯವರು.

ಆ ನಂತರದ ದಿನಗಳಲ್ಲಿ ಶ್ರೀವಾದಿರಾಜರಿಗೆ ಅಖಿಲ ಭಾರತದ ಹಸ್ತ ಕಲಾ ಮಂಡಳಿಯವರು ರಾಷ್ಟ್ರಪತಿ ಪ್ರಶಸ್ತಿಯನ್ನು ಕೊಟ್ಟರು. ನಮ್ಮ ಭಾರತೀಯ ಸಂಪ್ರದಾಯವನ್ನು ಜೀವಂತವಾಗಿರುಸುವುದಕ್ಕೆ ಈ ಪ್ರಶಸ್ತಿ ದೊರೆಯಿತು. ಇವರು ಮಾಡಿದ ಮರದ ಪ್ರಜ್ಞಾ ಪರಿಮಿತ ಶಿಲ್ಪವನ್ನು ಆರಿಸಿದ್ದರು. ಈ ಸಂದರ್ಭದಲ್ಲಿ ಕಿರಿಯರಿಗೂ ಸಂಪ್ರದಾಯ ಶಿಲ್ಪಕಲೆಯನ್ನು ಕಲಿಸುವ ಸಲುವಾಗಿ ವಾದಿರಾಜರಿಗೆ ಹಸ್ತಕಲಾ ಮಂಡಳಿಯಿಂದ ಆದೇಶ ಬಂದಿತು. ಅದರಂತೆ ಕಲಿಸುವ ಗುರುವಿಗೆ ತಿಂಗಳಿಗೆ ಗೌರವಧನ ಮತ್ತು ಕಲಿಯುವ ವಿದ್ಯಾರ್ಥಿಗಳಿಗೆ ತಿಂಗಳಿಗೆ 100ರೂ. ವಿದ್ಯಾರ್ಥಿವೇತನ ಕೊಡುವ ವ್ಯವಸ್ಥೆಯಿತ್ತು. ಆಗ ನನಗೆ ಸರಸ್ವತಿ ಮಂದಿರದಲ್ಲಿ 105ರೂ.ಗಳ ಸಂಬಳ ಸಿಗುತಿತ್ತು. ಆಗ ಕನಕಾರವರು ಈ ತರಬೇತಿ ಯೋಜನೆಗೆ ಸೇರಿಕೊಳ್ಳುವಂತೆ ಗುರುಗಳಲ್ಲಿ ಕೇಳಿಕೊಂಡರು. ಅವರ ಆಸಕ್ತಿಯನ್ನು ಗಮನಿಸಿದ ವಾದಿರಾಜರು ಬಹಳ ದೊಡ್ಡ ಮನಸ್ಸು ಮಾಡಿ ಹೆಣ್ಣು ಮಗಳಾದ ಇವರಿಗೆ ಸಂಪ್ರದಾಯ ಶಿಲ್ಪಕಲೆಯನ್ನು ಕಲಿಸಲು ಒಪ್ಪಿದರು. ಇಲ್ಲಿಂದ ಅವರು ಕಲಿಕೆಯ ಗುರಿಯಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟರೆನ್ನಬಹುದು.

1965ರ ಮೇ ತಿಂಗಳಿನಲ್ಲಿ ವಿಕ್ಟೋರಿಯಾ ರಸ್ತೆಯ ಹಸ್ತಕಲಾ ಕೇಂದ್ರದಲ್ಲಿ ತರಬೇತಿ ಪ್ರಾರಂಭವಾಯಿತು. ಇವರ ಜೊತೆಗೆ ಶ್ರೀ ಶ್ಯಾಮಚಾರ್ಯ, ಶ್ರೀ ರಂಗರಾಜು, ಶ್ರೀ ಜ್ಯೋತಿ ಎಂಬ ಮೂವರು ಇವರ ಜೊತೆಯಲ್ಲಿ ಕಲಿಯಲು ತರಬೇತಿ ಕೇಂದ್ರದಲ್ಲಿ ಇದ್ದರು. ಇವರೆಲ್ಲರು ಸ್ವಲ್ಪ ಪರಿಣಿತಿ ಹೊಂದಿದ್ದವರಾಗಿದ್ದರು. ಆದ್ದರಿಂದ ಕನಕಾಮೂರ್ತಿಯವರು ಅವರಿಂದ ಸಲಹೆ ಪಡೆಯುತ್ತಿದ್ದರು. ಈ ರೀತಿಯಾಗಿ ಅವರ ಕಲಿಕೆ ನಡೆಯುತ್ತಿದ್ದಾಗ, ಕಾರಣಾಂತರಗಳಿಂದ ಹಸ್ತಕಲಾ ತರಬೇತಿ ಸಂಸ್ಥೆಯ ವಾದಿರಾಜರು ತರಬೇತಿಯನ್ನು ನಿಲ್ಲಿಸಿದರು. ಆದರೆ ವಾದಿರಾಜರ ಕಲಿಸುವ ರೀತಿ, ಅವರ ಕೈ ಚಳಕಕ್ಕೆ ಮಾರು ಹೋಗಿದ್ದ ಕನಕಾರವರು ಗುರುಗಳನ್ನು ಬಿಟ್ಟು ಬೇರೆಯವರಲ್ಲಿ ಕಲಿಯಲು ಆಸಕ್ತಿಯಿಲ್ಲವೆಂದು, ಮತ್ತೆ ಮುಂದೆ ವಾದಿರಾಜರ ಮನೆಗೆ ಹೋಗಿ ಕಲಿಯಲು ತೀರ್ಮಾನಿಸಿದರು.

ಇಲ್ಲಿಂದ ಗುರು ಶಿಷ್ಯ ಪರಂಪರೆಗೆ ನಾಂದಿಯಾಯಿತು. ಪ್ಲಾಸ್ಟರ್ ಆಫ್ ಪ್ಯಾರಿಸನಲ್ಲಿ ಹಾಗೂ ಕಲ್ಲಿನಲ್ಲಿ ವಿಗ್ರಹಗಳನ್ನು ಮಾಡುವುದು ಕಲಿತರು, ಸುಮಾರು ಒಂದೂವರೆ ವರ್ಷ ಕಳೆಯುವ ವೇಳೆಗೆ ಕನಕಾರವರು ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದರು. ಯಥಾಪ್ರಕಾರ ಒಂದೆರಡರು ಬಾರಿ ಮದುವೆಯ ಪ್ರಸ್ತಾಪಗಳು ಬಂದರೂ ಯಾವುದೂ ಫಲಕಾರಿಯಾಗಿರಲಿಲ್ಲ. ಹಾಗಾಗೀ ಕಲಿಕೆ ಯಾವುದೇ ತೊಂದರೆಯಿಲ್ಲದೆ ನಡೆಯುತ್ತಿತ್ತು. ಮತ್ತೆ ಅವರ ಮನೆಯಲ್ಲಿ ಮದುವೆಯ ಪ್ರಯತ್ನ ಪ್ರಾರಂಭವಾಗಿತ್ತು. ಹಿರಿಯರ ಮಾತನ್ನು ಪಾಲಿಸಲೇಬೇಕಾಗಿತ್ತು. ಕೊನೆಗೂ ನಾರಾಯಣಮೂರ್ತಿಯವರು ಅವರನ್ನು ಒಪ್ಪಿದರು. ನಾರಾಯಣಮೂರ್ತಿಯವರು ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್‌ನಲ್ಲಿ ಲೆಕ್ಕಾಚಾರದ ವಿಭಾಗದಲ್ಲಿದ್ದರು. ತುಂಬಾ ಸರಳ ವ್ಯಕ್ತಿಯಾಗಿದ್ದ ಅವರು ಇವರ ಶಿಲ್ಪಕಲೆಯನ್ನು ಪ್ರೋತ್ಸಾಹಿಸುವ ವ್ಯಕ್ತಿಯಾಗಿದ್ದರು. ಹಾಗೂ ಇವರ ಸಂಗೀತವನ್ನು ಬಹಳ ಮೆಚ್ಚಿಕೊಂಡಿದ್ದರು. ಆದಕಾರಣ ಅವರ ಕಲಿಕೆಗೆ ಯಾವುದೇ ಧಕ್ಕೆಯಾಗಲಿಲ್ಲ ಎಂದೆನ್ನಬಹುದು. ಹಿಂದೂಸ್ಥಾನಿ ಸಂಗೀತ ವಿದೂಷಿ, ಸಂಗೀತ ಸಂಯೋಜಕಿ, ಬರಹಗಾರ್ತಿ ಕು. ಸುಮತಿಯವರು ಇವರ ಮುದ್ದಿನ ಮಗಳು. ಸುಮತಿಯವರು ಕೂಡ ತಾಯಿಯ ಕೆಲಸಕ್ಕೆ ಯವಾಗಲೂ ಪ್ರೋತ್ಸಾಹವನ್ನು ನೀಡುತ್ತಾ ಬಂದಿದ್ದಾರೆ.

ಹೀಗೆ ಕನಕಾಮೂರ್ತಿಯವರ ಕಲಿಕೆ ನಿರಂತರವಾಗಿ ಸಾಗಿತು. ಗುರುಗಳಿಗೆ ಸಹಾಯ ಮಾಡುತ್ತ ತಾವು ಕಲಿಯುತ್ತ ಶಿಲ್ಪಕಲೆಯಲ್ಲಿ ಸಾಧನೆ ಮಾಡತೊಡಗಿದರು. ಹೀಗೆ ಸಾಗುತ್ತಿರುವಾಗ ಕ್ರಮೇಣ ಗುರುಗಳು ಅನಾರೋಗ್ಯಕ್ಕೆ ತುತ್ತಾದರು. ಈ ಸಮಯದಲ್ಲಿ ಗುರುಗಳ ಸೇವೆಯನ್ನು ಅಪಾರವಾಗಿ ಮಾಡಿದರು. ಆಗ ಖಜರಾಹೋದಲ್ಲಿ ಶಿಬಿರದ ನಿರ್ದೇಶಕರಾಗಿ ಆಯ್ಕೆಯಾಗಿದ್ದರು. ಆದರೆ ಅವರ ಅನಾರೋಗ್ಯದ ಕಾರಣ ಆ ಶಿಬಿರದ ನಿರ್ದೇಶನಕ್ಕೆ ಕನಕಾರವರನ್ನು ಒಪ್ಪಿಸಿ ಆ ಅವಕಾಶವನ್ನು ಕನಕಾಮೂರ್ತಿಯವರಿಗೆ ನೀಡಿದರು. ಕನಕಾಮೂರ್ತಿಯವರು ಖಜುರಾಹೋದಲ್ಲಿ ಇರುವಾಗ ವಾದಿರಾಜರ ಮರಣದ ವಿಷಯ ತಿಳಿಯಿತು. ಕನಕಾಮೂರ್ತಿಯವರಿಗೆ ಬರಸಿಡಿಲು ಬಡೆದಂತಾಯಿತು.

ಗುರುಗಳ ನೆರಳಿನಲ್ಲೇ ಬೆಳೆದ ಕನಕಾಮೂರ್ತಿಯವರಿಗೆ ಮುಂದೇನು ಎಂಬ ಬೃಹದಾಕಾರದ ಪ್ರಶ್ನೆ ಕಾಡತೊಡಗಿತು. ಅವರು ಮಾಡಿರುವ ಅಪೂರ್ಣ ಶಿಲ್ಪಗಳನ್ನೆಲ್ಲ ಪೂರ್ಣ ಮಾಡಿ ಆರ್ಡರ್ ನೀಡಿದವರಿಗೆ ನೀಡಿದರು. ಮುಂದೆ ಅವರಿಗೂ ಆರ್ಡರ್ ದೊರೆಯಲು ಪ್ರಾರಂಭಿಸಿದವು. ಹೀಗೆ ಶಿಲ್ಪಗಳನ್ನು ಮಾಡುತ್ತ ಶಿಬಿರಗಳಲ್ಲಿ ಭಾಗವಹಿಸುತ್ತಾ ಅನೇಕ ಶಿಲ್ಪಗಳ ಪ್ರದರ್ಶನಗಳನ್ನು ಮಾಡಿದ್ದಾರೆ.

ಕನಕಾಮೂರ್ತಿಯವರ ಪ್ರಮುಖ ಶಿಲ್ಪಕೃತಿಗಳೆಂದರೆ ಶಿವ ಮರದ ಶಿಲ್ಪ, ನಾಟ್ಯ ಕೃಷ್ಣ (ಮರ), ಗಾನಲೋಲೆ (ಕಲ್ಲು), ಗಾಂಧಾರ ಬುದ್ದ (ಕಲ್ಲು), ಹೊಯ್ಸಳ 'ಗುರು' (ಕಲ್ಲು), ತಾಯಿ ಮಗು (ಕಲ್ಲು), ಹಾರುತ್ತಿರುವ ಸರಸ್ವತಿಯ ಶಿಲ್ಪ, ಹಾರುತ್ತಿರುವ ಗಂಧರ್ವ (ಕಲ್ಲು), ಕಾಳಿಯ ಮರ್ದನ ಕೃಷ್ಣ, ಮೇಘ ಮಲ್ಹಾರ್, ಗಜಾಸುರ ಮರ್ದನ (ಕೆಂಪು ಮರಳು ಕಲ್ಲು), ಮಾತೃಭೂತೇಶ್ವರ, ಯಕ್ಷ, ನಾದ ಪ್ರಿಯ ಶಿವ, ಸಂಗೋಳ್ಳಿ ರಾಯಣ್ಣ ಶಿಲ್ಪ, 9 ಅಡಿ ಗಣೇಶ, ವೃಷಭಾರೂಡ ಶಿಲೆ (ಕೆಂಪು ಹರಳು ಕಲ್ಲು), ವಿಶ್ವಾಮಿತ್ರ, ಕುಶಾನರ ಕಾಲದ ಶಿಲ್ಪ, ಹೊಯ್ಸಳ ಶಿಲ್ಪ (ಫೈಬರ್ ಗ್ಲಾಸ್), ಸಪ್ತಋಷಿ, ಅಮೃತ ಮಂಥನ ಹತ್ತು ಅಡಿಯ ಅಂಜನೆಯ (ಕಲ್ಲು) ಹೀಗೆ ಅನೇಕ ರೀತಿಯ ಶಿಲ್ಪಗಳನ್ನು ವಿವಿಧ ಮಾಧ್ಯಗಳಲ್ಲಿ ಮಾಡಿರುವ ಅನುಭವ ಅವರದಾಗಿದೆ.

ಅದೇ ರೀತಿಯಾಗಿ ರಾಜ್ಯ ಹಾಗೂ ರಾಷ್ಟ್ರದ ಮಹಾನ್ ವ್ಯಕ್ತಿಗಳ ಭಾವಶಿಲ್ಪಗಳನ್ನು ಮಾಡಿರುವ ಹೆಗ್ಗಳಿಕೆ ಅವರದು ಅವುಗಳಲ್ಲಿ ದೇ.ವಾದಿರಾಜ, ಡಾ.ದೊರೆಸ್ವಾಮಿ ಅಯ್ಯಂಗಾರ್, ಶ್ರೀ ಅ.ನ.ಕೃ, ತ.ರಾ.ಸು. ಪಂ.ರವೀಂದ್ರ ಯಾವಗಲ್, ಅಮರ, ಡಾ.ರಾಜಾರಾಮಣ್ಣ, ಪಂ. ಶೇಷಗಿರಿ ಹಾನಗಲ್, ವಿವೇಕಾನಂದ, ಮೈಸೂರು ತಾತಯ್ಯ, ಬೆಳೆಗೆರೆ ಚಂದ್ರಶೇಖರ ಶಾಸ್ತ್ರಿಗಳು, ಕೆ.ಕೆ.ಹೆಬ್ಬಾರ್, ಪಂ. ರಾಮರಾವ್ ನಾಯಕ್, ಶ್ರೀಮತಿ ಕಮಲಾದೇವಿ, ಶ್ರೀ ಇ.ಆರ್. ಸೇತುರಾಂ ಶಿಲ್ಪ, ಉಸ್ತಾದ ಫಯ್ಯಾಜ್ ಖಾನ್, ಸರ್. ಎಂ ವಿಶ್ವೇಶ್ವರಯ್ಯ, ಮಹಾತ್ಮ ಗಾಂಧೀಜಿ, ಡಾ. ಗಂಗೂಬಾಯಿ ಹಾನಗಲ್, ಕುವೆಂಪು, ಡಾ. ಶಿವರಾಮ ಕಾರಂತ, ಸಿ.ಆರ್. ಸೀತಾರಾಂ, ಶ್ರೀ ವೆಂಕಟಕೃಷ್ಣಯ್ಯ, ತ.ರಾ.ಸು, ಕೆ. ವೆಂಕಟಪ್ಪ, ಪದ್ಮಶ್ರೀ ಡಾ. ರಾಮಕೃಷ್ಣನ್, ಶ್ರೀ ವಿ.ಕೆ.ಮೂರ್ತಿ,

ಶ್ರೀಮತಿ ಜ್ಯೋತ್ಸ್ನಾ ಬೋಳೆ ಹೀಗೆ ಅನೇಕ ದಿಗ್ಗಜರ ಭಾವಶಿಲ್ಪಗಳನ್ನು ಮಾಡಿ ಶಿಲ್ಪಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ.

ಇವರು ಶಿಲ್ಪಕಲಾ ಕ್ಷೇತ್ರದಲ್ಲಿ ಮಾಡಿರುವ ಸಾಧನೆಯನ್ನು ಗಮನಿಸಿ ಅನೇಕ ರಾಜ್ಯ ಹಾಗೂ ರಾಷ್ಟ್ರೀಯ ಪ್ರಶಸ್ತಿಗಳು ಮತ್ತು ಬಿರುದುಗಳು ದೊರಕಿವೆ.

1970 ಕರ್ನಾಟಕ ಲಲಿತಕಲಾ ಅಕಾಡೆಮಿಯ ವಾರ್ಷಿಕ ಸ್ಪರ್ಧೆಯ ಮೊದಲ ಬಹುಮಾನ.

1976 ಚಿತ್ರಕಲಾ ಪರಿಷತ್‌ನಲ್ಲಿ 'ಭಾವಶಿಲ್ಪ' ಮಾಡಿದ್ದಕ್ಕಾಗಿ ವಿಶೇಷ ಬಹುಮಾನ

1988 ಅಖಿಲ ಭಾರತ ಕಲಾ ಸ್ಪರ್ಧೆ ಮೊದಲ ಬಹುಮಾನ ನಾಗಪುರ

1993 ರೋಟರಿ ಡೌನ್‌ಟೌನ ಪ್ರಶಸ್ತಿ,

1996 ಕರ್ನಾಟಕ ರಾಜ್ಯದ ರಾಜ್ಯೋತ್ಸವ ಪ್ರಶಸ್ತಿ

1996 ಮೈಸೂರಿನ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸನ : ಆಲ್ ಇಂಡಿಯಾ ಇಂಜಿನಿಯರ್ಸ ದಿನದ ಗೌರವ.

1999 ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ.

1999 ರಾಗಶ್ರೀ ಸಂಸ್ಥೆ, ಶ್ರೀ ಡಿ.ಸುಬ್ಬರಾಯಯ್ಯ ಫೈನ್ ಆರ್ಟ್ ಸಂಸ್ಥೆಯ 10ನೆಯ ಸಮ್ಮೇಳನದಲ್ಲಿ ವಿಶೇಷ ಆಹ್ವಾನಿತಳಾಗಿ ಗೌರವ ಪ್ರಧಾನ.

1999 ಬೆಂಗಳೂರಿನ ಸ್ವಾನಂದ ಆಶ್ರಮದ ವತಿಯಿಂದ 'ಸ್ವಾನಂದ ಕಲಾಶ್ರೀ' ಬಿರುದು.

2005 'ಶಿಲ್ಪಕಲಾ ಕೋವಿದೆ' ಎಂಬ ಬಿರುದು ಮತ್ತೂರಿನ ನಾಗರೀಕರಿಂದ.

2007 ಧವಳಾ ಮಹಿಳಾ ವೇದಿಕೆಯಿಂದ 'ನಾರೀರತ್ನ' ಬಿರುದು ಪ್ರದಾನ.

2007 ಸುವರ್ಣ ಕರ್ನಾಟಕ ಸಂಭ್ರಮದಲ್ಲಿ ಗೌರವ, ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ

2011 ಕರ್ನಾಟಕ ರಾಜ್ಯದ ಪ್ರತಿಷ್ಠಿತ 'ಜಕಣಾಚಾರಿ' ಪ್ರಶಸ್ತಿ ಪ್ರಧಾನ.

2012 ಶ್ರದ್ಧಾ ಪ್ರತಿಷ್ಠಾನ, ಬೆಂಗಳೂರು ಸಾಧಕಿಯರಿಗೆ ಸನ್ಮಾನ.

ಇವರ ಇನ್ನೊಂದು ಪ್ರಮುಖ ಶಿಲ್ಪಮಾಲಿಕೆಯೆಂದರೆ ರಾಗ ರಾಗಿಣಿ ಚಿತ್ರಗಳನ್ನು ಶಿಲ್ಪದಲ್ಲಿ ತಂದಿರುವುದು. ಅದರಲ್ಲಿ ತೋಡಿರಾಗ, ಮೇಘ ಮಲ್ಹಾರ, ಕೇದಾರ, ಭೈರವಿ ರಾಗಗಳ ಶಿಲ್ಪಗಳು ಪ್ರಮುಖವಾದದ್ದು. ಕಿನ್ನಾಳ ಕಲೆಗೆ ಹೊಸರೂಪ ನೀಡಿ ಫೈಬರ್ ಕಲಾಕೃತಿಗಳನ್ನು ರಚಿಸಿದ್ದು ಸಹ ಇವರು ಶಿಲ್ಪಕಲೆಗೆ ಸದಾ ಹೊಸ ಆಯಾಮವನ್ನು ನೀಡುತ್ತಿರುವುದಕ್ಕೆ ಸಾಕ್ಷಿಯಾಗಿದೆ.

ಕನಕಾಮೂರ್ತಿಯವರ ಕುರಿತು ಪತ್ರಿಕಾ ಪ್ರಕಟಣೆ

ಕನಕಾಮೂರ್ತಿ ಕೈಯಲ್ಲಿ ಪ್ರತಿ ಕಲ್ಲೂ ಸಜೀವಮೂರ್ತಿ

ಪುರುಷಾಧಿಪತ್ಯದ ಶಿಲ್ಪಕಲೆಯಂಥ ಕಠಿಣ ಕಾರ್ಯಕ್ಷೇತ್ರದಲ್ಲಿ ವಿಜೃಂಭಿಸುತ್ತಿರುವ ಪ್ರಖ್ಯಾತ ಶಿಲ್ಪಿ ಬೆಂಗಳೂರಿನ ಕನಕಾಮೂರ್ತಿ. ಶಿಲ್ಪಕಲೆಯಲ್ಲಿ ಶಾಸ್ತ್ರೋಕ್ತ ಅಧ್ಯಯನ ಮಾಡದಿದ್ದರೂ ಈ ಕ್ಷೇತ್ರದಲ್ಲಿ ಅವರದು ಅಪ್ರತಿಮ ಸಾಧನೆ. ದೈವದತ್ತವಾಗಿ ಒಲಿದು ಬಂದ ಈ ಅಸಾಧಾರಣ ಕಲೆಯಲ್ಲಿ ಅವರು ವಿನೂತನ ಪ್ರಯೋಗಗಳನ್ನು ಮಾಡುತ್ತ ಸಾಂಪ್ರದಾಯಿಕ ಸ್ಪರ್ಶ ನೀಡಿ ವೈವಿಧ್ಯಮಯ ಶಿಲ್ಪ ರಚನೆಯ ಅಗಾಧತೆಯನ್ನು ತೋರಿಸಿಕೊಟ್ಟವರು. ಅವರ ಕೈಯಲ್ಲಿ ಜೀವಂತಿಕೆ ಮಿಡಿಯುವ ಕಲಾಕೃತಿಗಳಿಗೆ ಅಸಾಧಾರಣ ಬೇಡಿಕೆಯಿದೆ. ಅಪರೂಪದ ಮಹಿಳಾ ಶಿಲ್ಪಿ ಸಾಮ್ರಾಜ್ಯದಲ್ಲಿ ದಾಪುಗಾಲಿಟ್ಟು ನಡೆದು ಬಂದ ಬಗ್ಗೆ ಒಂದು ಅವಲೋಕನ.

'ಕಲೆ', ಸೃಜನಶೀಲವಾದದ್ದು, ಅದರ ಅಭಿವ್ಯಕ್ತಿಗೆ ಶಾಸ್ತ್ರ ಹಂಗಿಲ್ಲ. ಅದು ಹೃದಯದ ಕಣ್ಣಿದ್ದ ಹಾಗೆ. ಭಾವನೆಗಳ ಹೊರಹರಿವಿಗೆ ಹೆಬ್ಬಾಗಿಲಿದ್ದ ಹಾಗೆ. ಶಾಸ್ತ್ರ ಸಂಬಂಧವಾಗಿ ಅಭಿವ್ಯಕ್ತಿಗೊಳ್ಳುವ ಕಲೆಗೆ ಒಂದು ವೈಜ್ಞಾನಿಕ ಚೌಕಟ್ಟು ಸಿಕ್ಕುತ್ತದೆ ನಿಜ. ಅದರೆ ಮುಕ್ತ ಉದಾರ ಅಭಿವ್ಯಕ್ತಿಗೆ ವೈಜ್ಞಾನಿಕ ಹಾಗೂ ವೈಚಾರಿಕ ನೆಲೆಗಳು ಸ್ವಯಂಸಿದ್ಧವೂ ಸ್ವಯಂಬದ್ಧವೂ ಆಗಿರುತ್ತವೆ' ಹೀಗೆ ಮಾತು ಆರಂಭಿಸುತ್ತಾರೆ. ಕನಾಕಮೂರ್ತಿ ಶಿಲ್ಪಿ, ಹುಟ್ಟು ಕಲಾವಿದೆ. ಏಕೆಂದರೆ ಶಿಲ್ಪಕಲೆಯಂಥ ಕಠಣ ಕಲೆಯನ್ನವರು ಶಾಸ್ತ್ರಬದ್ಧವಾಗಿ ಕಲಿತರವಲ್ಲ, ತಮಗೆ ಹಿರಿಯ ಶಿಲ್ಪಿಯೊಬ್ಬರು ಗುರುವಾಗಿ ಸಿಗುವ ಹೊತ್ತಿಗಾಗಲೆ ಅವರ ಶಿಲ್ಪಕಲಾ ಕೈಂಕರ್ಯದಲ್ಲಿ ತೊಡಗಿದ್ದರು. ಅಂದ ಮಾತ್ರಕ್ಕೆ ಕನಕಾಮೂರ್ತಿ ಶಿಲ್ಪಶಾಸ್ತ್ರವನ್ನು ನಿರಾಕರಿಸಿದವರೇನಲ್ಲ. ಶಾಸ್ತ್ರಾನುಕ್ರಮ ಕಲಿಕೆ ಆಗಿರದಿದ್ದರೂ ಕಲೆಗೆ ಪೂರಕವಾದ ವ್ಯಾಕರಣವನ್ನಂತೂ ಅವರು ಪಾಲಿಸಬೇಕಲ್ಲ ! ಅದನ್ನು ಕನಕಾಮೂರ್ತಿ ಮಾಡಲೇಬೇಕಾಗಿತ್ತು. ಮಾಡುತ್ತಿದ್ದರು. ಆದರದು ಮನೋಗತದಿಂದ ಬರುವ ಸ್ಫೂರ್ತಿಶಾಸ್ತ್ರ ತಮ್ಮದೇ ಅಂತರ್‌ದೃಷ್ಟಿಗೆ ತಗಲುವ ಲೆಕ್ಕಾಚಾರ. ಸಹಜ

ಕಲೋಪಾಸನೆ, ದೈವದತ್ತ ಕಲಾರಾಧನೆ, ಹಾಗಾಗಿ ಕನಕಾ ಅವರ ಶಿಲ್ಪಕಲಾ ನೈಪುಣ್ಯ ಎಲ್ಲೂ ಅಶಾಸ್ತ್ರೀಯವೆನಿಸುವುದಿಲ್ಲ.

ಹರಿದು ಬಂತು ಶಿಲ್ಪ ಲಹರಿ :

ಕಲಾ ಪ್ರಪಂಚ ಅದೆಷ್ಟು ಸವಿಸ್ತಾರವಾದುದೆಂದರೆ ಅದು ಕಾಲ, ದೇಶಗಳ ಇತಿಮಿತಿಗೆ ಒಳಪಡುವುದು ಸಾಧ್ಯವೇ ಇಲ್ಲ. ಪ್ರಾಚೀನ, ನವೀನ, ಪಾಶ್ಚಾತ್ಯ, ಪೌರಸ್ತ್ಯ, ಶಿಷ್ಟ, ದೇಸೀ, ಸಾಂಪ್ರದಾಯಿಕ, ಅಸಾಂಪ್ರದಾಯಿಕ ಹೀಗೆ ಅದರ ಲಹರಿ ಎಲ್ಲೆಂದರಲ್ಲಿ ಹರಿಯಬಹುದು. ಈ ಹಿನ್ನೆಲೆಯಿಂದಾಗಿಯೇ ವೈವಿಧ್ಯಮಯ ಶೈಲಿ ನಿರ್ಮಿತಗೊಂಡಿರುತ್ತದೆ. ಅಲ್ಲದೆ ಕೆತ್ತನೆಗೆ ಸಿಗುವ ಕಲ್ಲು, ಅದರ ಗುಣ ಸ್ವಭಾವದಿಂದಾಗಿ ತನ್ನ ಕಲಾಶೈಲಿಯನ್ನು ತಾನೇ ನಿರ್ಧರಿಸಿಕೊಳ್ಳಲಾಗುತ್ತದೆ. ಕ್ರಮಾನುಗತ ಕಲಿಕೆಯ ಮಾರ್ಗ ಒಂದು ನಿರ್ದಿಷ್ಟ ಪ್ರಕರದ ಜತೆಗೊಂದಿಷ್ಟು ಪೂರಕವೆನ್ನಬಹುದಾದ ಪ್ರಕಾರದಲ್ಲೇ ಕಲಾವಿದನನ್ನು ಕರೆದೊಯ್ಯಬಹುದು. ಆದರೆ ಕನಕಾಮೂರ್ತಿಯವರ ವಿಶೇಷತೆ ಇರುವುದು ಇಲ್ಲೇ. ಕನಕಾ ಒಂದು ನಿರ್ದಿಷ್ಟ ಶಿಲ್ಪ ಪ್ರಕಾರಕ್ಕೆ ಶಿಲ್ಪಶೈಲಿಗೆ ಸೀಮಿತಗೊಂಡವರಲ್ಲ.

ಹೊಯ್ಸಳ, ಚಾಲುಕ್ಯ ಇತ್ಯಾದಿ ಸಾಂಪ್ರದಾಯಿಕ ಶಿಲ್ಪಗಳಿಂದ ಹಿಡಿದು ಸಮಕಾಲೀನ ಶಿಲ್ಪಕಲಾ ರಚನೆಯವರೆಗೂ ಲಹರಿ ಮುನ್ನಡೆಸಿದಂತೆಲ್ಲ ಕನಕಾ ಹರಿದಿದ್ದಾರೆ. ಸಾಂಪ್ರದಾಯಿಕ ಶಿಲ್ಪಕಲೆಯ ಕೃಷಿ ಮಾಡುತ್ತಾರಾದರೂ ದೇವತಾ ವಿಗ್ರಹಗಳನ್ನು ಮಾತ್ರ ಕನಕಾ ಕಡೆಯುವುದಿಲ್ಲ. 'ಶಿಲ್ಪಶಾಸ್ತ್ರವನ್ನು ಶಾಸ್ತ್ರೋಕ್ತವಾಗಿ ಕಲಿಯದೆ ದೇವ ಪುತ್ಥಳಿ ನಿರ್ಮಿಸುವುದು ನನ್ನ ಮನಸ್ಸಿಗೆ ಒಗ್ಗುವುದಿಲ್ಲ. ದೇವರು ಎನ್ನುವುದು ಒಂದು ನಂಬಿಕೆ ನೋಡಿ. ಅದರಲ್ಲಿ ತಿಳಿದೋ ತಿಳಿಯದೆಯೋ ದೋಷವಿರಬಾರದು' ಎಂಬ ಸಮರ್ಥನೆಯೂ ಅವರಲ್ಲಿದೆ ಅಥವಾ ಮಹಿಳೆ ಕಡೆದ ದೇವರ ಪ್ರತಿಮೆ ಪೂಜೆಗೆ ಅರ್ಹವೇ ಎಂದು ಹುಬ್ಬೇರಿಸುವವರೂ ಇದ್ದಾರಲ್ಲಾ? ಎಂದರೆ' ಇರಬಹುದು, ಇದ್ದಾರೆ. ಅಂಥ ಅಪಸ್ವರಗಳೂ ಇವೆ. ಆ ಬಗ್ಗೆ ನನಗೆ ವಿಷಾದವಿಲ್ಲ' ಎಂದು ತಮ್ಮ ನಂಬಿಕೆಯನ್ನೇ ಪ್ರತಿಪಾದಿಸುತ್ತಾರೆಯೆ ಹೊರತು ತಲೆಕೆಡಿಸಿಕೊಳ್ಳುವುದಿಲ್ಲ.

ಎಲ್ಲರೊಡನೊಂದಾಗದೆ..

ಟಿ. ನರಸೀಪುರದ ರೈಸ್‌ಮಿಲ್ ಸುಬ್ಬರಾಯರ 12 ಮಕ್ಕಳ ಪೈಕಿ ಕನಕಾ ಆರನೆಯವರು. ತಂದೆಗೆ ಸಂಗೀತ ಮತ್ತು ಸಂಗೀತಗಾರರೆಂದರೆ ಮಹಾ ವ್ಯಾಮೋಹ. ಟಿ.ನರಸೀಪುರದವರೇ ಆದ ಪ್ರಖ್ಯಾತ ಪಿಟೀಲು ವಿದ್ವಾಂಸ ಟಿ. ಚೌಡಯ್ಯನವರು. ಟೈಗರ್ ವರದಾಚಾರ್ಯರು ಸುಬ್ಬರಾಯರ ಆಪ್ತ ಸ್ನೇಹಿತರು. ಹಾಗಾಗಿ ಮನೆಯಲ್ಲಿದ್ದ 19 ಮಕ್ಕಳಿಗೂ (ಇಬ್ಬರು ಹೆಂಡತಿಯರ ಒಟ್ಟು ಮಕ್ಕಳು) ನಿತ್ಯ ಮುಂಜಾನೆ ಸಂಗೀತಾಭ್ಯಾಸ ಆಗಲೇಬೇಕಾಗಿತ್ತು. ಕನಕಾ ಅವರ ತಾಯಿ ಸುಂದರಮ್ಮನವರಿಗೂ ಹಾಡು, ಹಸೆ ಎಂದರೆ ಪ್ರಿಯವೇ. ಅವರ ತಾಯಿ ಮನೆಯ ಕಡೆ ಗೌರಿ ಗಣೇಶಮೂರ್ತಿ ಮಾಡುವ ಕಲೆ ಕರಗತವಾಗಿತ್ತಂತೆ ಗಮಕ ನಾಟಕ ಪರಿಶ್ರಮವಿತ್ತಂತೆ. ಸುಂದರಮ್ಮನವರಿಗೂ ಲೆಗ್ ಹಾರ್ಮೋನಿಯಮ್ ಬಾರಿಸುವುದು, ಚಿತ್ರಕಲೆ, ರಂಗೋಲಿ ಹಾಕುವುದು ಚೆನ್ನಾಗಿಯೇ ಗೊತ್ತಿತ್ತಂತೆ.

ಇಂಥ ವಾತಾವರಣದಲ್ಲಿದ್ದ ಕನಕಾ ಅವರಿಗೆ ಸಾಮೂಹಿಕ ಸಂಗೀತ ಕಲಿಕೆ ಆಸಕ್ತಿ ಕೆರಳಿಸದೇ ಹೋಯಿತು. ಹೀಗೆ ಕಲಿತರೆ ಸ್ವಂತಿಕೆಗೆ ಬೆಲೆ ಇರುವುದಿಲ್ಲ. ಎನ್ನಿಸಿತು. ತಮ್ಮ ಸಂಗೀತ ಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕಿಂತ, ಒಂದು ಭಿನ್ನತೆಯನ್ನು ಮೆರೆಯಬೇಕು ಎಂದೂ ಅನ್ನಿಸಿರಬೇಕು. ಅಮ್ಮ ಹಾಕುತ್ತಿದ್ದ ರಂಗೋಲಿ ಗೆರೆಗಳು, ಅಮ್ಮ ಬಿಡಿಸುತ್ತಿದ್ದ ಚಿತ್ರದ ರೇಖೆಗಳು ಈಕೆಯ ಕೈಗೂ ಹತ್ತಿದವು. ಸಗಣಿ ಸಾರಿಸಿ ಅಂಗಳದ ತುಂಬೆಲ್ಲ ಕನಕಾ ಬರೆದ ಅಕ್ಕಿ ಹಿಟ್ಟಿನ ರಂಗೋಲಿ, ಭತ್ತದ ಕಣಜದ ಕೆಂಪು ಹೊರಮೈ ಮೇಲೆ ಚಿತ್ತಾರ್ಷಕ ಚಿತ್ತಾರಗಳು ಮೂಡಿ ಬಂದವು. ಪಕ್ಕದ ಸೋಮನಾಥಪುರಕ್ಕೆ ಹೋದಾಗಲೆಲ್ಲ ಅಲ್ಲಿನ ಕಡೆದ ಕಲ್ಲುಗಳ ಮೇಲೆ ಕಣ್ಣುಗಳು ನಾಟಿಕೊಳ್ಳುತ್ತಿದ್ದವು.

ತಾವಂದುಕೊಂಡದ್ದನ್ನೂ ಮಾಡುವ ಸ್ಥಿತಿ ತಮ್ಮದಾಗಲಿಲ್ಲವೆಂದು ಕೊರಗದೆ ಸುಂದರಮ್ಮ ತಮ್ಮ ಮಕ್ಕಳಾದರೂ ಅವರಂದುಕೊಂಡದ್ದನ್ನು ಮಾಡುವಂತಾಗಲಿ ಎಂದು ಹಾರೈಸುತ್ತಿದ್ದು. ಪ್ರೋತ್ಸಾಹಿಸುತ್ತಿದ್ದರು. ಇದರ ಫಲವನ್ನು ಮುಖ್ಯವಾಗಿ ಪಡೆದುಕೊಂಡವರು ಕನಕಾ.

ಟಿ.ನರಸಸೀಪುರದಲ್ಲಿ ಹತ್ತನೆಯ ತರಗತಿಯವರೆಗೆ ಮಾತ್ರ ಸೀಮಿತವಾಗಿದ್ದ ವಿದ್ಯಾಭ್ಯಾಸವನ್ನು ಮುಂದುವರೆಸಲು ಅವರು ಬೆಂಗಳೂರಿಗೆ ಬಂದದ್ದೇ ಅವರಿಗೆ ಕಲಾವಿಕಾಸದ ಹೊಸ ಹೊಸ ದ್ವಾರಗಳನ್ನು ತೆರೆದಿಟ್ಟಿತು.

ಪ್ರತಿಭೆ ಅರಳಿತು

ವಿಜ್ಞಾನದಲ್ಲಿ ಪದವಿ ಪಡೆಯುವ ಹೊತ್ತಿಗೆ ಕನಕಾ ಅವರ ಒಳಗೆ ಹುದುಗಿದ್ದ ಕಲ್ಲುದೇವಿ ಹೊರಬರುವ ಹವಣಿಕೆಯಲ್ಲಿದ್ದಳು ತಾಯಿ ಕಲಿಸಿದ ರೇಖೆಗಳೇ ಚಿತ್ರ ಚಿತ್ರಗಳಾಗಿ ಮೂಡಹತ್ತಿದವು. ಹಳ್ಳಿಗೆ ಹಿಂತಿರುಗದೇ ಬೆಂಗಳೂರಲ್ಲೇ ಓದುತ್ತಿದ್ದ ಒಡಹುಟ್ಟಿದವರಿಗೆ ಅಡುಗೆ ಮಾಡುವ ನೆಪ ತೆಗೆದು ಇಲ್ಲೇ ಉಳಿದರು. ಅಣ್ಣನೊಂದಿಗೆ ಬಸವನಗುಡಿಯ ಅ.ನಾ.ಸುಬ್ಬರಾಯರ ಕಲಾಮಂದಿರದ ಮೆಟ್ಟಿಲೇರಿ, ಕಲಾಜಗತ್ತನ್ನು ವಿಧಿಯುಕ್ತವಾಗಿ ಪ್ರವೇಶಿಸಿದರು. ಸುಬ್ಬರಾಯರ ಕುಂಚ ಇವರ ಕೈಗೂ ಬಂತು. ಚಿತ್ರಕಲೆಯನ್ನು ಅಭ್ಯಾಸ ಮಾಡಿದರು. ಸುಬ್ಬರಾಯರು ಹುಡುಗಿಯ ಹತ್ತಿರ ಫೀಸು ಕೇಳಲಿಲ್ಲ. ಕಲಿಯುವ ಆಸಕ್ತಿ ಇದ್ದವರಿಗೆ ಜ್ಞಾನದಾನ ಮಾಡುವ ಉದಾರ ಗುಣ ಬಹುಮುಖ ಪ್ರತಿಭೆಯು ಸುಬ್ಬರಾಯರದಾಗಿತ್ತು. ತಮ್ಮ ವಿದ್ಯಾರ್ಥಿಗಳ ಪರೀಕ್ಷೆಯ ದಿನ ಸುಬ್ಬರಾಯರೇ ತಮ್ಮ ಸ್ವಂತ ಖರ್ಚಿನಲ್ಲಿ ಕುದುರೆಗಾಡಿ ಮಾಡಿಕೊಂಡು ಪೈಂಟಿಂಗ್ ಬೋರ್ಡ ಮತ್ತಿತರ ಪರಿಕರಗಳನ್ನು ವಿದ್ಯಾರ್ಥಿಗಳನ್ನು ತುಂಬಿಕೊಂಡು ತಿಂಡಿ ಕಾಫೀ ಕೊಡಿಸಿಕೊಂಡು ವಾಪಸ್ಸು ಬರುತ್ತಿದ್ದರಂತೆ. ಅಂಥ ಗುರು ತಮಗೆ ಆರಂಭದಲ್ಲೇ ಸಿಕ್ಕಿದ್ದು ತಮ್ಮ ಭಾಗ್ಯ ಎಂದು ಕನಕಾ ಈಗಲೂ ಮನಸಾರೆ ನೆನೆಯುತ್ತಾರೆ.

ಹೀಗೆ ಮೊದಲ ಅಭ್ಯಾಸದ ಗರಡಿ ಬಲಿಷ್ಠವಾಗಿತ್ತು. ಕಲಿಕೆ ಶಕ್ತಿಶಾಲಿಯಾಗಿತ್ತು. ಕನಕಾ ನಿರಂತರ ಚಿತ್ರಕಲಾಭ್ಯಾಸದಲ್ಲಿ ತೊಡಗಿಕೊಂಡರು.

ಅಂದೊಂದು ಪವಿತ್ರ ಸಂಜೆ, ಮನೆಯಲ್ಲಿ ಬೇಲೂರು ಮದನಿಕೆಯ ಪುಟ್ಟ ಚಿತ್ರವನ್ನು 16ಪಟ್ಟು ದೊಡ್ಡದು ಮಾಡುವ ಸಾಹಸದಲ್ಲಿ ತೊಡಗಿದ್ದರು ಕನಕಾ. ಅವರ ಫೋಟೋ ಗ್ರಾಫರ್

ಅಣ್ಣ ಶ್ರೀನಿವಾಸಮೂರ್ತಿಯನ್ನು ನೋಡಲು ಬಂದ ಹಿರಿಯರು ಪ್ರಖ್ಯಾತ ಶಿಲ್ಪಿ ವಾದಿರಾಜರೆಂದು ಕನಕಾ ಅವರಿಗೆ ಗೊತ್ತಿರಲಿಲ್ಲ. ಹುಡುಗಿಯ ರೇಖಾ ಕೌಶಲಕ್ಕೆ ಬೆರಗುಗೊಂಡ ವಾದಿರಾಜರು ಕನಕಾ ಮಾಡಿದ್ದ ಇತರ ಕಲಾಕೃತಿಗಳನ್ನು ತೆಗೆಸಿ ನೋಡಿದಾಗ, ಚಿತ್ರಗಳು, ಪೈಂಟಿಂಗ, ಸಣ್ಣ-ಪುಟ್ಟ ಸಾಂಪ್ರದಾಯಿಕ ಶಿಲ್ಪಕೃತಿಗಳ ಪೈಕಿ ಶಿಲ್ಪಕೃತಿಗಳೇ ಅವರಿಗೆ ಮೆಚ್ಚಿಗೆಯಾದವು. ಅಲ್ಲಿಂದಾಚೆಗೆ ಕನಕಾ ವಾದಿರಾಜರಲ್ಲಿ ಮಾರ್ಗದರ್ಶನ ಪಡೆಯತೊಡಗಿದರು.

ಕಲಾಕೃತಿಗಳ ವೈವಿಧ್ಯಲೋಕ

ಮನೆಯಲ್ಲಿ ಸಂಬಂಧಿಕರು ಮಾಡುತ್ತಿದ್ದ ಗೌರಿ ಗಣೇಶ ವಿಗ್ರಹಗಳನ್ನು ನೋಡುತ್ತಲೋ, ಸೋಮನಾಥಪುರದ ಅಪೂರ್ವ ಶಿಲ್ಪ ವೈಭವವನ್ನು ಹೃದಯದಲ್ಲೇ ತುಂಬಿಟ್ಟುಕೊಂಡೋ ಒಬ್ಬ ಹವ್ಯಾಸಿ ಶಿಲ್ಪ ಕಲಾವಿದೆಯಂತೆ ತನ್ನ ಪಾಡಿಗೆ ತಾನು ಕೆಲಸ ಮಾಡಿಕೊಂಡಿರುತ್ತಿದ್ದ ಕನಕಾಗೆ ಈಗ ನಿರ್ದಿಷ್ಟ ಮಾರ್ಗದಲ್ಲಿ ಕಲಾಕಲಿಕೆ ಆರಂಭವಾಯಿತು. ಜೇಡಿಮಣ್ಣಿನ ಕೃತಿಗಲು, ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ಆಕೃತಿಗಳು, ಎರಕ ಕೃತಿಗಳು, ಅಚ್ಚುಕೃತಿಗಳು, ಅನಂತರ ಮೃದುಕಟ್ಟಿಗೆಯ ಶಿಲ್ಪಗಳು, ದಾರುಶಿಲ್ಪ ಹೀಗೆ ಹಂತಹಂತವಾಗಿ ವೈವಿಧ್ಯಮಯ ಶಿಲ್ಪಾಕೃತಿಗಳನ್ನು ಕನಕಾ ರಚಿಸತೊಡಗಿದರು.

ಶಿಲ್ಪಕಲೆಗೆ ಸ್ತ್ರೀ ಯೋಗ್ಯಳಲ್ಲವೇ?

ಇಂಥದೂ ಒಂದು ಪ್ರಶ್ನೆ ಎದುರಾಯಿತು ವಾದಿರಾಜರಿಗೆ. ಅಖಿಲ ಭಾರತ ಲಲಿತಕಲಾ ಮಂಡಳಿ ನಾಲ್ವರು ವಿದ್ಯಾರ್ಥಿಗಳಿಗೆ ಕಾಷ್ಠಶಿಲ್ಪ ಕಲೆ ಕಲಿಸುವ ಅವಕಾಶವನ್ನು ವಾದಿರಾಜರಿಗೆ ನೀಡಿತು. ಈ ನಾಲ್ವರು ವಿದ್ಯಾರ್ಥಿಗಳ ಪೈಕಿ ಒಬ್ಬರಾಗಿ ಗುರುಗಳು ಕನಕಾ ಅವರನ್ನು ಆರಿಸಿಕೊಂಡಾಗ 'ಹೆಣ್ಣೆ? ಶಿಲ್ಪಕಲೆಗೆ?' ಎಂದು ಹುಬ್ಬುಗಳೇರಿಸಿದರು. ಅದನ್ನೇ ಹುಡುಗನೊಬ್ಬನಿಗೆ ಕಲಿಸಿದರೆ ಮುಂದೆ ಅವನು ಅದನ್ನೇ ನಂಬಿ ಬದುಕಿಕೊಳ್ಳುತ್ತಾನೆ ಎಂಬ ಆಲೋಚನೆಗಳು ಬಂದವು. ಶಿಲ್ಪಕಲೆ ಒರಟು ಕೆಲಸ. ಹೆಣ್ಣುಮಕ್ಕಳು ಸೂಕ್ಷ್ಮ ಮೃದು, ಹೆಚ್ಚೆಂದರೆ ಅವರು ಬೆರಳಚ್ಚುಗಾತಿಯೋ, ಗುಮಾಸ್ತಳೋ ಆಗಬಹುದು ಎಂಬ ಅಭಿಪ್ರಾಯವಿದ್ದ ಕಾಲ ಅದು. ಆದರೆ

ಕನಕಾರ ಅದೃಷ್ಟ ಚೆನ್ನಾಗಿತ್ತು. ಗುರು ಹಿಂಜರಿಯಲಿಲ್ಲ. ಅವರ ಗುರುಗಳಾಗಿದ್ದ ಹರಿಹರನ್ ಅವರೂ ಶಿಷ್ಯನನ್ನು ಹುರಿದುಂಬಿಸಿದರು. ಆದರೂ ಶಿಲ್ಪಕಲೆಯನ್ನು ಎಂದಿಗೂ ಕೈ ಬಿಡುವುದಿಲ್ಲವೆಂಬ ವಚನವನ್ನು ಶಿಷ್ಯೆಯಿಂದ ಪಡದೇ ವಾದಿರಾಜರು ಕನಕಾಗೆ ತರಬೇತಿಯ ಅವಕಾಶವನ್ನು ನೀಡಿದರು.

ನಿನ್ನ ಮದುವೆಗೆ ಸಾಕ್ಷಿಯಾಗುವ ಅಗ್ನಿದೇವನ ಮುಂದೆಯೇ ಈ ಕಲೆಯನ್ನು ಕೈ ಬಿಡುವುದಿಲ್ಲವೆಂದೂ ಪ್ರಮಾಣ ಮಾಡುತ್ತೀಯಾ? ಎಂದು ಗುರುಗಳು ಕೇಳಿದಾಗ ಹಿಂದು-ಮುಂದು ಯೋಚಿಸದೆ ವಚನ ಕೊಟ್ಟು ಬಿಟ್ಟರಂತೆ ಕನಕಾ. ಈವರೆಗೂ ತಮ್ಮ ಪತಿಯನ್ನು ಅದಕ್ಕಿಂತ ಮೊದಲೇ ಕೈ ಹಿಡಿದ ಕಲೆಯನ್ನೂ ಅವರು ನಿರಂತರವಾಗಿ ಪೋಷಿಸಿಕೊಂಡು ಬಂದಿದ್ದಾರೆ.

ಗುರುವಿನ ಕೈಯಲ್ಲಿ ಪಳಗಿದ ಶಿಷ್ಯೆ

'ಅದೊಂದು ದೈವಿಶಕ್ತಿ, ವಜ್ರದಷ್ಟು ಕಠಿಣವಾದ ಹೂವಿನಷ್ಟು ಮೃದುವಾದ ಹೃದಯ ಸಜ್ಜುಗೊಳಿಸಿಕೊಳ್ಳುವುದನ್ನು ಅವರು ಕಲಿಸಿದರು. ನನ್ನ ಜಗಳಗಂಟಿ ಸ್ವಭಾವ, ವಾಗ್ಯುದ್ಧ ನಡೆಸುವ ಗುಣ. ಅವರಿವರ ಮೇಲೆ ಸ್ವಾಮ್ಯತೆ ಸಾಧಿಸುವ ನಡವಳಿಕೆಗೆ ಮೊದಲು ಕಡಿವಾಣ ಹಾಕಿ, ಬದುಕುವ ಮತ್ತು ಇತರರನ್ನು ಬದುಕುವಂತೆ ಮಾಡುವ ಸರಳ ವಿಧಾನಗಳನ್ನು ಕಲಿಸಿದರು. ಹಾಗೆ ಸರಳೀಕರಣಗೊಳ್ಳದ ಹೊರತು ದೃಢವಾದ ಕಲ್ಲುಗಳನ್ನು ಕರಗಿಸುವುದು ಅಸಾಧ್ಯ ಎಂಬುದು ಅವರ ಸೂತ್ರ, ಕನಕಾ ಗುರುಗಳನ್ನು ಕಾಣುವುದು ಹೀಗೆ.

ಎರಡನೆಯ ತರಗತಿಯವರೆಗೆ ಮಾತ್ರ ಕಲಿತಿದ್ದ ಗುರುವಾದಿರಾಜರು, ಶಿಷ್ಯೆಗೆ ತನ್ನ ಉನ್ನತ ಶಿಕ್ಷಣದ ಸದುಪಯೋಗ ಮಾಡಿಕೊಳ್ಳುವಂತೆ ಬೋಧಿಸಿದರು. ಕನಕಾ ಸಾಂಪ್ರದಾಯಕ ಶಿಲ್ಪಕಲೆಗೆ ಸಂಬಂಧಿಸಿದ ಪುಸ್ತಕಗಳನ್ನು ಓದಿದರು. ಪ್ರತಿಯೊಂದು ಶಿಲ್ಪಶೈಲಿಯ ಐತಿಹಾಸಿಕ ಹಿನ್ನಲೆ ಅರಿತರು. ಕಲಿಕೆ ಅವ್ಯಾಹತವಾಗಿ ಸಾಗಿತು.

ಈ ನಡುವೆ ಅಂದರೆ, 60ರ ದಶಕದ ಮಧ್ಯಭಾಗದಲ್ಲಿ ವಾದಿರಾಜರು ಫೈಬರ್ ಗ್ಲಾಸ್, ರಬ್ಬರ್ ಅಚ್ಚು ಮತ್ತು ಪ್ಲಾಸ್ಟಿಕ್ ಎರಕ ಹೊಯ್ಯುವ ಬಗ್ಗೆ ಪ್ರಯೋಗಗಳನ್ನು ಮಾಡುತ್ತಿದ್ದರು. ಸಾಂಪ್ರದಾಯಿಕ ಕಲಾಕಾರರಿಗೆ ಅನುಕೂಲವಾಗುವಂತೆ ಈ ಪ್ರಯೋಗಗಳನ್ನು ಮಾಡಬೇಕೆಂದು ಅವರು ಶಿಷ್ಯಗೆ ಹೇಳುತ್ತಿದ್ದರು. ವಿವಿಧ ಮಾಧ್ಯಮ ಮತ್ತು ವಿವಿಧ ಶೈಲಿಗಳಲ್ಲಿ ಗುರುಗಳು ಮಾಡುತ್ತಿದ್ದ ಪ್ರಯೋಗಗಳು ಕನಕಾ ಅವರಿಗೂ ಹೊಸ ವಿನ್ಯಾಸಗಳನ್ನು ಹೊಸ ಪರಿಕಲ್ಪನೆಗಳನ್ನು ಪರಿಚಯಿಸಿದವು. ಕಲ್ಲು, ಮರ, ದಂತ, ಗಂಧ, ಮಣ್ಣು, ಫೈಬರ್ ಗ್ಲಸ್, ಪ್ಲಾಸ್ಟರ್ ಆಫ್ ಪ್ಯಾರಿಸ್, ಪಚ್ಚೆಕಲ್ಲು ಪ್ರತಿ ಪರಿಕರಕ್ಕೂ ಇವರ ಕೈ ಪಳಗುತ್ತಾ ಹೋಯಿತು. ಹತ್ತು ವರ್ಷಗಳ ಸುದೀರ್ಘ ಕಲಿಕೆಯ ಅನಂತರ ಕನಕಾಮೂರ್ತಿ ಸ್ವತಂತ್ರ ಶಿಲ್ಪಿಯಾದರು.

ಬದಲಾದರು ಕನಕಾ

ಕನಕಾ ಗುರು ವಾಕ್ಯದಂತೆ ಸ್ವಭಾವವನ್ನು ನಿಯಂತ್ರಣ ತಂದುಕೊಂಡು ಒಂದು ಬದಲಾವಣೆ ಸಾಧಿಸಿದರು. ಸರಳ ಕಲೆಯಿಂದ ಪ್ರಬುದ್ಧ ಕಲಾ ಪ್ರಕಾರವನ್ನು ಕರಗತ ಮಾಡಿಕೊಂಡು ಶಿಲ್ಪಿಯಾಗಿ ಬದಲಾದರು. ಬರೀ ಕನಕಾ ಆಗಿದ್ದವರು ಕಡೆಗೆ ಕನಕಾಮೂರ್ತಿಯಾಗಿ ಬದಲಾದರು. ಈ ಯಾವ ಬದಲಾವಣೆಯೂ ಅವರನ್ನು ಶಿಲ್ಪಕಲೆ ಮರೆಯುವಂತೆ ಬದಲಾಯಿಸಲ್ಲ ಇನ್ನೊಂದಿಷ್ಟು ಪ್ರೋತ್ಸಾಹವೇ ಹೆಚ್ಚಾಯಿತು. 'ದೊಡ್ಡ ಅಡ್ಡಿಯಾಗಬಹುದು' ಎಂದು ಗುರುಗಳು ಭಾವಿಸಿದ ಕನಕಾ ಅವರ ಮದುವೆ ಮತ್ತು ಗಂಡ ಹಾಗೂ ಮಗು ಕಲಾಚೈತನ್ಯದ ಮುಂದೆ ಏನೇನೂ ಆಗಲಿಲ್ಲ. ಐಟಿಐನಲ್ಲಿ ಹಣಕಾಸು ಅಧಿಕಾರಿಯಾಗಿದ್ದ ನಾರಾಯಣಮೂರ್ತಿಯಾಗಲೀ ಮಗಳು ಸುಮತಿಯಾಗಲೀ ಮುಳ್ಳಾಗಲೇ ಇಲ್ಲ.


ಮೊದಮೊದಲು ಗುರುಗಳು ಕೆತ್ತಿದ ಪುತ್ಥಳಿಗೆ ಆಭರಣ, ಹೂವಿನ ಅಲಂಕರಣ, ಉಗುರು, ಕೂದಲು ಮುಂತಾದ ಸಣ್ಣ ಸೂಕ್ಷ್ಮ ಕೆಲಸಗಳನ್ನು ಮಾಡುತ್ತಿದ್ದ ಕನಕಾ ಈಗ ಸ್ವತಂತ್ರವಾಗಿ ಕಲ್ಲಿನ ಮೇಲೆ ರೇಖಾಚಿತ್ರ ಬಿಡಿಸಿಕೊಂಡು ಸ್ವತಂತ್ರ ಕೆತ್ತನೆಗೆ ತೊಡಗಿದರು. ಕಲ್ಲಿನ

ಕೆತ್ತನೆ ಅವರನ್ನು ಬಹುಬೇಗ ಸೆಳೆದುಕೊಂಡು ಗ್ರಾನೈಟ್, ರೆಡ್‌ಸ್ಯಾಂಡ್ ಸ್ಟೋನ್, ಸೋಪ್ ಸ್ಟೋನ್, ಶೆಲ್‌ಸ್ಟೋನ್ ಮುಂತಾದ ಬಗೆಬಗೆಯ ಕಲ್ಲುಗಳ ಮೇಲೆ ಅವರು ಕೆತ್ತಿದ ಶಿಲ್ಪಾಕೃತಿಗೆ ಬಹಳ ಬೇಗನೆ ಅಸಾಧಾರಣದ ಬೇಡಿಕೆ ಪ್ರಾಪ್ತವಾಯಿತು. ಕಲ್ಲು ಕೆತ್ತನೆಯ ಜತೆಜತೆಯಲ್ಲೇ ಸಿಮೆಂಟ್, ಜೇಡಿಮಣ್ಣು, ಟೆರಾಕೋಟಾ, ಮರ ಮುಂತಾದ ವಿಭಿನ್ನ ಮಾಧ್ಯಮಗಳ ಮೇಲೆ ಕೈಯಾಡಿಸತೊಡಗಿದರು.

ಇಷ್ಟಾದರೂ ಕನಕಾ ಅವರಿಗೆ ಕಲ್ಲು ನೀಡಿದ ಪುಳಕವನ್ನು ಬೇರ್ಯಾವುದೇ ಮಾಧ್ಯಮ ಕೊಟ್ಟಿಲ್ಲವೆಂದು ಅನ್ನಿಸುತ್ತದೆ. ಅದರೊಳಗೇನೋ ಜೀವಜಲವಿದೆ ಅಂತಲೂ ಅನ್ನಿಸುತ್ತೇ ಶಿಲೆ ಗಟ್ಟಿ, ಒರಟು ಎಂದು ನನಗನ್ನಿಸುವುದೇ ಇಲ್ಲ. ಅದು ತಂಪು ಮೃದು. ಶಿಲೆಯ ಮೇಲೆ ಬೀಳುವ ನನ್ನ ಉಳಿಯ ಪ್ರತಿಯೊಂದು ಪೆಟ್ಟಿನ ಸದ್ದೂ ನನ್ನೊಂದಿಗೆ ನಡೆಯುವ ಕಲ್ಲಿನ ಸಂಭಾಷಣೆಯಂತೆ, ಅದರೊಳಗಿನ ಅಮೂರ್ತ ಸ್ವರೂಪವೊಂದು ನನ್ನೊಂದಿಗೆ ಮುಖಾಮುಖಿಯಾದಂತೆ ಭಾಸವಾಗುತ್ತದೆ ಎನ್ನುತ್ತಾರೆ ಕನಕಾ.



ಬೆಳಗೆರೆ ಚಂದ್ರಶೇಖರ ಶಾಸ್ತ್ರೀಗಳು



ಕೆ,ಕೆ. ಹೆಬ್ಬಾರ್



ಪಂಡೀತ ರಾಮರಾವ



ಶ್ರೀಮತಿ ಕಮಲಾದೇವಿ

ಶ್ರೀಮತಿ ಕನಕಾಮೂರ್ತಿಯವರು ಫೈಬರ್ ಮಾಧ್ಯಮದಲ್ಲಿ ರಚಿಸಿರುವ ಶಿಲ್ಪಕಲಾಕೃತಿಗಳು





ಹಿರಿಯ ಶಿಲ್ಪಕಲಾವಿದೆ ಕನಕಾಮೂರ್ತಿಯವರು ರಚಿಸಿದ ಶಿಲಾ ಮಾಧ್ಯಮದ
ಕಲಾಕೃತಿಗಳು





ಶ್ರೀಮತಿ ಕನಕಾಮೂರ್ತಿಯವರು
ಶಿಲಾ ಮಾಧ್ಯಮದಲ್ಲಿ ರಚಿಸಿರುವ
ಶಿಲ್ಪಕಲಾಕೃತಿಗಳು

ಶಕುಂತಲಾ ಎಂ.ಬಿ

ಶಕುಂತಲಾ ಎಂ.ಬಿ ಅವರು ಕಲಬುರಗಿ ಜಿಲ್ಲೆಯ ಲಿಂಗಸೂಗುರು ತಾಲೂಕಿನ ಗುಡದನಾಳ ಎಂಬ ಗ್ರಾಮದಲ್ಲಿ ಜನಿಸಿದರು. ತಂದೆಯವರು ಅಯ್ಯಣ್ಣ ಹಾಗೂ ತಾಯಿಯವರು ಪಾರ್ವತಿ. ಶಕುಂತಲಾ ಅವರು ಅವರ ತವರು ಮನೆಯಲ್ಲಿ ಯಾವುದೇ ರಿತಿಯ ಶಿಲ್ಪಕೃತಿಗಳನ್ನು ಮಾಡುತ್ತಿರಲಿಲ್ಲ. ನಂತರ ಮಾನಯ್ಯ ಬಡಿಗೇರ ಅವರೊಂದಿಗೆ ವಿವಾಹವಾಯಿತು. ಮಾನಯ್ಯ ಬಡಿಗೇರ ಅವರ ತಂದೆಯವರು ನಾಡೋಜ ನಾಗಣ್ಣ ಬಡಿಗೇರ ಅವರು ಸುಪ್ರಸಿದ್ಧ ಶಿಲ್ಪ ಕಲಾವಿದರು. ಅವರ ಮಗನಾದ ಮಾನಯ್ಯ ಬಡಿಗೇರ ಅವರು ಕೂಡ ತಂದೆಯ ಮಾರ್ಗದರ್ಶನದಲ್ಲಿ ಬೆಳೆದ ಉತ್ತಮ ಕಲಾವಿದರಾಗಿದ್ದರು. ಆದ ಕಾರಣ ಶಕುಂತಲಾ ಅವರು ಮದುವೆಯ ನಂತರ ಕಲಾವಿದರ ಮಧ್ಯದಲ್ಲಿ ಬದುಕುವ ಅವಕಾಶ ದೊರೆಯಿತು. ಮೊದಲಿಗೆ ಅವರ ಪತಿ ಹಾಗೂ ಅವರ ಮನೆಯ ಸದಸ್ಯರೆಲ್ಲರೂ ಶಿಲ್ಪಗಳನ್ನು ಮಾಡುವುದುನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಶಕುಂತಲಾ ಅವರು ಕ್ರಮೇಣವಾಗಿ ಅವರ ಶಿಲ್ಪ ರಚನೆಯಲ್ಲಿ ಸಹಾಯ ಮಾಡತೊಡಗಿದರು. ಇವರ ಆಸಕ್ತಿಯನ್ನು ಅರಿತು ಅವರ ಮಾವನವರಾದ ನಾಡೋಜ ನಾಗಣ್ಣ ಬಡಿಗೇರ ಹಾಗೂ ಪತಿ ಮಾನಯ್ಯ ಬಡಿಗೇರ ಅವರು ಅವರಿಗೆ ಸ್ವತಂತ್ರವಾಗಿ ಶಿಲ್ಪ ರಚನೆ ಮಾಡುವುದನ್ನು ಕಲಿಸಿಕೊಟ್ಟರು. ವಿಶೇಷವಾಗಿ ಶಕುಂತಲಾ ಅವರು ಮೇಣದ ಶಿಲ್ಪಗಳನ್ನು ರಚಿಸುವುದನ್ನು ಕರಗತ ಮಾಡಿಕೊಂಡರು. ಇದೊಂದು ವಿಶಿಷ್ಟವಾದ ಶೈಲಿಯಾಗಿದ್ದು, ಇದನ್ನು ಬೆರಳಣಿಕೆಯಷ್ಟೇ ಕಲಾವಿದರು ಈ ಶಿಲ್ಪ ರಚನೆಯಲ್ಲಿ ತೊಡಗಿದ್ದಾರೆ. ಈ ಶೈಲಿ ಹಾಗೂ ತಂತ್ರಗಾರಿಕೆಯಲ್ಲಿ ಶಕುಂತಲಾ ಅವರು ಶಿಲ್ಪರಚನೆಯಲ್ಲಿ ತೊಡಗಿರುವುದು ಶ್ಲಾಘನೀಯ.

ಶಿಲ್ಪ ರಚನೆಯ ತಂತ್ರಗಾರಿಕೆ:

ಮೊದಲು ಮಣ್ಣು ಮತ್ತು ಇಟ್ಟಿಗೆ ಪುಡಯ ಮಿಶ್ರಣಗಳಿಂದ ಶಿಲ್ಪದ ಆಕಾರವನ್ನು ರಚಿಸುತ್ತಾರೆ. ಅದರ ಮೇಲೆ ತೆಳ್ಳನೆಯ ಮೇಣದ ಪಟ್ಟಿಯನ್ನು ಸಂಪೂರ್ಣವಾಗಿ ಲೇಪಿಸುವರು. ನಂತರ ಮೇಣದಲ್ಲಿ ಪೂರ್ಣ ಪ್ರಮಾಣದ ಶಿಲ್ಪವನ್ನು ರಚಿಸಿಕೊಂಡು, ಮೇಣದಲ್ಲಿಯೇ ಆಕಾರಕ್ಕೆ

ತಕ್ಕಂತೆ ಅಲಂಕಾರ ಮಾಡುವರು. ನಂತರ ಪೂರ್ಣವಾದ ಶಿಲ್ಪಕ್ಕೆ ಚನಲ್ ಕಟ್ಟಿ ಪಿ.ಓ.ಪಿ ಮತ್ತು ಇಟ್ಟಿಗೆ ಪುಡಿ ಮಿಶ್ರಣದಿಂದ ಮೌಲ್ಡ್‌ನ್ನು ತಯಾರಿಸಿಕೊಳ್ಳುತ್ತಾರೆ. ನಂತರ ಅದನ್ನು 4 ರಿಂದ 5 ಗಂಟೆಯವರೆಗೆ ಸುಡುತ್ತಾರೆ. ಸುಟ್ಟಾಗ ಅದರಲ್ಲಿರುವ ಮೇಣವು ಖಾಲಿಯಾಗುತ್ತದೆ. ಆಗ ಅದಕ್ಕೆ ಬೇಕಾದ ಲೋಹವನ್ನು ಕರಗಿಸಿ ಎರಕ ಹಾಕುತ್ತಾರೆ. ಎರಕ ಹಾಕಿದ ಮೇಲೆ ಲೋಹದ ಶಿಲ್ಪ ಹೊರ ಬರುವುದು. ಈ ರೀತಿಯ ತಂತ್ರಗಾರಿಕೆಯಲ್ಲಿ ಲೋಹ ಶಿಲ್ಪ ರಚಿಸುತ್ತಾರೆ. ಶಕುಂತಲಾ ಅವರು ಯಾವುದೇ ರೀತಿಯ ಶೈಕ್ಷಣಿಕ ಶೈಲಿಯನ್ನು ತಮ್ಮ ಕಲಾಕೃತಿಗಳಲ್ಲಿ ಅಳವಡಿಸಿಕೊಂಡಿರುವುದಿಲ್ಲ. ಆದರೆ ಅವರು ತಮ್ಮದೇ ಆದ ಒಂದು ವಿಶಿಷ್ಟ ಶೈಲಿಯನ್ನು ಹೊಂದಿರುತ್ತಾರೆ. ಶಕುಂತಲಾ ಅವರು ಈ ತಂತ್ರಗಾರಿಕೆಯನ್ನು ಹಲವಾರು ಆಸಕ್ತರಿಗೆ ಕಲಿಸಿದ್ದಾರೆ. ಗಾಯತ್ರಿ ಸುರೇಂದ್ರ ಬೆಂಗಳೂರು, ನಿರ್ಮಲ ಮಲ್ಲಿಕಾರ್ಜುನ ಚಿಕನಳ್ಳಿ, ಪವಿತ್ರ ಶ್ರೀಶೈಲ ಹಂದ್ರಾಳ, ಮಾಧುರಿ, ಎಂ.ಬಿ. ಕಲಬುರಗಿ ಹೀಗೆ ಅನೇಕ ಶಿಷ್ಯಂದಿರು ಇವರ ಕೈಯಲ್ಲಿ ಅರಳಿದ್ದಾರೆ. 1995ರಿಂದ ಶಿಲ್ಪರಚನೆಯಲ್ಲಿ ತೊಡಗಿಸಿಕೊಂಡ ಶಕುಂತಲಾ ಅವರು ಶಿವಲಿಂಗ ಮುಖ, ಗೌರಿ, ಗಣೇಶ, ಸಿಗಮ್ಮ, ಗೌರಮ್ಮ, ನೀಲಕಂಠ, ಗಂಗಾಧರ, ನಂದಿ, ಮಲ್ಲಯ್ಯ ಇನ್ನೂ ಅನೇಕ ಮುಖವಾಡಗಳನ್ನು ರಚಿಸಿದ್ದಾರೆ.

ಶಕುಂತಲಾ ಅವರು ಭಾಗವಹಿಸಿದ ಶಿಲ್ಪಕಲಾ ಪ್ರದರ್ಶನಗಳು:


2005ರಿಂದ 2017 ರ ವರೆಗೆ ಏರ್ಪಡಿಸಿದ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ವಾರ್ಷಿಕ ಪ್ರದರ್ಶನಗಳಲ್ಲಿ ಆಯ್ಕೆಯಾಗಿ ಪ್ರದರ್ಶನಗೊಂಡಿವೆ.

2010ರಲ್ಲಿ ಕಲಬುರಗಿ ಕಂಪು

2011ರ ಅಂತರಾಷ್ಟ್ರೀಯ ಸಿಂಪೋಜಿಯಂ, ಶ್ರೀಗುರು ವಿದ್ಯಾಪೀಠ ಕಲಬುರಗಿ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಅವರು ಏರ್ಪಡಿಸಿದ ರವೀಂದ್ರ ಕಲಾಕ್ಷೇತ್ರದಲ್ಲಿ 50ನೇ ವರ್ಷದ ನೆನಪಿನೋಕುಳೀ ಕಾರ್ಯಕ್ರಮದಲ್ಲಿ ಶಿಲ್ಪ ಪ್ರದರ್ಶನಗೊಂಡಿದೆ.

ಇವರ ಈ ಶಿಲ್ಪಕ್ಷೇತ್ರಕ್ಕೆ ನೀಡಿರುವ ಕೊಡುಗೆಯನ್ನು ಗಮನಿಸಿ 2009ನೇ ಸಾಲಿನ ವಾರ್ಷಿಕ ಶಿಲ್ಪಕಲಾ ಪ್ರಶಸ್ತಿಯನ್ನು ನೀಡಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು ಗೌರವಿಸಿದೆ.



ಶಕುಂತಲಾ ಮಾನಯ್ಯ ಬಡಿಗೇರ ಅವರು ಕಲಾಕೃತಿ ರಚನೆಯಲ್ಲಿ ತೊಡಗಿರುವುದು



ಶಕುಂತಲಾ ಮಾನಯ್ಯ ಬಡಿಗೇರ ಅವರು ರಚಿಸಿದ ಜನಪದ ಶೈಲಿಯ
ಲೋಹ ಮಾಧ್ಯಮದ ಶಿಲ್ಪಕಲಾಕೃತಿಗಳು





ಶಕುಂತಲಾ ಮಾನಯ್ಯ ಬಡಿಗೇರ
ಅವರು ರಚಿಸಿದ
ಜನಪದ ಶೈಲಿಯ
ಲೋಹ ಮಾಧ್ಯಮದ
ಶಿಲ್ಪಕಲಾಕೃತಿಗಳು

ಗಾಯತ್ರಿ ಎ.ಶಿಲ್ಪಿ

ಗಾಯತ್ರಿ ಶಿಲ್ಪಿಯವರು ಮೂಲತಃ ಹೈದ್ರಾಬಾದ ಕರ್ನಾಟಕದ ಕಲಬುರಗಿ ಜಿಲ್ಲೆಯವರಾಗಿದ್ದು, 1988ರ ಜುಲೈ 12ರಂದು ಶ್ರೀಮತಿ ದೇವಕಿ ಮತ್ತು ಶ್ರೀ ಚಂದ್ರಶೇಖರ್ ಶಿಲ್ಪಿಯವರ ಮಗಳಾಗಿ ಜನಿಸಿದರು. ಇವರ ತಂದೆ ಶ್ರೀ ಚಂದ್ರಶೇಖರ ಶಿಲ್ಪಿಯವರು ಮೂಲತಃ ಸಾಂಪ್ರದಾಯಕ ಶಿಲ್ಪ ಕಲಾವಿದರಾಗಿದ್ದ ಕಾರಣ ಶಿಲ್ಪ ಕಲೆಯು ಸಹಜವಾಗಿ ಮಗಳಿಗೆ ರಕ್ತಗತವಾಗಿ ಬಂದಂತಹ ವಿದ್ಯೆಯಾಗಿದೆ. ಹಾಗಾಗಿ ಗಾಯತ್ರಿಯವರ ಮೊದಲ ಶಿಲ್ಪಗುರುಗಳಾಗಿ ಅವರ ತಂದೆಯವರಾದ ಶ್ರೀ ಚಂದ್ರಶೇಖರ ಅವರು ಆ ಸ್ಥಾನವನ್ನು ಪಡೆಯುತ್ತಾರೆ. ತಂದೆಯವರ ಹತ್ತಿರ ವಿದ್ಯೆ ಮುಂದುವರೆಸುತ್ತಾ ಶಿಲ್ಪ ಕಲೆಯಲ್ಲಿ ಬಿಡದಿಯ ಕೆನರಾ ಬ್ಯಾಂಕ್ ನಡೆಸುವ ಕೆಪಿಜೆ ಪ್ರಭು ಕರಕುಶಲ ಕಲಾ ಕೇಂದ್ರದಲ್ಲಿ ಹದಿನೆಂಟು ತಿಂಗಳ ತರಬೇತಿಯನ್ನು ಮುಗಿಸಿ, ಬೆಂಗಳೂರು ವಿಶ್ವವಿದ್ಯಾಲಯದ ಸಾಂಪ್ರದಾಯಕ ಶಿಲ್ಪಕಲಾ ಗುರುಕುಲದಲ್ಲಿ ಬಿ.ಎಫ್.ಎ ಪದವಿಯನ್ನು ಪಡೆದಿದ್ದಾರೆ.

ಪ್ರಮುಖವಾಗಿ ಗಾಯತ್ರಿ ಎ.ಶಿಲ್ಪಿಯವರು ಸಾಂಪ್ರದಾಯಕ ಶೈಲಿಗಳಾದ ಚಾಲುಕ್ಯ, ಹೊಯ್ಸಳ, ಮತ್ತು ಚೋಳರ ಶೈಲಿಯಲ್ಲಿ ಪಂಚ ಲೋಹದ ಸರಸ್ವತಿ ಕಲ್ಲಿನಲ್ಲಿ ಕುಬೇರ, ಪಂಚಮುಖಿ ಗಣೇಶ, ಲಕ್ಷ್ಮೀ, ಜೋಡು ಕುದುರೆ, ಹಂಸ, ಸಿಂಹ, ದೇವರ ಮನೆ ಬಾಗಿಲು, ಮಂಟಪ, ಹೀಗೆ ಮುಂತಾದ ಶಿಲೆ ಮತ್ತು ಕಾಷ್ಟದಲ್ಲಿ ಶಿಲ್ಪಗಳನ್ನು ರಚಿಸಿದ್ದಾರೆ. ಅದೇ ರೀತಿಯಾಗಿ ಕುಂಭ ಕಲೆ ಮತ್ತು ಫೈಬರ್ ಮಾಧ್ಯಮದಲ್ಲೂ ಅನೇಕ ಕಲಾ ಕೃತಿಗಳು ರಚನೆಯಾಗಿವೆ.

ಗಾಯತ್ರಿ ಎ.ಶಿಲ್ಪಿಯವರು ಸಾಂಪ್ರದಾಯಕ ಕಲೆಯನ್ನಲ್ಲದೆ ಇಂದಿನ ಆಧುನಿಕ ಯುಗವನ್ನು ಆಳುತ್ತಿರುವ ಆಧುನಿಕ ಶಿಲ್ಪ ಕಲೆಯನ್ನು ಕೂಡ ರಚಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಇವರು ಭಾಗವಹಿಸಿರುವ ಪ್ರಮುಖ ಶಿಬಿರಗಳು

- 2005ರಲ್ಲಿ ಶಿಲ್ಪಕಲಾ ಅಕಾಡೆಮಿ ಆಯೋಜಿಸಿರುವ ಕಲಬುರಗಿಯಲ್ಲಿ ನಡೆದ ಫೈಬರ್ ಮಾಧ್ಯಮದ ಶಿಲ್ಪಕಲಾ ಶಿಬಿರ
- 2016ರಲ್ಲಿ ಯಾದಗಿರಿಯಲ್ಲಿ ನಡೆದ ಶಿಲಾಶಿಲ್ಪ ಶಿಬಿರ
- 2016ರಲ್ಲಿ ಮೈಸೂರು ದಸರಾ ಪ್ರಯುಕ್ತ ಶಿಲಾ ಶಿಲ್ಪಕಲಾ ಶಿಬಿರ.
- 2016ರಲ್ಲಿ ಹಂಪಿ ಉತ್ಸವ ಸಮಯದಲ್ಲಿ ನಡೆದ ಶಿಲಾ ಶಿಲ್ಪಕಲಾ ಶಿಬಿರ
- 2017ರಲ್ಲಿ ಕಲಬುರ್ಗಿಯ ಬುದ್ಧ ವಿಹಾರದಲ್ಲಿ ನಡೆದ ಶಿಲಾ ಶಿಲ್ಪಕಲಾ ಶಿಬಿರ
- ಇವರ ಪರಿಶ್ರಮಕ್ಕೆ ದೊರೆತ ಪ್ರಮುಖ ಪ್ರಶಸ್ತಿಗಳು.
- 2015ರ ಸಾಲಿನ ಶಿಲ್ಪಕಲಾ ಅಕಾಡೆಮಿಯ ವಾರ್ಷಿಕ ಪ್ರದರ್ಶನದಲ್ಲಿ 'ಕುಬೇರ' ಕೃತಿಗೆ ಪ್ರಶಸ್ತಿ ದೊರಕಿದೆ.
- ಡಿ.ವಿ.ಜಿ ಪಂಪ ಪ್ರಶಸ್ತಿ ಕಾರ್ಯಕ್ರಮದಲ್ಲಿ ಸನ್ಮಾನ ಅಲ್ಲದೇ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿ ಪುರಸ್ಕರಿಸಿದ್ದಾರೆ.

ಗಾಯತ್ರಿಯವರು ತಮ್ಮ ಜೀವನದ ಕುರಿತು ಹೇಳುವಂತೆ– ಚಿಕ್ಕವಳಿದ್ದಾಗ ಇವಳೇನು ಶಿಲ್ಪ ಕೆತ್ತನೆ ಮಾಡುತ್ತಾಳೆ' ಅನ್ನೋ ಸಮಾಜದ ಮಾತು ಬಹಳ ಕಾಡಿತ್ತು. ಅದೇ ಮಾತನ್ನು ಹಟವಾಗಿ ತೆಗೆದುಕೊಂಡೆ, ನಾನು ಹೆಣ್ಣು ನನ್ನಿಂದ ಶಿಲ್ಪ ಕೆತ್ತನೆ ಸಾದ್ಯವಿಲ್ಲ ಎಂದುಕೊಂಡವರಿಗೆ ಉತ್ತರ ನೀಡಿದ್ದೇನೆ. ಯಾವುದೋ ಒಂದು ವಿಚಾರ ನಮ್ಮ ತಂದೆಗೆ ಅವಮಾನ ಮಾಡಲಾಗಿತ್ತು. ವಂಶದ ಶಿಲ್ಪಕಲೆಯನ್ನು ಉಳಿಸಿ ಬೆಳೆಸುವುದು ಹೇಗೆ ಎಂದು ನೊಂದುಕೊಂಡಿದ್ದ ಅಪ್ಪಾಜಿಗೆ ನಾನು ಹೆಗಲಾದೆ. ಅವರು ಕಷ್ಟಪಟ್ಟು ಮಾಡಿಕೊಂಡು ಬಂದಿರುವ ಶಿಲ್ಪಕಲೆ ಕೆತ್ತನೆಯನ್ನು ಉಳಿಸಬೇಕು ಎಂಬ ಛಲದಿಂದ ಕೆತ್ತನೆ ಕಲಿತೆ, ಕಲ್ಲಿಗೆ ನೀಡುವ ಪ್ರತಿಯೊಂದು ಪೆಟ್ಟು ನನಗೆ ಬಿದ್ದಾಗಲೂ ಸಹಿಸಿಕೊಂಡು ಖುಷಿಪಟ್ಟಿದ್ದೇನೆ. ಶಿಲ್ಪ ಕೆತ್ತನೆಯಲ್ಲಿ ಸಾಹಸ ಮಾಡುವುದು ಸಾಮಾನ್ಯವಲ್ಲ. ಬದುಕಿನಲ್ಲಿ ನಾನು ತುಂಬಾ ಪ್ರೀತಿಸುವ ಶಿಲ್ಪಕಲೆ ನನಗೆ ಪ್ರೋತ್ಸಾಹ ನೀಡುತ್ತದೆ.

ಶಿಲ್ಪಕಲೆ ನನಗೆ ಆರಾಧನೆ. ಅದೇ ನನಗೆ ಸ್ಫೂರ್ತಿ ಮೂಲತಃ ತಂದೆಯವರ ಪ್ರೋತ್ಸಾಹ ಮತ್ತು ಅವರ ಕಲಾ ಕೌಶಲ್ಯ ನನ್ನನ್ನು ಸೆಳೆಯುತ್ತಿತ್ತು. ಕೆತ್ತನೆಯೊಂದಿಗೆ ಇನ್ನಷ್ಟು ದಾರಿಯನ್ನು ನಾನು ಸವೆಸಬೇಕಿದೆ. ಅದರ ಆಹ್ಲಾದ ಅನುಭವವನ್ನು ಆಸ್ವಾದಿಸಬೇಕಿದೆ.

ಶಿಲ್ಪಕಲೆ ಕೆತ್ತನೆ ಅನ್ನೋದು ಒಂದು ತಪಸ್ಸು ಇದೊಂದು ಧ್ಯಾನಸ್ಥ ಭಾವ ಇಲ್ಲಿ ಆಯಾ ದೇವರ ನಾಮಸ್ಮರಣೆಯನ್ನು ಮಾಡಬೇಕು ನಾವು ಮಾಡಲು ಇಚ್ಛಿಸುವ ವಿಗ್ರಹಕ್ಕೆ ತಕ್ಕಂತೆ ಅಳತೆ ಮತ್ತು ಗಾತ್ರದ ಕಲ್ಲನ್ನು ತೆಗೆದಿರಿಸಬೇಕು. ನಂತರ ನಾವು ಹಾಳೆಯ ಮೇಲೆ ವಿಗ್ರಹದ ಚಿತ್ರವನ್ನು ಬಿಡಿಸಿಕೊಂಡು ಅದನ್ನು ಕಲ್ಲಿಗೆ ಇಟ್ಟುಕೊಂಡು ವಿಗ್ರಹದ ಆಕಾರವನ್ನು ಹಾಕಿಕೊಳ್ಳಬೇಕು ಒಂದು ವಿಕೃತ ಕಲ್ಲನ್ನು ತಂದು ಅದಕ್ಕೆ ಆಕಾರ ಕೊಡುವಾಗ ಬೀಳುವ ಏಟುಗಳನ್ನು ಹಾಗೂ ಏಳುವ ಧೂಳಿನ ಜೊತೆಗೆ ಆಟವಾಡಬೇಕು. ಪ್ರಶಾಂತ ಭಾವ ನಮ್ಮನ್ನಾವರಿಸಬೇಕು. ಶಿಲ್ಪಕಲೆಗೆ ಮೊದಲು ಬೇಕಾಗಿರುವುದು ಏಕಾಗ್ರತೆ, ಆತ್ಮವಿಶ್ವಾಸ, ಮತ್ತು ತಾಳ್ಮೆ, ಸೂಕ್ಷ್ಮ, ಚಿತ್ರ ಮತ್ತು ಚಿತ್ತಾರಗಳು ತಪ್ಪದ ರೀತಿಯಲ್ಲಿ ಗಮನವಿರಬೇಕು. ಕೆತ್ತನೆಯಲ್ಲಿ ನಿರಂತರತೆ ಇದ್ದಾಗ ಮಾತ್ರ ಒಂದು ವಿಗ್ರಹವನ್ನು ಸರಿಯಾಗಿ ಮಾಡಬಹುದು. ಶಿಲ್ಪಕಲೆಯಲ್ಲಿ ಅದರದ್ದೇ ಆದ ಪದ್ಧತಿ ಮತ್ತು ಶಾಸ್ತ್ರಗಳಿವೆ. ಕೆತ್ತನೆಯ ಪದ್ಧತಿ, ನೀತಿ ನಿಯಮಗಳ ಬಗ್ಗೆ ನಾವು ತಿಳಿದಿರಬೇಕು ಎಂದು ಗಾಯತ್ರಿಯವರು ತಮ್ಮ ವೃತ್ತಿಯ ಕುರಿತು ವಿವರಿಸಿದ್ದಾರೆ. ಪ್ರಸ್ತುತ ಗಾಯತ್ರಿಯವರು ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿರುವುದು ನಮ್ಮೆಲ್ಲರ ಹೆಮ್ಮೆಯ ವಿಷಯ ಎಂದೆನ್ನಬಹುದಾಗಿದೆ.

ಗಾಯತ್ರಿ ಶಿಲ್ಪಿಯವರ ಕುರಿತು ಪತ್ರಿಕಾ ಲೇಖನಗಳು:

ಶಿವಕುಮಾರ ವೈ ದೇಶಮಾನೆ ಅಮರಶಿಲ್ಪಿ ಜಕಣಾಚಾರ್ಯ ಇವರಿಗೆ ಮಾದರಿ.

ರಾಜ ಮಹಾರಾಜರಿಂದ ಇಂದಿನವರೆಗೂ ಕಲ್ಲಿಗೆ ಒಂದು ರೂಪ ನೀಡಿ ಅದನ್ನು ಶಿಲ್ಪವನ್ನಾಗಿ ಮಾರ್ಪಡಿಸುತ್ತಿರುವುದು ಶಿಲ್ಪಿಗಳು. ಕಲ್ಲುಗಳನ್ನು ಹೂವಿನ ಹಾಗೆ ಅರಳಿಸಿ, ಅವುಗಳಿಗೆ ದೇವತೆಗಳ, ರಾಜ ಮಹಾರಾಜರ, ಸ್ಮಾರಕಗಳು ಹೀಗೆ ಹಲವಾರು ರೂಪಗಳನ್ನು ನೀಡುತ್ತಾರೆ. ಹಂಪಿ, ಬದಾಮಿ, ಐಹೊಳೆ, ಪಟ್ಟದಕಲ್ಲುಗಳಲ್ಲಿರುವ ಶಿಲಾಮೂರ್ತಿಗಳು ಹಲವು ಸ್ವರೂಪಗಳೊಂದಿಗೆ ಜನರಿಗೆ ಆಕರ್ಷಣೀಯವಾಗಿದೆ.

ಶಿಲ್ಪಗಳು ಎಂದ ತಕ್ಷಣ ನಮಗೆ ಹೊಳೆಯುವುದು ಪುರುಷನೇ ಹಿಂದಿನ ಕಾಲದಿಂದಲೂ ಈಗಿನವರೆಗೂ ಕಂಡು ಬರುವ ಬಹುತೇಕ ಶಿಲ್ಪಿಗಳು ಪುರುಷರೇ. ಆದರೆ ಇಲ್ಲೊಬ್ಬರು ಪುರುಷರನ್ನು ನಾಚಿಸುವಂತೆ ಶಿಲ್ಪಕಲಾಕೃತಿಯನ್ನು ರೂಪಿಸುತ್ತಾರೆ. ಗಾಯತ್ರಿ ಅಶ್ವಿನ್ ಕುಮಾರ.

ಹೌದು, ಇಲ್ಲಿಯವರೆಗೂ ನೂರಾರು ಶಿಲ್ಪಕಲಾಕೃತಿಗಳನ್ನು ನಿರ್ಮಿಸಿದ್ದಾರೆ. ಅವರು ಮೂಲತಃ ಕಲಬುರಗಿ ಜಿಲ್ಲೆಯವರು. ಈಗ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಧಾರವಾಡ ವಿಶ್ವವಿದ್ಯಾಲಯದಲ್ಲಿ ಎಂ.ಎ. ಮ್ಯೂಸಿಕ್ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ತಂದೆಯ ಮಾರ್ಗದರ್ಶನದಲ್ಲಿ ಶಿಲ್ಪಕಲಾ ಕೃತಿ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದಾರೆ. ಬೆಂಗಳೂರಿನ ಬಿಡದಿಯ ಕೆ.ಪಿ.ಜೆ ಪ್ರಭು ಕರಕುಶಲ ಕಲಾ ಕೇಂದ್ರದಲ್ಲಿ 18 ತಿಂಗಳ ಅವಧಿಯ ವೃತ್ತಿಪರ ಕೋರ್ಸ ಮುಗಿಸಿರುವ ಇವರು ಕಟ್ಟಿಗೆ ಮತ್ತು ಕಲ್ಲುಗಳಲ್ಲಿ ಕಲಾಕೃತಿಗಳನ್ನು ಅರಳಿಸುತ್ತಿದ್ದಾರೆ. ಜತೆಗೆ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ ಮೈಸೂರಿನಲ್ಲಿ ಬ್ಯಾಚುಲರ್ ಆಫ್ ಆರ್ಟ ಕೋರ್ಸನ ವ್ಯಾಸಂಗ ಮಾಡುತ್ತಿದ್ದಾರೆ.

ಸುಮಾರು 16ನೇ ವಯಸ್ಸಿನಲ್ಲಿಯೇ ಈ ಕಾಯಕದಲ್ಲಿ ತೊಡಗಿರುವ ಇವರು ಜಿಲ್ಲೆಯಲ್ಲಿ ನಡೆಯುತ್ತಿರುವ ರಾಜ್ಯ ಮಟ್ಟದ ಶಿಲ್ಪಕಲಾ ಅಕಾಡೆಮಿ ಕಾರ್ಯಗಾರದಲ್ಲಿ ಏಕೈಕ ಮಹಿಳಾ

ಶಿಲ್ಪಿಗಳಾಗಿದ್ದಾರೆ. ಸುಮಾರು 20 ಜನ ಶಿಲ್ಪಿಗಳು ಕೆಲಸ ಮಾಡುವ ಕಾರ್ಯಗಾರದಲ್ಲಿ ಬುದ್ಧ, ಬಸವಣ್ಣ, ಅಂಬೇಡ್ಕರ್, ಶಾಹು ಮಹಾರಾಜ್, ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಫುಲೆ, ಅಶೋಕ ಮಹಾರಾಜ, ಪುಟ್ಟರಾಜ ಗವಾಯಿಗಳು, ಅಶೋಕ ಸ್ಥಂಭ, ಜೇಡರ ದಾಸಿಮಯ್ಯನವರ ಮೂರ್ತಿ ರೂಪ ತಾಳಿವೆ. ಇವುಗಳಲ್ಲಿ ಗಾಯತ್ರಿಯವರು ಬುದ್ಧನ ವಿಗ್ರಹ ನಿರ್ಮಿಸಲಿದ್ದಾರೆ.

ಬೆಂಗಳೂರು, ಕಲಬುರಗಿ, ಜೇವರ್ಗಿಗಳಲ್ಲಿ ನಡೆದಿರುವ ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದರು. 2005ರಲ್ಲಿ ಕಲಬುರಗಿಯಲ್ಲಿ ನಡೆದ ರಾಜ್ಯ ಶಿಲ್ಪಕಲಾ ಅಕಾಡೆಮಿ ಫೈಬರ ಕ್ಯಾಂಪನಲ್ಲಿ ಭಾಗವಹಿಸಿದ್ದರು.

2016ರಲ್ಲಿ ಕರ್ನಾಟಕ ರಾಜ್ಯ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಜಿಲ್ಲೆಯಲ್ಲಿ ಕಲ್ಲಿಗೆ ಮೂರ್ತರೂಪ ನೀಡಲು ಸಿದ್ಧತೆ ನಡೆಸಿದ್ದಾರೆ. ಒಟ್ಟಾರೆ ಭಾರತೀಯ ಕಲೆ, ಸಂಸ್ಕೃತಿ, ಸಂಪ್ರದಾಯ ನಶಿಸಿ ಹೋಗುತ್ತಿರುವ ಸಂದರ್ಭದಲ್ಲಿ ಕಲೆಯನ್ನು ಉಳಿಸಿ ಬೆಳೆಸುತ್ತಿದ್ದಾರೆ.



ಶಿಲ್ಪಕಲಾಕೃತಿ ರಚನೆಯಲ್ಲಿ ತೊಡಗಿರುವ
ಗಾಯತ್ರಿ ಶಿಲ್ಪಿ



ಗಾಯತ್ರಿ ಶಿಲ್ಪಿ ಅವರು ರಚಿಸಿದ ಶಿಲಾ ಮಾಧ್ಯಮದ ಶಿಲ್ಪಕಲಾಕೃತಿ





ಗಾಯತ್ರಿ ಶಿಲ್ಪಿ ಅವರು ರಚಿಸಿದ
ಶಿಲಾ ಮಾಧ್ಯಮದ ಶಿಲ್ಪಕಲಾಕೃತಿಗಳು

ಸುಮಲತಾ ವ್ಹಿ. ಮಲ್ಹಾರ

ಸುಮಲತಾ ಅವರು 1984 ಅಕ್ಟೋಬರ್ ತಿಂಗಳಿನ ಹದಿನಾಲ್ಕನೇ ದಿನಾಂಕದಂದು ಲಕ್ಕುಂಡಿಯಲ್ಲಿ ಜನಿಸಿದರು. ಇವರ ತಂದೆಯವರು ವೀರಭದ್ರಪ್ಪ ಕವಲೂರು ಹಾಗೂ ತಾಯಿಯವರು ಶ್ರೀಮತಿ ಗಂಗೂಬಾಯಿ ವೀರಭದ್ರಪ್ಪ ಕವಲೂರ. ತಂದೆಯವರಾದ ವೀರಭದ್ರಪ್ಪ ಕವಲೂರು ಅವರು ಮೂಲತಃ ಸಾಂಪ್ರದಾಯಕ ಶಿಲ್ಪಕಲಾವಿದರು. ಆದ್ದರಿಂದ ಸುಮಲತಾ ಅವರು ಬಾಲ್ಯದಿಂದಲೂ ಶಿಲ್ಪಕಲೆಯನ್ನು ಹತ್ತಿರದಿಂದಲೇ ನೋಡಿಕೊಂಡು ಬೆಳೆದವರು. ತಂದೆಯವರೇ ಇವರಿಗೆ ಮೊದಲ ಗುರುವೆಂದು ಹೇಳಬಹುದು. ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸ ಮುಗಿಸಿದ ಇವರು ಸತತವಾಗಿ ತಂದೆಯೊಡನೆ ಪರಿಶ್ರಮದಿಂದ ಶಿಲ್ಪಕಲೆಯನ್ನು ಕಲಿಯಲು ಆರಂಭಿಸಿದರು. ತಂದೆಯವರ ಮಾರ್ಗದರ್ಶನದಲ್ಲಿ ಸಾಂಪ್ರದಾಯಿಕ ಶಿಲ್ಪಗಳನ್ನು ರಚಿಸುವಲ್ಲಿ ಸಿದ್ಧಹಸ್ತರಾಗುತ್ತಾರೆ. ಅನೇಕ ಶೈಲಿಯಲ್ಲಿ ವಿಗ್ರಹಗಳನ್ನು ರಚಿಸಿ, ಆಧುನಿಕದ ಭರಾಟೆಯಲ್ಲಿ ಅಳಿದು ಹೋಗುತ್ತಿರುವ ಕಲೆಯನ್ನು ಉಳಿಸಿ, ಬೆಳೆಸುವಲ್ಲಿ ಯಶಸ್ವಿಯಾಗಿದ್ದಾರೆ.

ಸುಮಲತಾ ಅವರು ಪ್ರಮುಖವಾಗಿ ಸಾಂಪ್ರದಾಯ ಶಿಲ್ಪಗಳನ್ನು ಮಾಡುತ್ತಿದ್ದರೂ ಆಧುನಿಕ ಶಿಲ್ಪದಲ್ಲಿಯು ತಮ್ಮ ಕೈಚಳಕವನ್ನು ತೋರಿಸಿದ್ದಾರೆ. ಸುಮಲತಾ ಅವರು ತಮ್ಮ ಶಿಲ್ಪಕೃತಿಗಳನ್ನು ಕಟ್ಟಿಗೆ ಮತ್ತು ಕಲ್ಲುಗಳಲ್ಲಿ ರಚಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸುಮಲತಾ ಅವರು ಅನೇಕ ಪ್ರದರ್ಶನಗಳಲ್ಲಿ ಹಾಗೂ ಶಿಬಿರಗಳಲ್ಲಿ ಭಾಗವಹಿಸಿ ತಮ್ಮ ಶಿಲ್ಪಕೃತಿಗಳನ್ನು ಅಭಿವ್ಯಕ್ತಿಸಿದ್ದಾರೆ. ಪ್ರಮುಖವಾಗಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು ಹಾಗೂ ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ ಸಂಯುಕ್ತಾಶ್ರಯದಲ್ಲಿ ರಾಜ್ಯ ಮಟ್ಟದ ಜನಪದ ಕಾಷ್ಠ ಶಿಲ್ಪಕಲಾ ಶಿಬಿರ, 2014 ಹಾಗೂ 2017ರಲ್ಲಿ ಗದಗಿನ ಲಕ್ಕುಂಡಿ ಉತ್ಸವ, 2014ರಲ್ಲಿ ಚಿತ್ರಕಲಾ ವಿದ್ಯಾಲಯಗಳು ನಿರ್ವಹಣಾ ಕೇಂದ್ರ ಹಾಗೂ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಸಂಯುಕ್ತಾಶ್ರಯದಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ಏರ್ಪಡಿಸಿದ್ದ ಶಿಲ್ಪಕಲಾ ಶಿಬಿರ, 2016ರ ಹಂಪಿ ಉತ್ಸವ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಕರ್ನಾಟಕ

ಶಿಲ್ಪಕಲಾ ಅಕಾಡೆಮಿ, ಬೆಂಗಳೂರು ಹಾಗೂ ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಪರಿಷತ್ತು, ಕಲಬುರಗಿಯ ಸಂಯೋಜನೆಯಲ್ಲಿ ಹಮ್ಮಿಕೊಂಡ ರಾಜ್ಯ ಮಟ್ಟದ ಸಂಪ್ರದಾಯ ಮತ್ತು ಸಮಕಾಲೀನ ಶಿಲಾ ಶಿಲ್ಪಕಲಾ ಶಿಬಿರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ಹಾಗೂ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಸಂಯುಕ್ತಾಶ್ರಯದಲ್ಲಿ ಜರುಗಿದ ರಾಜ್ಯ ಮಟ್ಟದ ಮಿಶ್ರ ಮಾಧ್ಯಮ ಶಿಲ್ಪಕಲಾ ಶಿಬಿರ, ನಾಗಪೂರಿನ ಸೌತ್ ಸೆಂಟ್ರಲ್ ಜೋನ್ ಕಲ್ಚರಲ್ ಸೆಂಟರ್ ಆಯೋಜಿಸಿರುವ ರಾಷ್ಟ್ರೀಯ ಶಿಲ್ಪಕಲಾ ಶಿಬಿರಗಳಲ್ಲಿ ಭಾಗವಹಿಸಿ ಕರ್ನಾಟಕದಾದ್ಯಂತ ಹಾಗೂ ಹೊರ ರಾಜ್ಯಗಳಲ್ಲಿ ಕೂಡ ತಮ್ಮ ಶಿಲ್ಪಗಳ ಅನಾವರಣಗೊಳಿಸಿದ್ದಾರೆ. ಇವರ ಶಿಲ್ಪಕಲಾ ಕ್ಷೇತ್ರದಲ್ಲಿನ ಆಸಕ್ತಿಯನ್ನು ಗಮನಿಸಿ ಅನೇಕ ಸಂಘ, ಸಂಸ್ಥೆಗಳು ಸನ್ಮಾನದ ಮೂಲಕ ಗೌರವವನ್ನು ನೀಡಿ ಪ್ರೋತ್ಸಾಹಿಸಿವೆ. ಇವರ ಈ ಸಾಧನೆಯನ್ನು ಗುರುತಿಸಿ ಶಿಲ್ಪಕಲಾ ಅಕಾಡೆಮಿಯು ಪ್ರಸ್ತುತ ಸಾಲಿನ ಅಕಾಡೆಮಿಯ ಸದಸ್ಯರನ್ನಾಗಿ ಆಯ್ಕೆ ಮಾಡಿರುವುದು ಶ್ಲಾಘನೀಯ.



ಶಿಲ್ಪಕಲಾಕೃತಿ ರಚನೆಯಲ್ಲಿ ತೊಡಗಿರುವ ಶಿಲ್ಪಕಲಾವಿದೆ ಸುಮಲತಾ



ತಮ್ಮ ಸಮಕಾಲಿನ ಶಿಲ್ಪದೊಂದಿಗೆ ಸುಮಲತಾ





ಸುಮಲತಾ ಅವರು ರಚಿಸಿದ
ಸಂಪ್ರಾದಾಯಕ ಶಿಲ್ಪಕಲಾಕೃತಿಗಳು

ಶೋಭಾ ಕಂಬಾರ

ಹೈದ್ರಾಬಾದ ಕರ್ನಾಟಕದ ಕಲಬುರಗಿಯ ಶ್ರೀಮತಿ ಶೋಭಾ ಈ. ಕಂಬಾರವರು ಕೂಡಾ ಶಾಸ್ತ್ರಬದ್ಧವಾಗಿ ಕಾಷ್ಠಶಿಲ್ಪಗಳನ್ನು ಮಾಡುವ ಮೂಲಕ ಸಾಂಪ್ರದಾಯಕ ಶಿಲ್ಪಕಲೆಯನ್ನು ಉಳಿಸಿ ಬೆಳೆಸುತ್ತಿರುವುದು ಗಮನಾರ್ಹ.

ಶ್ರೀಮತಿ ಶೋಭಾ ಈ ಕಂಬಾರವರು ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ 'ನರೋಣಾ' ಎಂಬ ಗ್ರಾಮದಲ್ಲಿ ಸುತಾರ ಮನೆತನದ ಶ್ರೀಯುತ ಶಂಕರಪ್ಪ ಮತ್ತು ಶಾರದಾ ಎಂಬ ದಂಪತಿಗಳಿಗೆ ಹಿರಿಯ ಮಗಳಾಗಿ ವಿಶ್ವಕರ್ಮ ಜನಾಂಗದಲ್ಲಿ 1970ರಲ್ಲಿ ಜನಿಸಿದರು.

ಶೋಭಾ ಕಂಬಾರವರಿಗೆ ಬಾಲ್ಯದಲ್ಲಿ ಕಲೆಯ ಕುರಿತು ಯಾವುದೇ ಆಸಕ್ತಿಯನ್ನು ಹೊಂದಿರಲಿಲ್ಲ. ಆದರೆ ಇವರ ಪ್ರೌಢಶಾಲಾ ಹಂತದ ಶೈಕ್ಷಣಿಕ ವಿದ್ಯಾಭ್ಯಾಸ ಮುಗಿದ ನಂತರ ಶಿಲ್ಪಿ ಈರಣ್ಣ.ಪಿ.ಕಂಬಾರವರನ್ನು ಧರ್ಮಪತಿಯಾಗಿ ಸ್ವೀಕರಿಸಿದರು. ಶ್ರೀಯುತ ಈರಣ್ಣ ಪಿ.ಕಂಬಾರವರು ಕಲಾವಿದರಾದ ಕಾರಣ ಶೋಭಾ ಅವರಲ್ಲಿರುವ ಕೌಶಲ್ಯತೆಯನ್ನು ಗಮನಿಸಿ ಚಿತ್ರಕಲೆಯಲ್ಲಿ ಅಭ್ಯಾಸ ಮಾಡಲು ಕಲಬುರಗಿಯ ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯಲ್ಲಿ ಪ್ರವೇಶ ಮಾಡಿಸಿದರು. ಆದ್ದರಿಂದ ಶ್ರೀಮತಿ ಶೋಭಾ ಈ ಕಂಬಾರವರಿಗೆ ಕಲೆಯ ಬಗ್ಗೆ ಆಸಕ್ತಿ ಹೆಚ್ಚಾಗಲು ಮೊದಲು ಬುನಾದಿ ಹಾಕಿಕೊಟ್ಟವರು ಇವರ ಧರ್ಮಪತಿಯಾದ ಈರಣ್ಣ ಪಿ.ಕಂಬಾರವರು ಶೋಭಾರವರು ಎರಡು ವರ್ಷದ ಡಿ.ಎಮ್.ಸಿ ತರಬೇತಿ ಮತ್ತು ಫೌಂಡೇಶನ್ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರು. ಆದರೆ ಕಾರಣಾಂತರಗಳಿಂದ ಇವರು ಡಿಪ್ಲೋಮಾ ಪದವಿ ಪೂರ್ಣಗೊಳಿಸಲಾಗಲಿಲ್ಲ.

ಶ್ರೀಮತಿ ಶೋಭಾರವರ ಶೈಕ್ಷಣಿಕ ಶಿಕ್ಷಣ ಅಪೂರ್ಣವಾಯಿತೆ ಹೊರತು ಅವರ ಕಲಾಭ್ಯಾಸ ನಿಲ್ಲಲಿಲ್ಲ. ಪತಿಯ ಜೊತೆ ಮನೆಯಲ್ಲಿಯೇ ಕಾಷ್ಠಶಿಲ್ಪದಲ್ಲಿ ಮಂಟಪ, ದ್ವಾರ, ಬಾಗಿಲು, ರಥದ ಶಿಖರ, ದೇವರ ಮನೆ ಹಾಗೂ ವಿಗ್ರಹಗಳ ರಚನೆಯನ್ನು ಅತಿ ಸೂಕ್ಷ್ಮವಾದ ವಿನ್ಯಾಸಗಳಿಂದ ಅಲಂಕೃತವಾಗಿ ಸೃಜನಾತ್ಮಕವಾಗಿ ನಿರ್ಮಿಸುವಲ್ಲಿ ಕರಕುಶಲರಾಗಿದ್ದಾರೆ. ಈ

ರೀತಿಯಾಗಿ ಶೋಭಾರವರು ಶಿಲ್ಪಕಲೆಯನ್ನು ತಮ್ಮ ವೃತ್ತಿ ಹಾಗೂ ಪ್ರವೃತ್ತಿಯನ್ನಾಗಿಸಿಕೊಂಡಿರುವರು. ಮನೆಗಳ ದ್ವಾರ ಬಾಗಿಲು, ಹೊಸ್ತಿಲು, ಪಟ್ಟುಗಳಲ್ಲಿ ಸುಂದರವಾದ ಕುಸುರಿ ಕಲೆಯನ್ನಲ್ಲದೇ ಜಾನಪದ ಹಾಗೂ ಪೌರಾಣಿಕ ವಿಷಯಗಳ ಅಳವಡಿಕೆಯನ್ನು ಶೋಭಾರವರು ತುಂಬಾ ಆಕರ್ಷಕವಾಗಿ ಅಳವಡಿಸಿಕೊಂಡಿದ್ದಾರೆ. ಇವರ ಕಾಷ್ಠ ಶಿಲ್ಪಗಳಲ್ಲಿ ಪ್ರಮುಖವಾಗಿ ಹೊಯ್ಸಳ ಶೈಲಿಯ ಅಲಂಕಾರಿಕ ವಿನ್ಯಾಸಗಳನ್ನು ಕಾಣಬಹುದು. ಒಟ್ಟಾರೆಯಾಗಿ ಇವರು ರಚಿಸುವ ಶೈಲಿಯು ಸಮ್ಮಿಶ್ರ ಶೈಲಿ ಎಂದೆನ್ನಬಹುದು.

ಇವರು 1985ರಿಂದ ಮೈಸೂರು ದಸರಾ ಉತ್ಸವಕ್ಕಾಗಿ ಕಲಬುರ್ಗಿಯನ್ನು ಪ್ರತಿನಿಧಿಸುವ ಸ್ತಬ್ದಚಿತ್ರಗಳ ಪ್ರದರ್ಶನಗಳಲ್ಲಿ ದಂಪತಿಗಳಿಬ್ಬರೂ ತೊಡಗಿಸಿಕೊಂಡು ಕ್ರಿಯಾಶೀಲತೆಯನ್ನು ಮೆರೆಯುತ್ತಿದ್ದಾರೆ.

ಶ್ರೀಮತಿ ಶೋಭಾರವರ ಕಾಷ್ಠಶಿಲ್ಪದಲ್ಲಿರುವ ಕೌಶಲ್ಯವನ್ನು ಹಾಗೂ ಅವರು ಶಿಲ್ಪಕಲೆಯ ಸಾಧನೆಯನ್ನು ಗುರತಿಸಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಪ್ರಸ್ತುತ 2016ನೇ ಸಾಲಿನ ಗೌರವ ಪುರಸ್ಕಾರವನ್ನು ನೀಡಿ ಗೌರವಿಸಲಾಗಿದೆ.

ಕಾಷ್ಠ ಶಿಲ್ಪವನ್ನು ತಮ್ಮ ಪ್ರವೃತ್ತಿಯಾಗಿ ಸ್ವೀಕರಿಸುವ ಇವರ ಕುಟುಂಬವು ಇದರಲ್ಲಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟಿದಾರೆ. ಶಿಲ್ಪಿ ಈರಣ್ಣ ಪಿ.ಕಂಬಾರವರು 'ವೃತ್ತಿ ಹೊಟ್ಟೆಗಾಗಿ ಪ್ರವೃತ್ತಿ ಆನಂದಕ್ಕಾಗಿ' ಎನ್ನುವಂತೆ ಪತಿಯ ಮಾರ್ಗದರ್ಶನದಂತೆ ಶೋಭಾರವರು ಅದನ್ನೆ ಪಾಲಿಸುತ್ತಾ ವೃತ್ತಿ ಪ್ರವೃತ್ತಿಗಳೆರಡು ಒಂದೇ ಆಗಿರುವುದರಿಂದ ಶ್ರಮವಹಿಸಿ ಕಲೆಯನ್ನು ಆಳವಾಗಿ ಗ್ರಹಿಸಬೇಕೆಂದು ಹೇಳುತ್ತಾರೆ.



ಶೋಭಾ ಈರಣ್ಣಾ ಕಂಬಾರ ಅವರು ತಮ್ಮ ಕಲಾಕೃತಿ ರಚನೆಯಲ್ಲಿ





ಶೋಭಾ ಈರಣ್ಣಾ ಕಂಬಾರ ಅವರ ಕಾಷ್ಠ ಶಿಲ್ಪಗಳು

ಬಸಮ್ಮ ಎಮ್. ನರಗುಂದ

ಬಸಮ್ಮ ಎಮ್. ನರಗುಂದ ಅವರು 1979ರಲ್ಲಿ ಜುಲೈನ 22ನೇ ದಿನಾಂಕದಂದು ಹುಟ್ಟಿದರು. ಹುಟ್ಟಿನಿಂದ ಬಸಮ್ಮನವರು ಮೂಕಿ ಹಾಗೂ ಕಿವಿ ಕೇಳಿಸದು, ಆದರೂ ಈ ನ್ಯೂನತೆಯನ್ನು ಪಾಪವೆಂದು ಭಾವಿಸದೆ ಛಲದಿಂದ ಕ್ರಿಯಾಶೀಲರಾಗಿದ್ದಾರೆ. ನರಗುಂದರವರು ಕನ್ನಡ ವಿಶ್ವವಿದ್ಯಾಲಯದ ಬಾದಾಮಿಯಲ್ಲಿ ಶಿಲ್ಪ ಮತ್ತು ಚಿತ್ರಕಲಾ ವಿಭಾಗದಲ್ಲಿ ಡಿಪ್ಲೋಮಾ ಪಡೆದರು. ಹಾಗೂ ಎಂ.ಎಫ್.ಎ ಪದವಿಯನ್ನು ಕೂಡ ಕನ್ನಡ ವಿಶ್ವವಿದ್ಯಾಲಯದಲ್ಲಿ ಪಡೆಯಲು ಬಯಸಿದ್ದಾರೆ.

ಈ ರೀತಿಯಾಗಿ ಶಿಲ್ಪಕಲೆಯನ್ನು ಕಲಿತ ಬಸಮ್ಮನವರು ಶಿಲ್ಪಕಲೆಯನ್ನು ತಮ್ಮ ಸಾಧನಾ ಕ್ಷೇತ್ರವಾಗಿಸಿಕೊಂಡು ಅದರಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ. ಭೂಮಿಯನ್ನು ಹೊತ್ತು ನಿಂತ ಮಹಿಳೆ, ಕ್ರಿಯೇಟಿವ್ ಹೆಡ್, ಕಾಳಿಂಗ ಮರ್ದನ... ಹೀಗೆ ಅನೇಕ ಶಿಲ್ಪಗಳನ್ನು ವಿಶೇಷವಾಗಿ ಕಟ್ಟಿಗೆ ಮತ್ತು ಕಲ್ಲಿನಲ್ಲಿ ಸೃಷ್ಟಿಸಿದ್ದಾರೆ. ಬಸಮ್ಮರವರು ಮೂಲತಃ ಸಾಂಪ್ರದಾಯ ಶಿಲ್ಪಕಲಾವಿದರಾಗಿದ್ದರೂ ಆಧುನಿಕ ಶಿಲ್ಪಕಲೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಬಸಮ್ಮನವರು ಭಾಗವಹಿಸಿದ ಶಿಬಿರಗಳು ಮತ್ತು ಪ್ರದರ್ಶನಗಳು

2000ರಲ್ಲಿ ಬಾದಾಮಿಯ ಚಾಲುಕ್ಯ ಉತ್ಸವ.

2000ರಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ನುಡಿ ಹಬ್ಬ.

2000ರಲ್ಲಿ ಬಾದಾಮಿಯಲ್ಲಿ 'World heritage Day' ಎಂಬ ಶಿಲ್ಪಕಲಾ ಶಿಬಿರ

2001ರಲ್ಲಿ ಬೆಳಗಾವಿಯಲ್ಲಿ ವಿಭಾಗ ಮಟ್ಟದ ಕಲಾಮೇಳ

2002ರಲ್ಲಿ ಬಾದಾಮಿಯಲ್ಲಿ 'World heritage Day' ಎಂಬ ಶಿಲ್ಪಕಲಾ ಶಿಬಿರ

2002ರಲ್ಲಿ ಇಲಕಲ್‌ನಲ್ಲಿ ದಶಮಾನೋತ್ಸವ ಶಿಲ್ಪಕಲಾ ಪ್ರದರ್ಶನ

2002ರಲ್ಲಿ ಬಾದಾಮಿಯಲ್ಲಿ ಶಿಲ್ಪಕಲಾ ಶಿಬಿರ.

2003ರಲ್ಲಿ ಬಾದಾಮಿಯಲ್ಲಿ 'World heritage Day' ಎಂಬ ಶಿಲ್ಪಕಲಾ ಶಿಬಿರ

2003ರಲ್ಲಿ ಬೆಂಗಳೂರಿನ ಶಿಲ್ಪಕಲಾ ಅಕಾಡೆಮಿಯ 32ನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನ

2003ರಲ್ಲಿ ಬನಶಂಕರಿಯಲ್ಲಿ ವಾರ್ಷಿಕ ಕಲಾಪ್ರದರ್ಶನ

2004ರಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ 'ನುಡಿಹಬ್ಬ'

2005ರಲ್ಲಿ ಬಾದಾಮಿಯಲ್ಲಿ ಸಾಂಪ್ರದಾಯಕ ಶಿಲ್ಪಕಲಾ ಶಿಬಿರ.

2006ರಲ್ಲಿ ಬಾದಾಮಿಯಲ್ಲಿ ಸಾಂಪ್ರದಾಯಕ ಶಿಲ್ಪಕಲಾ ಶಿಬಿರ.

2007ರಲ್ಲಿ ಬೆಂಗಳೂರಿನಲ್ಲಿ ಆಧುನಿಕ ಶಿಲ್ಪಕಲಾ ಶಿಬಿರ.

2010ರಲ್ಲಿ ಇಲಕಲ್‌ನಲ್ಲಿ ಶಿಲ್ಪಕಲಾ ಶಿಬಿರ.

2010ರಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ಶಿಲ್ಪಕಲಾ ಶಿಬಿರ.

2012ರಲ್ಲಿ ಬೆಂಗಳೂರಿನಲ್ಲಿ ಆಧುನಿಕ ಶಿಲ್ಪಕಲಾ ಶಿಬಿರ.

2014ರಲ್ಲಿ ಶಿವಮೊಗ್ಗದ ಕುಪ್ಪಳ್ಳಿಯಲ್ಲಿ ಶಿಲ್ಪಕಲಾ ಶಿಬಿರ.

ಹೀಗೆ ಅನೇಕ ಪ್ರದರ್ಶನಗಳಲ್ಲಿ ಹಾಗೂ ಶಿಬಿರಗಳಲ್ಲಿ ತಮ್ಮ ಅಮೂಲ್ಯವಾದ ಶಿಲ್ಪಗಳನ್ನು ಪ್ರದರ್ಶನ ಮಾಡಿದ್ದಾರೆ. ಇವರ ಈ ಸಾಧನೆಗೆ ಪಟ್ಟದಕಲ್ಲಿನ ಚಾಲುಕ್ಯ ಉತ್ಸವದಲ್ಲಿ ಇವರಿಗೆ ಸನ್ಮಾನಿಸಿ ಗೌರವ ನೀಡಲಾಗಿದೆ.

ಬಸಮ್ಮ ಅವರ ಕುರಿತು ಪತ್ರಿಕಾ ಲೇಖನಗಳು

ಬಸಮ್ಮ ಬಹುಪರಾಕ್

ಮೌನಿಯ ಮಾತನಾಡುವ ಶಿಲ್ಪಗಳು

ಪ್ರವೀಣರಾಜು ಎಸ್. ಸೊನ್ನದ.

ಇವರನ್ನು ನೋಡಿದರೆ ಇವರಿಗೇನು ಮಾತುಬಾರದು ಎಂದೆನಿಸುವುದೇ ಇಲ್ಲ. ಸದಾ ಹಸನ್ಮುಖಿಯಾಗಿರುವ ಬಸಮ್ಮ ಹುಟ್ಟು ಮೂಕಿ, ಕಿವಿ ಕೇಳಿಸದು, ಆದರೂ ನ್ಯೂನತೆಯನ್ನು ಶಾಪವೆಂದು ಭಾವಿಸದೆ ಛಲದಿಂದ ಕ್ರಿಯಾಶೀಲರಾಗಿದ್ದಾರೆ.

ನರಗುಂದ ಕನ್ನಡ ವಿಶ್ವವಿದ್ಯಾಲಯದ ಬಾದಾಮಿಯಲ್ಲಿರುವ ಶಿಲ್ಪ ಮತ್ತು ಚಿತ್ರಕಲಾ ವಿಭಾಗದಲ್ಲಿ ಡಿಪ್ಲೋಮಾ ಪಡೆದ ಬಸಮ್ಮ, ಶಿಲ್ಪಕಲೆಯಲ್ಲಿ ಸಾಧನೆ ಮಾಡುತ್ತ ಇತರರಿಗೆ ಮಾದರಿಯಾಗಿದ್ದಾರೆ. ಡಿಪ್ಲೋಮಾದ ನಂತರ ಶಿಲ್ಪಕಲೆಯಲ್ಲಿ ಪದವಿ ಪ್ರವೇಶ ಪಡೆದು; ಉಳಿಸುತ್ತಿಗೆಗಳನ್ನು ಹಿಡಿದು ಶಿಲ್ಪಗಳನ್ನು ಕೆತ್ತಿದ್ದಾರೆ. ಭೂಮಿಯನ್ನು ಹೊತ್ತು ನಿಂತ ಮಹಿಳೆ, ಕ್ರಿಯೇಟಿವ್ ಹೆಡ್, ಕಾಳಿಂಗ ಮರ್ದನ, ಹೀಗೆ ಅನೇಕ ಶಿಲ್ಪಗಳನ್ನು ಸೃಷ್ಟಿಸಿದ್ದಾರೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗದಲ್ಲಿ ಇವರೇ ಕೆತ್ತಿರುವ 'ಭೂಮಿ ಹೊತ್ತ ಮಹಿಳೆ'ಯನ್ನು ಇಡಲಾಗಿದೆ. ಇಷ್ಟೇ ಅಲ್ಲ, ಬಸಮ್ಮ ಪಟ್ಟದಕಲ್ಲು ಉತ್ಸವ, ಕನ್ನಡ ಸಾಹಿತ್ಯ ಸಮ್ಮೇಳನ, ಲಲಿತ ಕಲಾ ಅಕಾಡೆಮಿ, ಚಿತ್ರಕಲಾ ಪರಿಷತ್, ಕರಕುಶಲ ಕಲೆ ಮೊದಲಾದ ಹತ್ತು ಹಲವು ಕಲಾ ಪ್ರದರ್ಶನಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿ ಜನಮೆಚ್ಚುಗೆ ಗಳಿಸಿದ್ದಾರೆ.

ಸದ್ಯ ಬಾದಾಮಿಯ ಚಿತ್ರಕಲೆ ಮತ್ತು ಶಿಲ್ಪಕಲಾ ವಿಭಾಗದಲ್ಲಿ ವಿದ್ಯಾರ್ಥಿಗಳಿಗೆ ಶಿಲ್ಪಕಲೆ ಕುರಿತಂತೆ ಮಾರ್ಗದರ್ಶನ ಮಾಡುತ್ತಿರುವ ಇವರು ಮೊದಲಿನಿಂದಲೂ ಸಾಮಾನ್ಯ ವಿದ್ಯಾರ್ಥಿಗಳ

ಶಾಲೆಯಲ್ಲಿಯೇ ಅಭ್ಯಾಸ ಮಾಡಿದ್ದಾರೆ. ಚಿಕ್ಕಂದಿನಿಂದಲೂ ಚಿತ್ರಕಲಾ ಶಿಕ್ಷಕಿಯಾಗಬೇಕೆಂಬ ಮಹದಾಸೆಯನ್ನು ಈಡೇರಿಸಿಕೊಂಡಿದ್ದಾರೆ.

ಖಾಸಗಿ ವಾಹಿನಿಯ ರಿಯಾಲಿಟಿ ಶೋನಲ್ಲಿ ಸ್ಪರ್ಧಿಸಿ, ಬಹುಮಾನ ಗೆದ್ದುಕೊಂಡಿದ್ದಾರೆ. ಕಲ್ಲು ಕೊರೆಯುವ ಅತ್ಯಾಧುನಿಕ ಮಶೀನ್ ಸ್ಥಾಪಿಸುವ, ಕಲಾಕೃತಿಗಳನ್ನು ರಚಿಸುವ ಗುರಿ ಹೊಂದಿರುವ ಬಸಮ್ಮ ತಮ್ಮ ಮನದಾಶೆಯನ್ನು ನಗುನಗುತ್ತಲೇ ಕೈಸನ್ನೇ ಮೂಲಕ ವಿವರಿಸುತ್ತಾರೆ. ಹ್ಯಾಟ್ಸಾಫ್ ಬಸಮ್ಮ.




ಬಸಮ್ಮ ಅವರು ಶಿಲ್ಪಕಲಾ ರಚನೆಯಲ್ಲಿ ತೊಡಗಿರುವುದು



ಬಸಮ್ಮ ಅವರು ರಚಿಸಿದ ಶಿಲಾ ಮಾಧ್ಯಮದ ಶಿಲ್ಪಕಲಾಕೃತಿ





ಬಸಮ್ಮ ಅವರು ರಚಿಸಿದ
ಸಮಕಾಲಿನ ಶಿಲಾ ಶಿಲ್ಪಗಳು

ಅಧ್ಯಾಯ–ನಾಲ್ಕು

ಕರ್ನಾಟಕದ ಸಮಕಾಲಿನ ಶಿಲ್ಪಕಲಾವಿದೆಯರ ಜೀವನ ಮತ್ತು ಕಲಾಕೃತಿಗಳು

ಭಾರತದಲ್ಲಿ ಕ್ರಮೇಣವಾಗಿ ಸಂಪ್ರದಾಯದ ಬೇರುಗಳೊಂದಿಗೆ ಆಧುನಿಕ ಕಲೆಯು ಬೆಳದಂತೆ, ಕರ್ನಾಟಕದಲ್ಲಿಯು ಅದರ ಪರಿಣಾಮವಾಗ ತೊಡಗಿತು. ಕರ್ನಾಟಕದ ಕಲಾವಿದರು ಕೂಡ ಆಧುನಿಕ ಶಿಲ್ಪಗಳನ್ನು ಮಾಡತೊಡಗಿದರು. ರಾಜ್ಯದ ಆಧುನಿಕ ಶಿಲ್ಪಕಲೆ ಬೆಳೆದು ಬಂದ ದಾರಿಯನ್ನು ಗಮನಿಸಿದಾಗ ಪ್ರಾರಂಭದ ದಿನಗಳಲ್ಲಿ ಅಂತಹ ಆಶಾದಾಯಕವಾದ ಬೆಳವಣಿಗೆ ಕಂಡು ಬರುವುದಿಲ್ಲ. ಆದರೆ ಕ್ರಮೇಣವಾಗಿ ಕಲಾವಿದರು. ಸಮಕಾಲೀನ ಶಿಲ್ಪಕೃತಿಗಳನ್ನು ರಚಿಸುವಲ್ಲಿ ಪ್ರಗತಿಯನ್ನು ಸಾಧಿಸಿದರು. ಆಗ ಮಹಿಳಾ ಶಿಲ್ಪಿಗಳು ಕೂಡ ಸಮಕಾಲೀನ ಶಿಲ್ಪಕೃತಿಗಳನ್ನು ರಚಿಸುವಲ್ಲಿ ತಮ್ಮ ಕೌಶಲ್ಯವನ್ನು ವ್ಯಕ್ತಪಡಿಸಿದರು. ಅದರಲ್ಲಿ ಪ್ರಮುಖವಾದ ಕಲಾವಿದರೆಂದರೆ:

1) ಶೀಲಾಗೌಡ
2) ಪುಷ್ಪಮಾಲಾ
3) ಎಮ್.ಶಾಂತಮಣಿ
4) ಡಾ.ಬಿ.ಆರ್.ಗೀತಾಂಜಲಿ
5) ರಂಜನಿ ಶೆಟ್ಟರ್
6) ದೇವಿಪ್ರಿಯಾ ವಿಮಲನಾಥನ್

ಶೀಲಾಗೌಡ

ಶೀಲಾಗೌಡ ರವರು 1957ರಲ್ಲಿ ಬೆಂಗಳೂರಿನ ಭದ್ರಾವತಿಯಲ್ಲಿ ಜನಿಸಿದರು. ಶೀಲಾಗೌಡ ಅವರ ಕಲಾಶಿಕ್ಷಣವು 1979ರಲ್ಲಿ ಪ್ರಾರಂಭವಾಯಿತು. 1979ರಲ್ಲಿ ಒಂದು ವರ್ಷದ ಅವಧಿಯವರೆಗೆ ಖ್ಯಾತ ಕಲಾವಿದರಾದ ದಿವಂಗತ ಕೆ.ಜಿ.ಸುಬ್ರಮಣ್ಯಂ ರವರ ಅಡಿಯಲ್ಲಿ ಕಲಿಕೆಯನ್ನು ಪ್ರಾರಂಭಿಸಿದರು. 1980ರಿಂದ 1982ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಬಿ.ಎಫ್.ಎ ಪದವಿಯನ್ನು ಪಡೆದರು. ನಂತರ ಶಾಂತಿನಿಕೇತನದ ವಿಶ್ವಭಾರತಿ ವಿಶ್ವವಿದ್ಯಾಲಯದಲ್ಲಿ 1982ರಲ್ಲಿ ಚಿತ್ರಕಲೆಯಲ್ಲಿ ಪೋಸ್ಟ ಡಿಪ್ಲೋಮಾ ಪದವಿಯನ್ನು ಪಡೆದು. ನಂತರ ಉನ್ನತ ವ್ಯಾಸಂಗಕ್ಕಾಗಿ ಲಂಡನ್ನಿನ ರಾಯಲ್ ಕಾಲೇಜ್ ಆಫ್ ಆರ್ಟ್‌ನಲ್ಲಿ ಎಮ್.ಎ. ಪದವಿಯನ್ನು ಪಡೆದರು. ವ್ಯಾಸಾಂಗ ಪೂರ್ಣಗೊಳ್ಳುತ್ತಿದ್ದಂತೆ ಪ್ಯಾರಿಸನ Cite International Des Arts ನಲ್ಲಿ ಮೂರು ತಿಂಗಳ ಕಾಲ ತಮ್ಮ ಕಲೆಯನ್ನು ವ್ಯಕ್ತಪಡಿಸಿದರು.

ಶೀಲಾಗೌಡರವರು ವರ್ಣ ಚಿತ್ರಕಾರರಾಗಿ ತರಬೇತಿಯನ್ನು ಪಡೆದಿದ್ದರೂ, ಅವರ ಅಭ್ಯಾಸವನ್ನು ಶಿಲ್ಪಕಲೆ ಮತ್ತು ಪ್ರತಿಷ್ಠಾಪನಾ ಕಲೆಗೆ ವಿಸ್ತರಿಸಿದರು. ಹಾಗೂ ನಂತರ ಛಾಯಾಗ್ರಹಣವನ್ನು ಅಳವಡಿಸಿಕೊಂಡಿದ್ದಾರೆ. ಹಸು ಸಗಣಿ, ಧೂಪದ್ರವ್ಯ, ಮತ್ತು ಕುಂಕುಮ ಪುಡಿಗಳಂತಹ ಸಾಮಾನ್ಯ ಸ್ಥಳೀಯ ವಸ್ತುಗಳನ್ನು ಬಳಸಿ ಧಾರ್ಮಿಕತೆಯಿಂದ ಸಕ್ರಿಯವಾಗಿರುವ ಅಮೂರ್ತತೆಯ ಭಾಷಾವೈಶಿಷ್ಟ್ಯದಲ್ಲಿ ಪ್ರಕ್ರಿಯೆ ಆಧಾರಿತ ಕೃತಿಗಳನ್ನು ನಿರ್ಮಿಸುತ್ತಾರೆ.

ಶೀಲಾಗೌಡರ ಪ್ರಸಿದ್ಧ ಕೃತಿ 'ಡಾರ್ಕ ರೂಮ್' 2006ರ ಅನುಸ್ಥಾಪನೆಯ ಡಾರ್ಕರೂಮ್ ಬಹುಶಃ ಶೀಲಾ ಅವರ ಅತ್ಯಂತ ಪ್ರಸಿದ್ಧ ಕೃತಿ, ಇದು ಭಾರತ ಮತ್ತು ವಿದೇಶಗಳಲ್ಲಿ ವ್ಯಾಪಕವಾಗಿ ಪ್ರದರ್ಶಿಸಲ್ಪಟ್ಟಿದೆ. ಶೀಲಾ ಅವರು ತಾರ್ ಡ್ರಮ್ಸ್ ಮತ್ತು ಮೆಟಲ್ ಶೀಟ್‌ಗಳನ್ನು ಒಟ್ಟುಗೂಡಿಸಿದರು, ಇದು ದುರ್ಬಲ ಕಾರ್ಮಿಕ ವರ್ಗದ ಜೀವನದ ಬಗ್ಗೆ ಯಾವುದೇ ಸಾಮಾಜಿಕ ಅಧ್ಯಯನವನ್ನು ಮಾಡುವ ಪ್ರಯತ್ನವಲ್ಲ, ಬದಲಿಗೆ ವಿಭಿನ್ನ ದೃಷ್ಟಿಕೋನವನ್ನು ನೀಡುತ್ತದೆ.

ಅವರ ಸಾಮರ್ಥ್ಯವು ಕಲಾವಿದನನ್ನು ಆಕರ್ಷಿಸುತ್ತದೆ. 'ದ ಡಾರ್ಕರೂಮ್' ಸಣ್ಣ ಕೋಣೆಯನ್ನು ಹೊಂದಿದೆ. ಅಲ್ಲಿ ಕಾರ್ಮಿಕರು ಮತ್ತು ಅವರ ಕುಟುಂಬ ವಾಸಿಸುತ್ತಾರೆ. ಸೀಮಿತ ಸ್ಥಳಕ್ಕೆ ಸರಿಹೊಂದುವಂತೆ ತಮ್ಮ ದೇಹವನ್ನು ನಿರ್ದೇಶಿಸುತ್ತಾರೆ. ಚಪ್ಪಟೆ ಲೋಹದ ಹಾಳೆಯಿಂದ ಮಾಡಿದ ಮೇಲ್ಛಾವಣಿಯಲ್ಲಿ ಸಣ್ಣ ರಂದ್ರಗಳನ್ನು ಕೊರೆದಿರುತ್ತಾರೆ. ಬೆಳಕು ರಂಧ್ರಗಳ ಮೂಲಕ ಒಳಗಡೆ ಬಂದು, ಕಿರಿದಾದ ಆಂತರಿಕವನ್ನು ಕಿರಿದಾದ ಕಿರಣಗಳಿಂದ ತುಂಬಿಸುತ್ತದೆ. ಮೇಲ್ಛಾವಣೆಯ ಸಣ್ಣ ರಂಧ್ರಗಳು ನಕ್ಷತ್ರಗಳ ಸಮೂಹವನ್ನು ನೆನಪಿಸುತ್ತವೆ. ಈ ರಂಧ್ರಗಳ ಮೂಲಕ ಬೆಳಕಿನ ಚುಚ್ಚುವಿಕೆಯು ಒಳಾಂಗಣದ ಸೀಮಿತ ಜಾಗವನ್ನು ಅಪರಿಮಿತವಾದ ಸಂಪೂರ್ಣ ಭಾಗದ ಪರಿಣಾಮದಂತೆ ಕಾಣುತ್ತದೆ. ಈ ಕೆಲಸದ ಮೂಲಕ ಶೀಲಾ ಅವರು ಕಠೋರ ಬಾಹ್ಯವನ್ನು ಜತೆಗೂಡಿಸಿ ತತ್ವಶಾಸ್ತ್ರವನ್ನು ಪರಿಶೋಧಿಸುತ್ತಾರೆ.

ಸ್ಥಳೀಯ ವಸ್ತುಗಳು ಹೆಚ್ಚು ಸಮಾಜವನ್ನು ತಲುಪುವಲ್ಲಿ ಯಶಸ್ವಿಯಾಗುತ್ತವೆ. ಶೀಲಾ ಭಾರತೀಯ ಸಾರ್ವಜನಿಕರಿಗೆ ಹೆಚ್ಚು ಪರಿಚಿತವಾಗಿರುವ ಅಂಶಗಳೊಂದಿಗೆ ಕಾರ್ಯನಿರ್ವಹಿಸುತ್ತಾರೆ. ಈ ಅಂಶಗಳ ಸ್ವಾಭಾವಿಕ ಮೌಲ್ಯವನ್ನು ಅವರು ತಮ್ಮ ವಸ್ತುವನ್ನು ತಮ್ಮ ಆಳವಾದ ಅರ್ಥಕ್ಕೆ ಬಳಸುತ್ತಾರೆ. ಶೀಲಾ ಅವರ ಕಲೆ ವಿಲೀನಗೊಳಿಸುವ ಒಂದು ಸಂಕೀರ್ಣವಾದ ಪ್ರಕ್ರಿಯೆಯಾಗಿದ್ದು, ದೃಶ್ಯ ಸಂವಹನ, ಪರಿಕಲ್ಪನೆಗಳು ಮತ್ತು ಗ್ರಹಿಕೆ ವಿಧಾನಗಳನ್ನು ಒಳಗೊಂಡಿರುತ್ತದೆ. ಹಸು ಸಗಣಿ, ಕುಂಕುಮ, ದಾರ, ಚಿನ್ನದ ಎಲೆ, ತೆಂಗಿನ ನಾರು ಮತ್ತು ಇತರ ಮಣ್ಣಿನ ಸಾಮಾಗ್ರಿಗಳು ಶೀಲಾ ಅವರ ಮೇಲೆ ಪ್ರಭಾವ ಬೀರಿವೆ. ಭಾರತೀಯ ಸಮಾಜದಲ್ಲಿ ಹಸು ಹಾಗೂ ಅದರ ವಸ್ತುವಿನ ಬಳಕೆಯೊಂದಿಗೆ ದ್ವಿಗುಣ ಗುರುತನ್ನು ಹೊಂದಿದೆ. 90ರ ದಶಕವನ್ನು ಮರೆಮಾಡಿದ ಅತಿರೇಕದ ಧಾರ್ಮಿಕ ವಿರೋಧಾಭಾಸಕ್ಕೆ ಪ್ರತಿಕ್ರಿಯಿಸಲು ಕಲಾವಿದೆ ಪ್ರಯತ್ನಿಸುತ್ತಾಳೆ. ಮೈಸೂರು ಕಲಾ ಶಾಲೆಯಲ್ಲಿ ಕಲಾ ಶಿಕ್ಷಕರಾಗಿ ಶೀಲಾ ಅವರು ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು. 1995ರಲ್ಲಿ ಗ್ಯಾಲೆಂಟ್ ಹಾರ್ಟ್ಸ್ ನಲ್ಲಿ ಕಲಾವಿದೆ ಸಗಣೀ, ದಾರ, ಮತ್ತು ಕೆಂಪು ವರ್ಣದ್ರವ್ಯದಂತಹ ನೈಸರ್ಗಿಕ ಅಂಶಗಳನ್ನು ಸಂಯೋಜಿಸುತ್ತಾರೆ.

ಶೀಲಾಗೌಡರ ಏಕವ್ಯಕ್ತಿ ಪ್ರದರ್ಶನಗಳು.

- 2013ರಲ್ಲಿ Annie Fletcher ಎಂಬುವರ ಮೇಲ್ವಿಚಾರಣೆಯಲ್ಲಿ 'Open Eye Policy ಎಂಬ ಕಲಾ ಪ್ರದರ್ಶನವು ನೆದರಲ್ಯಾಂಡನಲ್ಲಿ ನಡೆಯಲಾಯಿತು.
- 2011ರಲ್ಲಿ ಲಂಡನ್ನಿನ Iniva, Rivington Place ನಲ್ಲಿ 'There in and Besides' ಎಂಬ ಕಲಾ ಪ್ರದರ್ಶನವು Grant Watson ಎಂಬುವರ ಮೇಲ್ವಿಚಾರಣೆಯಲ್ಲಿ ಮಾಡಲಾಯಿತು.
- 2010ರಲ್ಲಿ 'Postulates of Contiguity' ಎಂಬ ಪ್ರದರ್ಶನವು Marta Kusma ಅವರ ನೇತೃತ್ವದಲ್ಲಿ ನಾರ್ವೇಯ Office for Conteporary Art (OCA) ನಲ್ಲಿ ಹಮ್ಮಿಕೊಳ್ಳಲಾಯಿತು.
- 2010ರಲ್ಲಿ 'Behold' ಎಂಬ ಶೀರ್ಷಿಕೆ ಅಡಿಯಲ್ಲಿ Katie Dyer ಅವರ ನೇತೃತ್ವದಲ್ಲಿ ಸಿಡ್ನಿಯ ಎನ್.ಎ.ಎಸ್. ಗ್ಯಾಲರಿಯಲಿ ಶಿಲ್ಪಕೃತಿಗಳು ಪ್ರದರ್ಶನಗೊಂಡವು.
- 2006ರಲ್ಲಿ ನ್ಯೂಯಾರ್ಕ್‌ನ Bose Pacia Galleryske ಯಲ್ಲಿ ಪ್ರದರ್ಶನ ಏರ್ಪಡಿಸಲಾಗಿತ್ತು.
- 1993ರಲ್ಲಿ ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶನ ಏರ್ಪಡಿಸಿದರು.
- 1993ರಲ್ಲಿ ಬಾಂಬೆಯಲ್ಲಿ Gallery Chemould ನಲ್ಲಿ ಪ್ರದರ್ಶನವಾಯಿತು.
- 1989ರಲ್ಲಿ ಬಾಂಬೆಯ 'ಗ್ಯಾಲರಿ 7' ನಲ್ಲಿ ಶಿಲ್ಪಗಳು ಪ್ರದರ್ಶನಗೊಂಡವು.
- 1987ರಲ್ಲಿ ಬೆಂಗಳೂರಿನ ವೆಂಕಟಪ್ಪ ಆರ್ಟ ಗ್ಯಾಲರಿಯಲ್ಲಿ ಶಿಲ್ಪ ಕೃತಿಗಳು ಪ್ರದರ್ಶನಗೊಂಡವು.
- 2004ರಲ್ಲಿ ಬೆಂಗಳೂರಿನ GALLERYSKE ಯಲ್ಲಿ 'On Earth & In Heaven' ಎಂಬ ಶಿರ್ಷೀಕೆಯಡಿಯಲ್ಲಿ ಶಿಲ್ಪಕೃತಿಗಳು ಪ್ರದರ್ಶನಗೊಂಡವು.

ಇದೇ ರೀತಿಯಾಗಿ ಶೀಲಾಗೌಡರು ಅನೇಕ ಗುಂಪು ಪ್ರದರ್ಶನಗಳಲ್ಲಿ ಭಾಗವಹಿಸಿ ತಮ್ಮ ಶಿಲ್ಪಕೃತಿಗಳನ್ನು ಅಭಿವ್ಯಕ್ತಿಸಿದ್ದಾರೆ.

- 2013ರಲ್ಲಿ Difficult Loves ಎಂಬ ಶೀರ್ಷಿಕೆಯಡಿಯಲ್ಲಿ ದೆಹಲಿಯ Kiran Nadar Museum of Art
- 2012ರಲ್ಲಿ ಕೊಚ್ಚಿಯ Kochi Muziris Biennale
- 2012ರಲ್ಲಿ India Today ಎಂಬ ಪ್ರದರ್ಶನವು Arken Museum ನಲ್ಲಿ Denmarks ನ Copen hagen ನಲ್ಲಿ ನಡೆಯಿತು.
- 2012ರಲ್ಲಿ Bejing ನ Ullens centere for contemporaryArt ಗ್ಯಾಲರಿಯಲ್ಲಿ Indian Highway ಎಂಬ ಪ್ರದರ್ಶನವಾಯಿತು.
- 2011ರಲ್ಲಿ ರೋಮ್‌ನ MAXXI National Museum of XXI Century Arts ನಲ್ಲಿ Indian Highway ಎಂಬ ಪ್ರದರ್ಶನವಾಯಿತು.
- 2011ರಲ್ಲಿ Paris Delhi-Bombay ಎಂಬ ಪ್ರದರ್ಶನವು ಪ್ಯಾರಿಸನ Centre of Pompidou ನಲ್ಲಿ ನೆರವೇರಿತು.
- 2011ರಲ್ಲಿ ಸಿಂಗಾಪುರದಲ್ಲಿ Singapore Biennale ಎಂಬ ಪ್ರದರ್ಶನವಾಯಿತು.
- 2010ರಲ್ಲಿ 'Indian Highway' ಎಂಬ ಪ್ರದರ್ಶನವನ್ನು Herning ನ Hernign Museum of Contemporary Art ನಲ್ಲಿ ಪ್ರದರ್ಶಿಸಿದರು.
- 2007ರಲ್ಲಿ Bern (Cat) n Kuns Museum ನಲ್ಲಿ 'Horn Please' ಎಂಬ ಪ್ರದರ್ಶನವನ್ನು ಮಾಡಲಾಯಿತು.
- 2005ರಲ್ಲಿ ಪ್ಯಾರಿಸನ 'Contemporary Art From India' ದಲ್ಲಿ Indian Summer ಎಂಬ ಪ್ರದರ್ಶನವಾಯಿತು.

- 2004ರಲ್ಲಿ ಬಾಂಬೆಯ 'World Social Forum' ನ Open Circle ನಲ್ಲಿ Cabin Baggage ಎಂಬ ಪ್ರದರ್ಶನದಲ್ಲಿ ಭಾಗವಹಿಸಿದರು.
- 2004ರಲ್ಲಿ ನ್ಯೂಯಾರ್ಕದಲ್ಲಿ 'Contemporary Art From India' ದಲ್ಲಿ ಭಾಗವಹಿಸಿದ್ದರು.
- 2004ರಲ್ಲಿ 'Icongraphi In Transient Times' ಎಂಬ ಶೀರ್ಷಿಕೆಯಡಿಯಲ್ಲಿ ನ್ಯೂದೆಹಲಿಯಲ್ಲಿ ಪ್ರದರ್ಶನ ಏರ್ಪಡಿಸಿದರು.
- 2003ರಲ್ಲಿ ಚೆನ್ನೈನಲ್ಲಿ 'Sites of Recurrence I' ಎಂಬ ಪ್ರದರ್ಶನವನ್ನು ಮಾಡಿದರು.
- 2003ರಲ್ಲಿ Sweden ನ Boras Museum ದಲ್ಲಿ 'Sites of Recurrence II' ಎಂಬ ಪ್ರದರ್ಶನವಾಯಿತು.
- 1999ರಲ್ಲಿ 'Peep Peep Bangalore' ಎಂಬ ಪ್ರದರ್ಶನವನ್ನು ಬೆಂಗಳೂರಿನ ಜಯಮಹಲ್ ಪ್ಯಾಲೆಸನಲ್ಲಿ ಮಾಡಿದರು.
- 1998ರಲ್ಲಿ 'Private Mythology' Contemporary Art from India ಎಂಬ ಪ್ರದರ್ಶನವನ್ನು Tokyo ದ The Japan Foundation ನಲ್ಲಿ ಪ್ರದರ್ಶಿಸಿದರು.
- 1997ರಲ್ಲಿ ಭಾರತದ ಐದು ಜನ ಮಹಿಳಾ ಕಲಾವಿದರು 'Telling Tales' ಎಂಬ ಪ್ರದರ್ಶನವನ್ನು Bath ನ Victoria Gallery ಯಲ್ಲಿ ಪ್ರದರ್ಶಿಸಿದರು.
- 1997ರಲ್ಲಿ ನ್ಯೂದೆಹಲಿಯ British Council ನಲ್ಲಿ 'Telling Times' ಎಂಬ ಪ್ರದರ್ಶನವನ್ನು ಮಾಡಿದರು.
- 1995ರಲ್ಲಿ Goethe institute of ಆಯೋಜಿಸಿರುವ Art And Nature ಎಂಬ ಪ್ರದರ್ಶನವನ್ನು ನ್ಯೂದೆಹಲಿಯ ಬುದ್ಧ ಜಯಂತಿ ಪಾರ್ಕನಲ್ಲಿ ಪ್ರದರ್ಶಿಸಿದರು.

- 1995ರಲ್ಲಿ Johnnesburg ನಲ್ಲಿ 'Africus' ಎಂಬ South African Binnale ಯಲ್ಲಿ ಭಾಗವಹಿಸಿದರು.
- 1995ರಲ್ಲಿ 'Material Immaterial' ಎಂಬ ಶೀರ್ಷಿಕೆಯಡಿಯಲ್ಲಿ ಬೆಂಗಳೂರಿನ Goethe Institute ಆಯೋಜಿಸಿರುವ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ.
- 1989ರಲ್ಲಿ 'Timeless Art' ಎಂಬ ಪ್ರದರ್ಶನವನ್ನು ಮುಂಬೈನ Victoria Terminus ನಲ್ಲಿ ಪ್ರದರ್ಶಿಸಿದರು.
- 1984ರಲ್ಲಿ ನ್ಯೂದೆಹಲಿಯ ರಾಷ್ಟ್ರೀಯ ಕಲಾಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ.
- 1988 ಭೋಪಾಲನ ಭಾರತ ಭವನ ಬೆನಾಲೆಯಲ್ಲಿ ಭಾಗವಹಿಸಿದ್ದಾರೆ.
- 1981, 82 ಮತ್ತು 85 ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ವಾರ್ಷಿಕ ಕಲಾ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ.

ಇದೇ ರೀತಿಯಾಗಿ ಹಲವಾರು ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಏಕವ್ಯಕ್ತಿ ಹಾಗೂ ಸಮೂಹ ಪ್ರದರ್ಶನಗಳಲ್ಲಿ ಭಾಗವಹಿಸಿ ತಮ್ಮ ಶಿಲ್ಪಗಳ ಮೂಲಕ ಕ್ಷೇತ್ರದಲ್ಲಿ ಸಾಧನೆಯ ಮೆಟ್ಟಿಲನ್ನೆರುತ್ತಿರುವ ಈ ಸಾಧನೆಗೆ ಹಲವಾರು ಖಾಸಗಿ ಹಾಗೂ ಸರ್ಕಾರದ ವಿದ್ಯಾಸಂಸ್ಥೆಗಳು ಹಾಗೂ ಅಕಾಡೆಮಿಯ ಪ್ರಶಸ್ತಿಗಳು ಹಲವಾರು ದೊರಕಿವೆ. ಅವುಗಳಲ್ಲಿ ಪ್ರಮುಖವಾದವು.

- 1998ರಲ್ಲಿ GS Shenoy ಪ್ರಶಸ್ತಿ ಹಾಗೂ Sothebys Price For Arts Mundi 5 ಎಂಬ ಪ್ರಶಸ್ತಿಯನ್ನು ಪಡೆದಿರುವರು.
- 1994 ಮತ್ತು 1996ರಲ್ಲಿ ಭಾರತ ಸರ್ಕಾರದಿಂದ ಸಿನಿಯರ್ ಫೆಲೋಷಿಪ್ ಪಡೆದಿರುತ್ತಾರೆ.
- 1985ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದಿರುತ್ತಾರೆ.

- 1984 ಮತ್ತು 1986ರಲ್ಲಿ ಲಂಡನನ ಆರ್.ಸಿ.ಎ ಯಲ್ಲಿ Post Graduate ಮಾಡಲು Ink's foundation Scholarshipನ್ನು ಪಡೆದಿರುತ್ತಾರೆ.
- 1979–1982ರಲ್ಲಿ ಹೆಚ್ಚಿನ ವಿದ್ಯಾಬ್ಯಾಸಕ್ಕಾಗಿ ಕರ್ನಾಟಕ ಲಲಿತಕಕಲಾ ಅಕಾಡೆಮಿಯ ಸ್ಕಾಲರ್‌ಶಿಪ್ ದೊರೆತಿರುವುದು.

ಈ ರೀತಿಯಾಗಿ ಅವರು ಅನೇಕ ಶಿಲ್ಪರಚನೆ ಹಾಗೂ ಪ್ರತಿಷ್ಠಾಪನೆ ಕೃತಿಗಳನ್ನು ಮಾಡಿ ಶಿಲ್ಪಕ್ಷೇತ್ರಕ್ಕೆ ತಮ್ಮ ಅಮೂಲ್ಯವಾದ ಕೊಡುಗೆಯನ್ನು ನೀಡುತ್ತಾ ಬಂದಿರುವರು.

ಶೀಲಾ ಗೌಡರು ತಮ್ಮ 'ಸಾಕ್ಷಿ ಗುಡ್ಡ ಸಾಕ್ಷಿ ಗೋಡೆ' ಕುರಿತು ನೀಡಿದ ಹೇಳಿಕೆ.

Working in/with nature is very different from making art for conventional spaces. Nature's boundaries cannot be demarcated but man's presence can be noted. An artistic intervention bridges these two aspects.

My search for a suitable outdoor space began with the idea I originally had for several years of working on the theme of 'Sakshi gudda' witness hillocks, the pillars of earth left untouched for measuring, witnesses for the earth excavated from any land, My interest was in these pillars of earth left behind, their sculptural presence along with the evidence of vegetation on the top and of course their meaningful title.

I come across the area belonging to the university of Agricultural sciences white on my regular visits to the KEB office nearby for rectifying some irregularity, or the other. These tedious visits had an artistic end. The land that I located had several elements in it, more than just land, for a 'Sakshi gudda' within its green over was hidden a semicircular wall about 50 in length with a 30' diameter pit in front of it. It is a abandoned target practice shooting range elevated to the status of a lovers den encouraged by trees the original purpose redundant. Nature in a subversive role. The wall has, over time, become a witness to them with etched graffiti all over it.

The stepped shooting trench a silent pit of dry leaves. The approach to this peaceful haven, its silence heightened by the round of shrieking pigs from the nearby piggery, is sadly also the dumping ground for building debris and garbage, both organic and non-biodegradable, burnt to ashed or remaining as layers of time in places.

My artwork is all that the eye can see or wants to see within this I have noted points of focus using the land and materials that east their views of nature and urban Bangalore from some vantage points, the debris, having their own aesthetic, which are now the 'Sakshi gudda', the burnt ground a trench dug through man-mad ground and pure, rich, beautiful by sand bags gunny racks.

Filled with dry leaves from her on enters the shady sitting room in the pit furnished with the same racks, to rest and read the writing on the wall which is my graffiti added to the easting ones, it is an earthy, folk poem which in translation reads as 'Who all shall I think of when I rise at dawn, let me think for a moment of mother earth given of serame & cumin', the wall also bears the trace outlines, of the trunks of the trees growing close, behind the wall, where foliage daringly peeps above the wall.[1]

Sheela Gowda

29th January 2001

[1] ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ – ಕೆ.ಪಿ.ಸುಬ್ರಮಣ್ಯಂ



ಕಲಾವಿದೆ ಶೀಲಾಗೌಡ





ಶೀಲಾಗೌಡ ಅವರ ಪ್ರತಿಷ್ಠಾಪನಾ ಕಲೆ





ಶೀಲಾಗೌಡ ಅವರ ಮಿಶ್ರ ಮಾಧ್ಯಮದ ಶಿಲ್ಪಕಲಾಕೃತಿಗಳು

ಪುಷ್ಪಮಾಲಾ ಎನ್.

1956ರಲ್ಲಿ ಪುಷ್ಪಮಾಲಾ ಎನ್. ರವರು ಕರ್ನಾಟಕದ ಬೆಂಗಳೂರಿನಲ್ಲಿ ಜನಿಸಿದರು. 1977ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರ, ಇಂಗ್ಲೀಷ್ ಮತ್ತು ಸೈಕಾಲಜಿ ಪದವಿಯನ್ನು ಪೂರ್ಣಗೊಳಿಸಿದರು. ಬೆಂಗಳೂರಿನ ಮೂಲದ ಭಾರತೀಯ ಕಲಾವಿದರಾದ ಬಾಲನ್ ನಂಬಿಯಾರ್ ಅವರಡಿ ಪುಷ್ಪಮಾಲಾ ರವರು ಅಧ್ಯಯನ ಮಾಡಿದರು. ನಂತರ ಅವರು 1982ರಲ್ಲಿ ಪದವಿಯನ್ನು ಪೂರ್ಣಗೊಳಿಸಿದರು. ಮತ್ತು 1985ರಲ್ಲಿ ಬರೋಡಾದ ಎಮ್. ಎಸ್. ವಿಶ್ವವಿದ್ಯಾಲಯದಲ್ಲಿ ಫ್ಯಾಕಲ್ಟಿ ಆಫ್ ಫೈನ್ ಆರ್ಟ್ಸ್ ವಿಭಾಗದಲ್ಲಿ ಶಿಲ್ಪಕಲೆಯನ್ನು ಅಧ್ಯಯನ ಮಾಡಿದರು.

ಬರೋಡಾದಲ್ಲಿ ಶಿಲ್ಪಿ ರಾಘವ ಕನೆರಿಯಾ, ಭೂಪೆನ್ ಖಖರ್ ಮತ್ತು ಕೆ.ಜಿ.ಸುಬ್ರಹ್ಮಣ್ಯಂ ಮೊದಲಾದ ಹಿರಿಯ ಕಲಾವಿದರು ಇವರ ಕಲಾಕೃತಿ ರಚನೆಗೆ ಆರಂಭಿಕ ಪ್ರಭಾವಿಗಳಾದರು. ಶಿಲ್ಪಿಯಾಗಿ ತರಬೇತಿ ಪಡೆದ ಪುಷ್ಪಮಾಲಾರವರು ಮೊದಲ ಏಕವ್ಯಕ್ತಿ ಪ್ರದರ್ಶನವನ್ನು 1983ರಲ್ಲಿ ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಮಾಡಿದರು. ಅವರು ಟೆರಾಕೋಟಾ ಮತ್ತು ಪೇಪರನ್ನು ಅವರ ಆರಂಭಿಕ ಕೃತಿಗಳಲ್ಲಿ ಮಾಧ್ಯಮವಾಗಿ ಬಳಸಿದರು. ಮತ್ತು 'Seven Young Sculptures' ಎಂಬ ವಿವನ ಸುಂದರಂ ಅವರ ನೇತೃತ್ವದಲ್ಲಿ ದೆಹಲಿಯಲ್ಲಿ ಪ್ರದರ್ಶನವನ್ನು ಮಾಡಿದರು.

1983–85ರ ನಡುವೆ ಪುಷ್ಪಮಾಲಾರವರು ಭಾರತೀಯ ಪರಂಪರೆಯ ವಿಷಯ ಆಧರಿತ ಟೆರಾಕೋಟಾ ಕೃತಿಗಳನ್ನು ಮಾಡಿದರು. ಹಾಗಾಗಿಯೇ ಅವು ತಮ್ಮ ಸಮಕಾಲೀನ ಸಂದರ್ಭ ಮತ್ತು ಕಲಾವಿದೆಯ ವಿಶಿಷ್ಟ ದೃಷ್ಟಿ ಹಾಗೂ ತಾಂತ್ರಿಕ ನಾವೀನ್ಯತೆಯಿಂದ ವೀಕ್ಷಕರು ಬೆರಗಾಗುವಂತೆ ಮಾಡುತ್ತವೆ.

ನೋಡುಗರು ಈವರೆಗೆ ನೋಡಿದ್ದಕ್ಕಿಂತ ಹೊಸ ರೀತಿಯ 'ನೋಟ' ಹಾಗೂ 'ಅನುಭವ'ವನ್ನು ಪಡೆಯುತ್ತಾರೆ. ಟ್ರೈನಾಲೆಯಲ್ಲಿ ಪುರಸ್ಕೃತಗೊಂಡ 'ಪಿಗ್' ಟೆರಾಕೋಟಾ

ಮಾಧ್ಯಮದ 'Adolescent' ಶಿಲ್ಪ ಸರಣಿ 'ಗರ್ಲ ವಿತ್ ಫೆರ್' 'ವುಮನ್ ಅಡ್ಜೆಸ್ಟಿಂಗ ಬ್ರಾ', 'The Voyage' 'The Last Game' 'The fools Archestra' ಹಾಗೂ ಫೈಬರ್ ಮಾಧ್ಯಮದ ಹಲವಾರು ಶಿಲ್ಪಗಳನ್ನು ಸೃಷ್ಟಿಸಿದ್ದಾರೆ. ಮುಖ್ಯವಾಗಿ ಪುಷ್ಪಮಾಲಾರವರು ಟೇರಾಕೋಟಾದಲ್ಲಿ ಕಳಪೆ ವಸ್ತುಗಳು ಮತ್ತು ಜಾನಪದ ಕಲಾ ಉಲ್ಲೇಖಗಳನ್ನು ಬಳಸಿಕೊಂಡು ಭಾರತೀಯತೆ ಅಗತ್ಯವಾದ ಕಲ್ಪನೆಯನ್ನು ಆಧರಿಸಿ ಸ್ಥಳೀಯ ಭಾಷೆ ರಚಿಸುವಲ್ಲಿ ಆಸಕ್ತಿವಹಿಸುತ್ತಾರೆ.


ಈ ರೀತಿಯಾಗಿ ಪುಷ್ಪಮಾಲಾರವರು ಅನೇಕ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಶಿಲ್ಪಕೃತಿಗಳ ಮೂಲಕ ಗುರುತಿಸಿಕೊಂಡು ಅನೇಕ ಸಮಕಾಲೀನ ಶಿಲ್ಪಗಳನ್ನು ರಚಿಸಿ, ಕಲಾ ರಂಗವನ್ನು ಕಲಾತ್ಮಕಗೊಳಿಸಿದ್ದಾರೆ.



ಶಿಲ್ಪಕಲಾವಿದೆ ಎನ್. ಪುಷ್ಪಮಾಲಾ ಅವರು




ಎನ್. ಪುಷ್ಪಮಾಲಾ ಅವರು ರಚಿಸಿದ ಒಂದು ಕಲಾಕೃತಿ





ಎನ್. ಪುಷ್ಪಮಾಲಾ ಅವರು ರಚಿಸಿದ ಟೆರ್ರಾಕೋಟಾ ಕಲಾಕೃತಿಗಳು





ಎನ್. ಪುಷ್ಪಮಾಲಾ ಅವರು
ರಚಿಸಿದ ಟೆರ್ರಾಕೋಟಾ ಕಲಾಕೃತಿಗಳು

ಎಮ್.ಶಾಂತಮಣಿ

ಶಾಂತಮಣಿಯವರು ಕರ್ನಾಟಕದ ಮೈಸೂರಿನಲಿ 1967ರಲ್ಲಿ ಜನಿಸಿದರು. ಅವರು ಮೈಸೂರಿನ ಚಾಮರಾಜೇಂದ್ರ ಅಕಾಡೆಮಿ ಆಫ್ ವಿಜ್ಯುವಲ್ ಆರ್ಟ್ಸ್‌ನಿಂದ ಚಿತ್ರಕಲೆಯಲ್ಲಿ ಬಿ.ಎಫ್.ಎ ಪದವಿಯನ್ನು ಪಡೆದಿದ್ದಾರೆ. ಎಂ. ಎಸ್. ಯುನಿವರ್ಸಿಟಿ ಬರೋಡಾದಿಂದ ಚಿತ್ರಕಲೆಯಲ್ಲಿ ಮಾಸ್ಟರ್ ಆಫ್ ಫೈನ್ ಆರ್ಟ್ಸ್ ಪದವಿ ಪಡೆದರು. ಸ್ಕಾಟ್ಲೆಂಡ್ನ ಗ್ಲ್ಯಾಸ್ಗೋದಲ್ಲಿ ನಡೆದ ಚಾರ್ಲ್ಸ್ ಪ್ಯಾಲೆಸ್ ವಿದ್ಯಾರ್ಥಿವೇತನದ ಫೆಲೋಷಿಪ್‌ನಲ್ಲಿ ಕಾಗದ ತಯಾರಿಕೆಗೆ 2004ರಲ್ಲಿ ಅವರು ಒಂದು ವರ್ಷ ಅಧ್ಯಯನ ಮಾಡಿದರು. ಅವರು 2006-08ರಲ್ಲಿ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವಾಲಯದಿಂದ ರಾಷ್ಟ್ರೀಯ ಜೂನಿಯರ್ ಫೆಲೋಷಿಪ್ ಅನ್ನು ಕೂಡಾ ಪಡೆದುಕೊಂಡಿದ್ದಾರೆ. 2001ರಲ್ಲಿ ಕೆಲವು ಗಮನಾರ್ಹ ಪ್ರದರ್ಶನಗಳನ್ನು ಮಾಡಿದ್ದಾರೆ.

ದೊಡ್ಡ ಸ್ಪೈನಲ್ ಕಾಲಮ್‌ನ ರೂಪದಲ್ಲಿ ಸಿಮೆಂಟ್ ಮತ್ತು ಪ್ರಕಾಶಕ ಸಿಂಡರ್ನಿಂದ ತಯಾರಿಸಿದ 'ಬ್ಯಾಕ್ಬೋನ್' ಎಂಬ ಶಿಲ್ಪವನ್ನು 2014ರಲ್ಲಿ ಕೋಚ್ಚಿಮುಜಿರಿನ ಬೆನಾಲೆಯಲ್ಲಿ ಪ್ರದರ್ಶಿಸಲಾಯಿತು. ಇದು ಹೃದಯ ಆಕಾರದಲ್ಲಿ ಕೆತ್ತಲಾದ 7x5 x 70 ಅಡಿಗಳ ಅಳತೆಯಲ್ಲಿ ಮಾಡಲಾಗಿದೆ. ಈ ಕಲಾ ಕೆಲಸಕ್ಕೆ ಸ್ಫೂರ್ತಿ 2010ರಲ್ಲಿ ಅಡ್ಡಾದಿಡ್ಡಿಯಾಗಿ ಗಂಗಾ ನದಿಯುದ್ದಕ್ಕೂ ತನ್ನ ಮೂರು ತಿಂಗಳ ಪ್ರವಾಸದ 'ನಮ್ಮ ಸಂಸ್ಕೃತಿಯ ಬೆನ್ನೆಲುಬು' ಎಂಬ ರೂಪಕವನ್ನು ಪರಿಗಣಿಸಲಾಗಿದೆ ಶಾಂತಮಣಿಯವರು ತನ್ನ ಬೆನ್ನು ಮೂಳೆಯ ಒಂದು ಅರಿವಳಿಕೆ ಇಂಜೆಕ್ಷನ್ ಮಾಡಿದಾಗ ಕಾರ್ಮಿಕ ತನ್ನ ಶಿಲ್ಪ ಸುಳಿವು ನೀಡಿತು ಎಂದು ಹೇಳಿದರು. ಕೊಚ್ಚಿಯಲ್ಲಿರುವ ಶಿಲ್ಪವನ್ನು ಪ್ರದರ್ಶಿಸಿದ ಕೊಚ್ಚಿ ಮುಜಿರಸ್ ಬಿನಾಲೆ 2014ರ ಮೇಲ್ವಿಚಾರಕರಾಗಿದ್ದ ಜನೀಶ್ ಕಲ್ಲತ್‌ರವರು 'ಕೆಲವು ಸುದೀರ್ಘ ಕಾಲದಿಂದ ಹೋದ ಇತಿಹಾಸವನ್ನು ಈ ತೋರಿಕೆಯಲ್ಲಿ ಅಳಿದು ಹೋದ ಪಳೆಯುಳಿಕೆ ರೂಪದಲ್ಲಿ ಅಳವಡಿಸಲಾಗಿದೆ' ಮತ್ತು ಜ್ವಾಲಾಮುಖಿಯ ಬಂಡೆಯ ಬಳಕೆಯು ವಿಶೇಷವಾಗಿ ಆಸಕ್ತಿದಾಯಕವಾಗಿದೆ. ಏಕೆಂದರೆ ವಸ್ತುಗಳ ಸುರಂಧ್ರ

ಮೇಲ್ಮೈ ಕೆಲವು ಭೌಗೋಳಿಕ ಕುರುಹುಗಳನ್ನು ಹೊಂದಿದೆ. ಮತ್ತು ಸ್ವತಃ ಪಳೆಯುಳಿಕೆಗಳಂತೆ ಕಾಣುತ್ತದೆ.

ಶಾಂತಮಣಿಯವರ ಇನ್ನೊಂದು ಗಮನಾರ್ಹವಾದ ಶಿಲ್ಪವೆಂದರೆ 'ಮಟಾಮಾರ್ಫೋಸಿಸ್ ಫೇವರಿಟ್' ಎಂದೆನ್ನುತ್ತಾರೆ ಪೊರೆಹುಳು ಮತ್ತು ಚಿಟೆ ನಡುವಿನ ವಿಕಸನ ಹಂತವನ್ನು ಪ್ರತಿನಿಧಿಸುವ ಶಿಲ್ಪವಾಗಿದೆ. ಇದನ್ನು ಮರದ ಇದ್ದಿಲ್ಲು ಮತ್ತು ಹತ್ತಿ ಚಿಂದಿಗಳ ತಿರುಳಿನಿಂದ ತಯಾರಿಸಲಾಗುತ್ತದೆ. ಅವರ ಇತರ ಶಿಲ್ಪ ಕೃತಿಗಳೆಂದರೆ, 'ಫ್ರೋಜನ್ ಫೀನಿಕ್ಸ್' 'ಸೈಲೆಂಟ್ ಸ್ಪೀಕ್' ಗೆಸ್ಚ್‌ರ್ಸ ಸ್ಪೀಕ್' ಮತ್ತು 'ಟರ್ನಿಂಗ ವೀಲ್ ಟ್ರಾಡಿಷನ್ ಬೌಂಡ್' ಎಂಬವುಗಳಾಗಿವೆ. ಇವರ ಶಿಲ್ಪಕೃತಿಗಳು ಬೆಂಗಳೂರಿನ ಕರ್ನಾಟಕ ರಾಜ್ಯ ಮ್ಯೂಸಿಯಂನ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಶಾಶ್ವತ ಪ್ರದರ್ಶನಗಳಾಗಿವೆ. ಅವರ ಕೃತಿಗಳು ಅನೇಕ ಖಾಸಗಿ ಗ್ಯಾಲರಿಗಳಲ್ಲಿ ಕೂಡ ಪ್ರದರ್ಶನಗೊಂಡಿವೆ. ಅವರ ಶಿಲ್ಪಗಳನ್ನು ಭಾರತದಲ್ಲಿ ಮತ್ತು ಅನೇಕ ಅಂತರಾಷ್ಟ್ರೀಯ ಕೇಂದ್ರಗಳಲ್ಲಿ ಅನೇಕ ದ್ವೈವಾರ್ಷಿಕ ಕಲಾ ಪ್ರದರ್ಶನಗಳಲಿ ಪ್ರದರ್ಶಿಸಲಾಗಿದೆ. ಇವರ ಈ ಸಾಧನೆಗೆ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ.





ಶಾಂತಮಣಿ ಅವರು ರಚಿಸಿದ ಮಿಶ್ರಮಾಧ್ಯಮದ ಸಮಕಾಲೀನ ಶಿಲ್ಪಕಲಾಕೃತಿಗಳು





ಶಾಂತಮಣಿ ಅವರು ರಚಿಸಿದ
ಮಿಶ್ರಮಾಧ್ಯಮದ ಸಮಕಾಲೀನ ಶಿಲ್ಪಕಲಾಕೃತಿಗಳು

ಡಾ.ಬಿ.ಆರ್. ಗೀತಾಂಜಲಿ

ಡಾ.ಬಿ.ಆರ್.ಗೀತಾಂಜಲಿಯವರು ಮೂಲತಃ ಕೋಲಾರ ಜಿಲ್ಲೆಯ ಚಿಂತಾಮಣಿಯವರು ಶ್ರೀಮತಿ ಆರ್. ನಾಗರತ್ನ ಮತ್ತು ಶ್ರೀಯುತ ಜಿ.ಬ್ರಹ್ಮಯ್ಯ ಅವರ ದಂಪತಿಗಳ ಪುತ್ರಿಯಾದ ಗೀತಾಂಜಲಿ ಅವರು ಹುಟ್ಟಿದ್ದು, ಹಾಸನ ಜಿಲ್ಲೆಯ ಗೋರೂರಿನಲ್ಲಿ ಕಲೆಯಲ್ಲಿ ಆಸಕ್ತಿ ಹೊಂದಿದ್ದ ಗೀತಾಂಜಲಿಯವರು 'Interior Decoration' ನಲ್ಲಿ ಡಿಪ್ಲೋಮಾ ಮುಗಿಸಿ ನಂತರ ಮೈಸೂರಿನ ಕಾವಾದಲ್ಲಿ ಶಿಲ್ಪಕಲೆಯಲ್ಲಿ ಬಿ.ಎಫ್.ಎ ಪದವಿಯನ್ನು ಪಡೆದರು. ಹಾಗೂ ಮೈಸೂರು ವಿಶ್ವವಿದ್ಯಾಲಯದಿಂದ ಚಿನ್ನದ ಪದಕ ಗಳಿಸಿದ ಹೆಗ್ಗಳಿಕೆ ಇವರದಾಗಿದೆ. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಪಶ್ಚಿಮ ಬಂಗಾಲದ ಶಾಂತಿನಿಕೇತನದಲ್ಲಿ ಸ್ನಾತಕೋತ್ತರ ಅಧ್ಯಯನವನ್ನು ಪೂರ್ಣಗೊಳಿಸಿ ಶಿಲ್ಪಕಲೆಯಲ್ಲಿ ಎಮ್.ಎಫ್.ಎ ಪದವಿಯನ್ನು ಪಡೆದಿದ್ದಾರೆ. 'ಕರ್ನಾಟಕ ಐತಿಹಾಸಿಕ ದೀಪಸ್ತಂಭ'ಗಳ ಬಗ್ಗೆ ವಿಶೇಷ ಕುತೂಹಲ ಬೆಳೆಸಿಕೊಂಡ ಗೀತಾಂಜಲಿಯವರು ಈ ವಿಷಯದ ಕುರಿತು ವ್ಯಾಪಕ ಅಧ್ಯಯನವನ್ನು ನಡೆಸಿ, ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಪ್ರೌಢಪ್ರಬಂಧವನ್ನು ಮಂಡಿಸಿ, ಪಿಎಚ್.ಡಿಯನ್ನು ಪಡೆದ ಗೌರವಕ್ಕೆ ಪಾತ್ರರಾಗಿದ್ದಾರೆ. ಮೈಸೂರಿನ ಕಾವಾದಲ್ಲಿ ಶಿಲ್ಪಕಲಾ ವಿಭಾಗದಲ್ಲಿ ಅತಿಥಿ ಉಪನ್ಯಾಸಕಿಯಾಗಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಸೇವೆಯನ್ನು ಸಲ್ಲಿಸಿರುವರು.

ಗೀತಾಂಜಲಿಯವರು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಮಾಜಿ ಸದಸ್ಯರಾಗಿ ಶಿಲ್ಪಕಲಾ ಕ್ಷೇತ್ರದಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿರುವರು. ಇವರ ಈ ಶಿಲ್ಪಕಲಾ ಕ್ಷೇತ್ರದಲ್ಲಿನ ಅಪೂರ್ವವಾದ ಸೇವೆಯನ್ನು ಗಮನಿಸಿ ಹಲವಾರು ಪ್ರಶಸ್ತಿಗಳು ದೊರಕಿವೆ.

1993- ದಸರಾ ಕಲಾ ಪ್ರದರ್ಶನ, ಮೈಸೂರು

1997- ದಸರಾ ಕಲಾ ಪ್ರದರ್ಶನ, ಮೈಸೂರು

1998- ದಸರಾ ಕಲಾ ಪ್ರದರ್ಶನ, ಮೈಸೂರು

1999– ಕೆ.ಕೆ.ಹೆಬ್ಬಾರ್. ಆರ್ಟ್ ಫೌಂಡೇಶನ, ಚಿನ್ನದ ಪದಕ, ಮೈಸೂರು ವಿಶ್ವವಿದ್ಯಾಲಯ.

2005– ತೃತೀಯ ಶಿಲ್ಪಕಲಾ ಪ್ರದರ್ಶನ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

ಗೀತಾಂಜಲಿಯವರು ಭಾಗವಹಿಸಿದ ಪ್ರದರ್ಶನಗಳು:

1993– ದಸರಾ ಕಲಾ ಪ್ರದರ್ಶನ, ಮೈಸೂರು

1997– ದಸರಾ ಕಲಾ ಪ್ರದರ್ಶನ, ಮೈಸೂರು

1997– ಟೆರ್ರಾಕೋಟಾ ಕಾರ್ಯಗಾರ, ಮೈಸೂರು.

1998– ದಸರಾ ಕಲಾ ಪ್ರದರ್ಶನ, ಮೈಸೂರು

1998– ಆಲ್ ಇಂಡಿಯಾ ಮಿನಿ ಸ್ಕಲ್ಪ್ಚರ್ ಪ್ರದರ್ಶನ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ. ಬೆಂಗಳೂರು.

1998– ಡೈರೆಕ್ಟ್ ಸಿಮೆಂಟ್ ಕಾರ್ಯಾಗಾರ, ಮೈಸೂರು.

1999– ದಸರಾ ಕಲಾ ಪ್ರದರ್ಶನ ಮೈಸೂರು.

1999– ನಂದನ ಮೇಳ, ಶಾಂತಿನಿಕೇತನ, ಪಶ್ಚಿಮ ಬಂಗಾಳ.

2000– ನಂದನ ಮೇಳ, ಶಾಂತಿನಿಕೇತನ, ಪಶ್ಚಿಮ ಬಂಗಾಳ.

2001– ಬ್ರಾಂಜ್ ಕಾರ್ಯಗಾರ (ಡೋಕ್ರಾ ಪದ್ಧತಿ) ಶಾಂತಿನೀಕೆತನ, ಪಶ್ಚಿಮ ಬಂಗಾಲ.

2001–ದ್ವಿತೀಯ ವಾರ್ಷಿಕ ಶಿಲ್ಪಕಲಾ ಪ್ರದರ್ಶನ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

2002– ವಿಭಾಗೀಯ ಮಟ್ಟದ ಶಿಲ್ಪಕಲಾ ಪ್ರದರ್ಶನ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

2002– ಟೆರ್ರಾಕೋಟಾ ಕಾರ್ಯಾಗಾರ ಇಂದಿರಾಗಾಂಧಿ ಮಾನವ ಸಂಗ್ರಹಾಲಯ, ಭೋಪಾಲ, ಮೈಸೂರು ಶಾಖೆ.

2003– ಗುಂಪು ಪ್ರದರ್ಶನ, ಸುಚಿತ್ರಾ ಆರ್ಟ ಗ್ಯಾಲರಿ, ಕಲಾಮಂದಿರ, ಮೈಸೂರು.

2005– ತೃತೀಯ ವಾರ್ಷಿಕ ಶಿಲ್ಪಕಲಾ ಪ್ರದರ್ಶನ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

2006– ಫೈಬರ್ ಕ್ಯಾಸ್ಟಿಂಗ್ ವಿತ ಸಿಲಿಕಾನ್' ರಬ್ಬರ್ ಮೌಲ್ಡ್ (ಚಾಲುಕ್ಯ ಶೈಲಿ ಶಿಲ್ಪಗಳು) ಚಿತ್ರಕಲಾ ಮತ್ತು ಶಿಲ್ಪಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

2007– ವಾರ್ಷಿಕ ಶಿಲ್ಪಕಲಾ ಪ್ರದರ್ಶನ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

2008– ಗುಂಪು ಪ್ರದರ್ಶನ, 'ಸ್ವಸ್ತಿ' ದಿ ಕಂಟೆಂಪರರಿ ಆರ್ಟ್ ಗ್ಯಾಲರಿ. ಬೆಂಗಳೂರು.

2009– ವಾರ್ಷಿಕ ಶಿಲ್ಪಕಲಾ ಪ್ರದರ್ಶನ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

2011– ಕಲಾಮೇಳ, ಮೈಸೂರು.

ಗೀತಾಂಜಲಿಯವರು ಭಾಗವಹಿಸಿದ ಶಿಬಿರಗಳು

2005– ರಾಷ್ಟ್ರೀಯ ಶಿಲ್ಪ ಶಿಬಿರ, ಲಲಿತಕಲಾ ಅಕಾಡೆಮಿ, ಪ್ರಾದೇಶಿಕ ಕೇಂದ್ರ ಚೆನ್ನೈ, ಬೆಂಗಳೂರು ವಿಶ್ವವಿದ್ಯಾಲಯ.

2007– ರಾಷ್ಟ್ರೀಯ ಶಿಲ್ಪ ಶಿಬಿರ, ಲಲಿತಕಲಾ ಅಕಾಡೆಮಿ, ಪ್ರಾದೇಶಿಕ ಕೇಂದ್ರ ಚೆನ್ನೈ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

2007– ಜಿಲ್ಲಾ ಮಟ್ಟದ ಶಿಲ್ಪ ಶಿಬಿರ ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು (ಸುವರ್ಣ ಕರ್ನಾಟಕ), ಕಲಾಗ್ರಾಮ, ಬೆಂಗಳೂರು.

2008– ಜಿಲ್ಲಾ ಮಟ್ಟದ ಕಲಾ ಉತ್ಸವ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವೆಂಕಟಪ್ಪ ಆರ್ಟ್ ಗ್ಯಾಲರಿ, ಬೆಂಗಳೂರು.

2010– ಜಿಲ್ಲಾ ಮಟ್ಟದ ಶಿಲ್ಪ ಶಿಬಿರ. ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕಲಾ ನಿಕೇತನ ಕಲಾಶಾಲೆ, ಮೈಸೂರು.

2010–ರಾಷ್ಟ್ರೀಯ ಶಿಲ್ಪ ಶಿಬಿರ ಕನ್ನಡ ವಿಶ್ವವಿದ್ಯಾಲಯದ ಆಯೋಜನೆಯಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿ.

2011– ರಾಷ್ಟ್ರೀಯ ಶಿಲ್ಪ ಶಿಬಿರ ಕನ್ನಡ ವಿಶ್ವವಿದ್ಯಾಲಯದ ಆಯೋಜನೆಯಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿ.

2012– ರಾಷ್ಟ್ರೀಯ ಶಿಲ್ಪ ಶಿಬಿರ ಸೆಂಟ್ರಲ್ ಜೋನ್, ಕಲ್ಚರ್‌ಲ್ ಸೆಂಟರ್, ನಾಗಪೂರ, ಗದಗ, ಕರ್ನಾಟಕ.

2014– ರಾಷ್ಟ್ರೀಯ ಶಿಲ್ಪ ಶಿಬಿರ Tellurart – Sweden ಉತ್ತರಖಂಡ

ಗೀತಾಂಜಲಿಯವರ ಕುರಿತು ಪತ್ರಿಕಾ ಪ್ರಕಟಣೆ

First to get sculpture Ph.D A blessed artist, dedicated researcher and ambitious sculptor. That is B.R. Geetanjali. The first person in the state to get a Ph.D. in sculpture.

A gold medalist in BFA (Bachelor of Fine Arts), the 35 years old woman wants to dedicate her life. To research sculpture and channelize her creativity to capture ingenious talent of artisans. Geetanjali, from Kolar, settled in Mysore two decades ago. After completing a three year course in diploma in interior decoration, designs from the JSS Polytecnic. She joined the Chamarajendra Academy of Visual Arts (CAVA) for a BFA course in painting in 1994. She later completed the MFA from Bhavan in West Bengal. Geetaṇjali did a research in historical lam ports of Karnataka, from Hampi University, in 2007.

Geetanjanli told the times of India that her interest in painting took a deviation to sculpture in 1996. That was the product of the influence her seniors in CAVA had on her. Recalling her school days, Geetanjali said she was a winner in every painting competition. What drove her to paining initially "It was my father G. Brahmaiah, an artist she says. Now,she wants the art to speak for her. Be it anger, love happiness of sadness, her sculptures will say it al. she also carves stone, wood and does moulding.

A strong believer in hard work. She tells youngsters that is the only way to achieve goals in life. While she takes pleasure in art, she is against commercializing it.

So don't plan to buy her work of course, art is valuable.



ತಾನು ರಚಿಸಿದ ಸಮಕಾಲಿನ ಶಿಲ್ಪಕಲಾಕೃತಿಯೊಂದಿಗೆ
ಗೀತಾಂಜಲಿ ಆಚಾರ್



ಗೀತಾಂಜಲಿ ಆಚಾರ್ ಅವರು ರಚಿಸಿದ ಸಮಕಾಲೀನ ಶಿಲ್ಪಕಲಾಕೃತಿ







ಗೀತಾಂಜಲಿ ಆಚಾರ್ ಅವರು ರಚಿಸಿದ
ಶಿಲಾ ಮಾಧ್ಯಮದ ಸಮಕಾಲೀನ
ಶಿಲ್ಪಕಲಾಕೃತಿಗಳು

ರಂಜನಿ ಶೆಟ್ಟರ್

ರಂಜನಿ ಶೆಟ್ಟರ್ ಅವರು ಬೆಂಗಳೂರಿನಲ್ಲಿ 1977ರಲ್ಲಿ ಜನಿಸಿದರು. ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ಶಿಲ್ಪಕಲಾ ವಿಭಾಗದಲ್ಲಿ 1998ರಲ್ಲಿ ಬಿ.ಎಫ್.ಎ ಪದವಿ ಹಾಗೂ 2000ರಲ್ಲಿ ಎಮ್.ಎಫ್. ಎ ಪದವಿಯನ್ನು ಪಡೆದರು. ಪದವಿಯ ನಂತರ ಇವರ ಸಾಧನೆಯು ಸತತವಾಗಿ ಸಾಗಿತು.

ಶೆಟ್ಟರ್ ಅವರು ಜೇನುಮೇಣ, ಮರದ ಪುಡಿ, ಮರ, ರಬರ್ ಹಾಲು (latex) ಪಿವಿಸಿ ಕೊಳವೆಗಳು, ಸಿಲಿಕಾನ್ ರಬ್ಬರ್, ಮತ್ತು ಮೆಟಲ್ ಒಳಗೊಂಡಿರುವ ವಸ್ತುಗಳ ವ್ಯಾಪ್ತಿಯನ್ನು ಬಳಸಿಕೊಂಡು ಪ್ರಕೃತಿ ಮತ್ತು ಉದ್ಯಮದ ಅಂಶಗಳನ್ನು ಸಂಯೋಜಿಸುತ್ತಾರೆ. ಸಾಂಪ್ರದಾಯಿಕ ಕರಕುಶಲ ಮತ್ತು ಆಚರಣೆಗಳನ್ನು ತಮ್ಮ ಸಮಕಾಲೀನ ಕೆಲಸಕ್ಕೆ ತರುವಲ್ಲಿ ಹೆಸರುವಾಸಿಯಾಗಿದ್ದು, ನೈಸರ್ಗಿಕ ಮತ್ತು ಕೈಗಾರಿಕಾ ವಸ್ತುಗಳೆರಡನ್ನು ನಿರಂತರವಾಗಿ ಬದಲಾಗುತ್ತಿರುವ ಭೌತಿಕ ವಾತಾವರಣದಲ್ಲಿ ಅಸ್ತಿತ್ವದಲ್ಲಿರುವ (ಮೆಲೋಫಿಸಿಕಲ್) ಗುಣಲಕ್ಷಣಗಳನ್ನು ಹೊರಹೊಮ್ಮಿಸುವ ಬಹು ಆಯಾಮದ ಕೃತಿಗಳೆಂದು ಅವರು ವರ್ಣಿಸುತ್ತಾರೆ.

2009ರಲ್ಲಿ ಶೆಟ್ಟರ್ ಅವರು ಸಣ್ಣ ಶಿಲ್ಪಗಳನ್ನು ರಚಿಸಿದ್ದರು. 'ಬರ್ಡ ಸಾಂಗ್' ಎಂಬ ಶಿಲ್ಪವನ್ನು ಸ್ಟೀಲ್ ಮತ್ತು ಮೆತ್ತನೆಯ ಬಟ್ಟೆಯಿಂದ ರಚಿಸುತ್ತಾರೆ. ಬರ್ಡಸಾಂಗ್ ಶಿಲ್ಪಗಳು ಒಂದು ಮಧುರ ತೇಲುತ್ತಿರುವ ಸಂಗೀತದ ಟಿಪ್ಪಣೆಗಳನ್ನು ಹೋಲುತ್ತವೆ. ಮತ್ತು ಪ್ರಕೃತಿಯಲ್ಲಿ ಕಂಡುಬರುವ ಸೌಂದರ್ಯದೊಂದಿಗೆ ಅನುಸರಿಸುತ್ತದೆ. ಅವರ ಇನ್ನೊಂದು ಶಿಲ್ಪಕೃತಿಯಲ್ಲಿ ಹವಾಮಾನದ ಚರ್ಮವನ್ನು ಹೊಳಪುಗೊಳಿಸಿದ ಮಸ್ಲಿನ್ ಬಟ್ಟೆಗಳನ್ನು ಐದು ಸಾವಯವ ರೂಪಗಳಾಗಿ ವಿಸ್ತರಿಸಲಾಗುತ್ತದೆ. ಪ್ರತಿಯೊಂದು ಎಳೆಯು ಸೂಕ್ಷ್ಮವಾಗಿ ವಿಸ್ತರಿಸಲಾಗಿರುತ್ತದೆ.

'ವೇಟಿಂಗ್ ಫಾರ್ ಜೂನ್' ಎಂಬ ಕಲಾಕೃತಿಯನ್ನು ಚಿಕ್ಕ ಟೆರಾಕೋಟಾ ಚಿಪ್ಪುಗಳಿಂದ ಸಂಯೋಜಿಸಲಾಗಿದೆ.

ಶೆಟ್ಟರ್ ಅವರ ಶಿಲ್ಪಕಲಾಕೃತಿಗಳು ಮತ್ತು ಪ್ರತಿಷ್ಠಾಪನೆಗಳಲ್ಲಿ ಅವರು ಎರಡು ಕ್ಷೇತ್ರಗಳಾದ ಮನುಷ್ಯ ಮತ್ತು ಪ್ರಕೃತಿಗಳನ್ನು ಸಂಯೋಜಿಸುವ ಪರಿಸರದಲ್ಲಿ ಸೃಷ್ಟಿಸುತ್ತಾರೆ. ಜೊತೆಗೆ ಆಕರ್ಷಕ ಮತ್ತು ಕ್ರಿಯಾತ್ಮಕ ರೂಪಗಳನ್ನು ಹೊಂದಿರುತ್ತವೆ.

ಶೆಟ್ಟರ್ ಅವರ ಪ್ರಮುಖ ಏಕವ್ಯಕ್ತಿ ಪ್ರದರ್ಶನಗಳು

- 2004ರಲ್ಲಿ KHOJ ಎಂಬ ದೆಹಲಿಯ International Artists Association ನಲ್ಲಿ ಪ್ರದರ್ಶನ ಮಾಡಿದರು.
- 2007ರಲ್ಲಿ 'Momentum 10' ಎಂಬ ಕಲಾಪ್ರದರ್ಶನವನ್ನು Bostonನ Institute of Contemporary Art ನಲ್ಲಿ ಆಯೋಜಿಸಿದರು.
- 'FOCUS' ಎಂಬ ಪ್ರದರ್ಶನವನ್ನು Texasನ The Modern Art Museum of Fort Worthನಲ್ಲಿ 2008ರಲ್ಲಿ ಏರ್ಪಡಿಸಿದ್ದರು.
- 2009ರಲ್ಲಿ Califorina ದ San Francisco Museum of Modern Artನಲ್ಲಿ ಪ್ರದರ್ಶನವನ್ನು ಆಯೋಜಿಸಿದ್ದರು.
- 2011ರಲ್ಲಿ Singaporeನ Herms Foundationನಲ್ಲಿ Flame of the Forest ಎಂಬ ಪ್ರದರ್ಶನವಾಯಿತು.
- 2012ರಲ್ಲಿ 'Dewdrops and Sunshine'ಎಂಬ ಪ್ರದರ್ಶನವು Australia ದ National Gallery of Victoriaದಲ್ಲಿ ಆಯೋಜಿಸಿದರು.
- 2013ರಲ್ಲಿ New York city ಯ Museum of Modern Art ನಲ್ಲಿ 'Varsha' ಎಂಬ ಪ್ರದರ್ಶನವನ್ನು ಆಯೋಜಿಸಲಾಯಿತು.
- 2013ರಲ್ಲಿ 'High Tide For a blue moon' ಎಂಬ ಪ್ರದರ್ಶನವನ್ನು ಮುಂಬೈನ Dr. Bhavu Daji Lad Museum ನಲ್ಲಿ ಪ್ರದರ್ಶನವಾಯಿತು.

ರಂಜನಿ ಶೆಟ್ಟರ್ ಅವರ ಪ್ರಮುಖ ಗುಂಪು ಪ್ರದರ್ಶನಗಳು

- 2003ರಲ್ಲಿ Minnesota ದ Walker Art Center ನಲ್ಲಿ 'How Latitudes Become forms: Art in a Global Age' ಎಂಬ ಪ್ರದರ್ಶನವನ್ನು ಆಯೋಜಿಸಿದರು.
- 2005ರಲ್ಲಿ 'Out There' ಎಂಬ ಪ್ರದರ್ಶನವನ್ನು ಇಂಗ್ಲೇಂಡ್‌ನ Sainsbury Centre for Visual Arts ನಲ್ಲಿ ಏರ್ಪಡಿಸಿದರು.
- 2005ರಲ್ಲಿ 'Dream on' ಎಂಬ ಶೀರ್ಷಕೆಯಡಿಯಲ್ಲಿ ಫ್ರಾನ್ಸನ Paris ನಲ್ಲಿ Foundation Cartier Pour I Art Contemporain ನಲ್ಲಿ ಪ್ರದರ್ಶನ ಏರ್ಪಡಿಸಲಾಯಿತು.
- 2005ರಲ್ಲಿ 'Trasition & Tansformation' ಎಂಬ ಪ್ರದರ್ಶನವನ್ನು University of Massachusetts ನ Fine art Centre ನಲ್ಲಿ ನೆರವೇರಿತು.
- 2006ರಲ್ಲಿ Marian Goodman Gallery ಯಲ್ಲಿ Freeing the line ಎಂಬ ಪ್ರದರ್ಶನವನ್ನು ನ್ಯೂಯಾರ್ಕನಲ್ಲಿ ಆಯೋಜಿಸಿದರು.
- 2006ರಲ್ಲಿ 'Zones of Contac XV' ಎಂಬ ಪ್ರದರ್ಶನವನ್ನು Australia ದ Sydney ಯ Biennale ಯಲ್ಲಿ ನೆರವೇರಿಸಿದರು.
- 2007ರಲ್ಲಿ United Arab Emirates ನಲ್ಲಿ '8th Sharjah Biennal' ಯನ್ನು ಆಯೋಜಿಸಿದರು.
- 2007ರಲ್ಲಿ ಫ್ರಾನ್ಸನಲ್ಲಿ '9th Lyon Biennial' ಯನ್ನು ಏರ್ಪಡಿಸಿದರು.
- 2007ರಲ್ಲಿ 'Sculptural Garden Inaugural Exhibition ನನ್ನು Francisco Musem of Modern Art ನಲ್ಲಿ ಶಿಲ್ಪಕೃತಿಗಳನ್ನು ಪ್ರದರ್ಶಿಸಿದರು.
- 2009ರಲ್ಲಿ 'Toucher, 10th Liverpool Biennial'ಯನ್ನು ಇಂಗ್ಲೇಂಡನಲ್ಲಿ ಆಯೋಜಿಸಿದರು.
- 2010ರಲ್ಲಿ ನ್ಯೂಯಾರ್ಕನ Museum of Modern Art ನಲ್ಲಿ 'On Line' ಎಂಬ ಪ್ರದರ್ಶನವನ್ನು ಪ್ರದರ್ಶಿಸಿದರು.



ರಂಜನಿ ಶೆಟ್ಟರ ಅವರು ರಚಿಸಿದ ಒಂದು ಸಮಕಾಲಿನ ಶಿಲ್ಪಕಲಾಕೃತಿ







ರಂಜನಿ ಶೆಟ್ಟರ ಅವರು ರಚಿಸಿದ ಸಮಕಾಲಿನ ಶಿಲ್ಪಕಲಾಕೃತಿಗಳು

ದೇವಿ ಪ್ರಿಯಾ ವಿಮಲನಾಥನ್

ದೇವಿ ಪ್ರಿಯಾ ವಿಮಲನಾಥನ್ ಅವರು ಜುಲೈ 14, 1982ರಲ್ಲಿ ಜನಿಸಿದರು. ದೇವಿ ಪ್ರಿಯರವರು ತಮ್ಮ ಬಾಲ್ಯದಿಂದಲೇ ಕಲೆ, ಚಿತ್ರಕಲೆ ಮತ್ತು ರೇಖಾಚಿತ್ರಕ್ಕಾಗಿ ಅವರ ಸಾಮರ್ಥ್ಯವು ಹಾಗೂ ಅವರು ಯೋಚಿಸಬಹುದಾದದ್ದು ಎಲ್ಲಕಿಂತ ಹೆಚ್ಚಾಗಿತ್ತು, ಅವರು ಇಂದು ದೇಶದ ಅತ್ಯುತ್ತಮ ಸಂಸ್ಥೆಗಳಲ್ಲಿ ಒಂದಾಗಿರುವ ಕರ್ನಾಟಕದ ಚಿತ್ರಕಲಾ ಪರಿಷತ್ ಕಾಲೇಜ್‌ನಲ್ಲಿ 2003ರಲ್ಲಿ ಚಿತ್ರಕಲೆಯಲ್ಲಿ ಬಿ.ಎಫ್.ಎ ಪದವಿಯನ್ನು ಪಡೆದರು. ನಂತರ 2005ರಲ್ಲಿ ಬರೋಡಾದ ಎಮ್. ಎಸ್.ವಿಶ್ವವಿದ್ಯಾಲಯದಲ್ಲಿ ಕಲಾ ಇತಿಹಾಸದ ಕುರಿತು ಒಂದು ವರ್ಷ ಬ್ರಿಡ್ಜ್ ಕೋರ್ಸನ್ನು ಪೂರ್ಣಗೊಳಿಸಿದರು. ಕಲಿಕೆಯಲ್ಲಿ ಹೆಚ್ಚಿನ ಆಸಕ್ತಿ ವಹಿಸಿ, 2012ರಲ್ಲಿ 'Cambridge International A Level Art and Design' ನಲ್ಲಿ ತರಬೇತಿಯನ್ನು ಪಡೆದರು ಹಾಗೂ 'Regional Design and Technical Development Centre' ನಲಿ ಮೇಣದ ಶಿಲ್ಪಗಳನ್ನು ಮಾಡುವಲ್ಲಿ ಪರಿಣಿತಿ ಹೊಂದಿದರು. ನಂತರ 2014ರಲ್ಲಿ ಬೆಂಗಳೂರಿನ 'ಬೋಧಿ' ಕಾಲೇಜ್ ಆಫ್ ಆರ್ಟ್ಸ್‌ನಲ್ಲಿ ಚಿತ್ರಕಲೆಯಲ್ಲಿ ಎಮ್.ಎಫ್.ಎ. ಪದವಿಯನ್ನು ಪಡೆದು ತಮ್ಮ ಶೈಕ್ಷಣಿಕ ಅಭ್ಯಾಸವನ್ನು ಪೂರ್ಣಗೊಳಿಸಿದರು. ಆದರೆ ಕಲಾವಿದನಿಗೆ ಕಲಿಕೆ ಸತತವೆಂಬಂತೆ, ನಿರಂತರವಾಗಿ ಕಲಾ ಜಗತ್ತಿನಲ್ಲಿ ಹೊಸ ಬೆಳವಣಿಗೆಯನ್ನು ತರಲು ಶ್ರಮವಹಿಸಿದರು. ಇವರ ಪತಿಯು ಚಿತ್ರಕಲಾವಿದರು ಆದ ಕಾರಣ ಹೊಸದನ್ನು ಮಾಡುವ ಉದ್ದೇಶದಿಂದ ದೇವಿಪ್ರಿಯಾರವರು ಶಿಲ್ಪಕಲೆಗೆ ಸ್ಥಳಾಂತರಗೊಂಡರು.

ದೇವಿಪ್ರಿಯಾರವರು ಶಿಲ್ಪಕಲೆಯನ್ನು ಮಾಡುವಾಗ ಅವರ ಆಸಕ್ತಿ ಕಂಚಿನ ಶಿಲ್ಪಗಳನ್ನು ಮಾಡುವಲ್ಲಿ ಮೂಡುತ್ತದೆ. ಕಂಚಿನ ಶಿಲ್ಪಗಳನ್ನು ಮಾಡುವಲ್ಲಿ ಇವರು ಚೋಳರ ಕಾಲದ ಕಂಚಿನ ಶಿಲ್ಪಗಳಿಂದ ಸ್ಪೂರ್ತಿಯನ್ನು ಪಡೆಯುತ್ತಾರೆ. ಚೋಳರು ಶಿಲ್ಪಗಳನ್ನು ವಿಶೇಷವಾಗಿ ವೈಭವದ ಕಥೆಗಳನ್ನು ಹೇಳಲು ಬಳಸಲಾಗುತ್ತಿತ್ತು. ಹಾಗೂ ಅವರು ಭಾರತದ ಡಿಸೈನ ಸೆಂಟರ್

ಸರ್ಕಾರದಿಂದ ತರಬೇತಿ ಪಡೆದಿದ್ದ ಕಾರಣ ಮೇಣದ ಶಿಲ್ಪಗಳು ಹಾಗೂ ಟೆರಾಕೋಟ ಶಿಲ್ಪಗಳನ್ನು ರಚಿಸಿದರು.

ದೇವಿಪ್ರಿಯಾರವರು ರಾಧಾಕೃಷ್ಣ ವಿಷಯವನ್ನು ಆಧರಿಸಿ ಶಿಲ್ಪಗಳನ್ನು ರಚಿಸುತ್ತಾರೆ. ಈ ಶಿಲ್ಪಗಳಲ್ಲಿ ರಾಧಾ ಕೃಷ್ಣನ ಸೌಂದರ್ಯ ಮತ್ತು ಏಕತೆಯನ್ನು ಪ್ರದರ್ಶಿಸುವುದು ಅವರ ಪ್ರವರ್ತಕ ಯೋಜನೆಯಾಗಿರುತ್ತದೆ. ಅವರು ಶಿಲ್ಪಗಳಲ್ಲಿ ರಾಧೆಯಿಲ್ಲದೆ ಕೃಷ್ಣನಿಲ್ಲ ಎಂದು ಹೇಳಲು ಪ್ರಯತ್ನಿಸುತ್ತಾರೆ. ಹಾಗೂ ಪ್ರತಿಯೊಂದು ಕಂಚಿನ ಶಿಲ್ಪದಲ್ಲಿ ರಾಧಾಕೃಷ್ಣರ ಕಲಾತ್ಮಕ ಸೌಂದರ್ಯವನ್ನು ತೋರಿಸುತ್ತಾರೆ.

ದೇವಿಪ್ರಿಯಾರವರು ಪ್ರಸ್ತುತ ಬೆಂಗಳೂರಿನ 'National Academy For Learning'ನಲ್ಲಿ ಮಕ್ಕಳಿಗೆ ಕಲೆಯನ್ನು ಬೋಧಿಸುತ್ತಿರುವರು. ಈ ಬೋಧನಾ ವೃತ್ತಿ ಜೀವನವನ್ನು ಅವರು 11 ವರ್ಷಗಳ ಹಿಂದೆ ಅಂದರೆ 2006ರಲ್ಲಿ ಪ್ರಾರಂಭಿಸಿದರು. ಮಕ್ಕಳ ಸೃಜನಶೀಲ ಮನಸ್ಸನ್ನು ಗ್ರಹಿಸುವಲ್ಲಿ ಅವರು ಪ್ರಮುಖ ಪಾತ್ರವಹಿಸಿದ್ದಾರೆ. ಮತ್ತು ವಿದ್ಯಾರ್ಥಿಗಳಿಗೆ ಪ್ರತಿಯೊಂದು ಕಲಾ ಪ್ರಕಾರಗಳನ್ನು ಪರಿಚಯಿಸಿದ್ದಾರೆ. ಅವುಗಳಲ್ಲಿ ಕುಂಬಾರಿಕೆ, ಗಾಜಿನ ಚಿತ್ರಕಲೆ, ಗೋಡೆ ಚಿತ್ರಕಲೆ, ಭಿತ್ತಿಚಿತ್ರಗಳು, ಜೇಡಿಮಣ್ಣಿನ ಶಿಲ್ಪಗಳು, ಕ್ಯಾನ್ವಸ್ ಚಿತ್ರಕಲೆ ಮತ್ತು ಇನ್ನೂ ಹಲವು ಪ್ರಕಾರಗಳಲ್ಲಿ ತರಬೇತಿಯನ್ನು ನೀಡಿದ್ದಾರೆ.

ದೇವಿಪ್ರಿಯಾರವರು ವೃತ್ತಿಯನ್ನು ಹೊರತುಪಡಿಸಿ, ಅವರು ತಮ್ಮ ಸೃಜನಶೀಲ ಪ್ರಯೋಗಕ್ಕಾಗಿ ಅವರು ಯಾವಾಗಲೂ ಸಮಯ ಮತ್ತು ಸ್ಥಳವನ್ನು ಹೊಂದಿದ್ದಾರೆ. ದೇಶದಲ್ಲಿ ಖ್ಯಾತ ಕಲಾವಿದರಾಗಿರುವ ಅವರ ಪತಿ ಮಿಲನಾಥನ್ ಅವರೊಂದಿಗೆ ಚಿತ್ರಕಲೆ ಮತ್ತು ಶಿಲ್ಪಕಲೆಯನ್ನು ಮಾಡಿರುವರು. ಅವರು ಅವರ ಕಲಾ ಪ್ರಕಾರಗಳಲ್ಲಿ ಅವರು ಬಯಸುವ ಎಲ್ಲಾ ಕೆಲಸವನ್ನು ಮಾಡಲು ಪ್ರೋತ್ಸಾಹಿಸುವರು.

ದೇವಿಪ್ರಿಯರವರು ಪ್ರದರ್ಶಿಸಿರುವ ಕೆಲವು ಪ್ರಮುಖ ಪ್ರದರ್ಶನಗಳು

2014 – UB City Art Festival, Bangalore.

2012- Art Festival, Chennai.

2012 – A Family Rendering' At CKP (Bronze Sculptures)

2003 – Nanjunda Siri, Annual Art Exhibition Best Composition College of Fine Arts, Bangalore.

2002 – ABVP Won Best Painting State Level, Venkatappa Art Gallery, Bangalore.

ವಿಮಲನಾಥನ ಅವರು ಭಾಗವಹಿಸಿದ ಶಿಬಿರಗಳು.

2007 – ಚಿತ್ರಸಂತೆ, ಕರ್ನಾಟಕ ಚಿತ್ರಕಲಾ ಪರಿಷತ್ ಬೆಂಗಳೂರು.

2006-08 South Region Camlin Art Foundation.

2003 – Chitrakala Parishat Kala Mela Camp with Artist Anjalie Elemenon 2013, Chitra Sante, Karnataka, Chitrakala Patishath Bangalore.

2002 – Jawahar Bala Bhavan, Lalithakala Academy, Hassan.

2000- 4th South Region Camlin Art Foundation.

1999 – Kala Mela (Terracotta Art Camp), Chitrakala Parishath.

ಇವರ ಈ ದೃಶ್ಯಕಲಾ ಕ್ಷೇತ್ರದಲ್ಲಿನ ಸೇವೆಗೆ ಹಲವಾರು ಪ್ರಶಸ್ತಿಗಳು ದೊರಕಿವೆ.

2003 – ನಂಜುಡ ಸಿರಿ, ವಾರ್ಷಿಕ ಕಲಾ ಪ್ರದರ್ಶನ, ಕಾಲೇಜ್ ಆಫ್ ಫೈನ್ ಆರ್ಟ್, ಬೆಂಗಳೂರು.

2002– ಎ.ಬಿ.ವಿ.ಪಿ ಬೆಸ್ಟ್ ಪೇಂಟಿಂಗ್ ಅವಾರ್ಡ, ರಾಜ್ಯಮಟ್ಟ, ವೆಂಕಟಪ್ಪ ಆರ್ಟ್ ಗ್ಯಾಲರಿ, ಬೆಂಗಳೂರು.

2016– ರಾಜ್ಯ ಪ್ರಶಸ್ತಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

ಅಧ್ಯಾಯ–ಐದು

ಸಾಂಪ್ರದಾಯಕ ಮತ್ತು ಸಮಕಾಲಿನ ಶಿಲ್ಪಕಲಾಕೃತಿಗಳ ತೌಲನಿಕ ಅಧ್ಯಯನ





ದೇವಿಪ್ರಿಯಾ ವಿಮಲನಾಥನ್
ಅವರು ರಚಿಸಿರುವ
ಲೋಹ ಮಾಧ್ಯಮ ಶಿಲ್ಪಕಲಾಕೃತಿಗಳು

ಸಾಂಪ್ರದಾಯಕ ಅಥವಾ ಸಾಂಪ್ರದಾಯ ಎನ್ನುವ ಶಬ್ದ ಒಂದು ಪದ್ಧತಿ ಪರಂಪರೆ ನಡೆದುಕೊಂಡು ಬಂದದ್ದು ಇದಕ್ಕೆ ಪೂರಕವೆಬಂತೆ ಹಳೆಯ ಅಥವಾ ಪುರಾತನವೆಂದು ಅರ್ಥೈಸಿಕೊಳ್ಳಬೇಕಾಗುತ್ತದೆ. ಎಷ್ಟು ಹಳೆಯದೆಂದು ಇಲ್ಲವೇ ಕಾಲತೀತವಾದುದು. ಅನುಸರಿಸಿಕೊಂಡು ಬಂದ ರೀತಿ, ಕ್ರಮಗಳು ಸಮಯಕ್ಕನುಸಾರವಾಗಿ ಬದಲಾವಣೆ ಹೊಂದುತ್ತಾ ಸಾಗುತ್ತದೆ. ಪ್ರದೇಶದಿಂದ ಪ್ರದೇಶಕ್ಕೆ ಪದ್ಧತಿಗಳಲ್ಲಿ ಭಿನ್ನತೆಯನ್ನು ಕಾಣುತ್ತೇವೆ. ಇಲ್ಲಿ ಒಂದು ಕಲಾಕೃತಿಯ ರಚನೆ ಆರಂಭದ ಸಮಯದಲ್ಲಿ ವೈಯಕ್ತಿಕ ಉದ್ದೇಶದಿಂದ ರೂಪ ತಾಳುತ್ತದೆಯಾದರೂ ಕಾಲಾಂತರದಲ್ಲಿ ರಚನಾಕಾರನ ಬೌದ್ಧಿಕ ಮಟ್ಟದ ಕಲ್ಪನೆಯ ವಿಚಾರಗಳ ಸಾರವನ್ನು ಕೃತಿಯಲ್ಲಿ ಅಳವಡಿಕೆಯಾಗುತ್ತದೆ. ಭಾರತೀಯ ಸಾಂಪ್ರದಾಯಕ ಶಿಲ್ಪಕಲಾಕೃತಿಯಲ್ಲಿ ಅಳವಡಿಕೆಯಾಗುತ್ತದೆ. ಭಾರತೀಯ ಸಾಂಪ್ರದಾಯಕ ಶಿಲ್ಪ ಕಲಾಕೃತಿಯ ಪ್ರಾಥಮಿಕ ಹಂತದ ರಚನಾ ಪದ್ಧತಿಗೆ ಭಿನ್ನ ದೃಷ್ಟಿಕೋನವನ್ನಿಟ್ಟುಕೊಂಡು ರಚಿಸುವಂತಹ ರೂಢಿಯನ್ನು ಇಂದಿಗೂ

ಪಾಲಿಸಿಕೊಂಡು ಬರುವುದನ್ನು ನಾವು ಕಾಣುತ್ತೇವೆ. ಶಾಸ್ತ್ರ ಬದ್ಧವಾದ ರೀತಿಯಲ್ಲಿ ಪೂರ್ವಭಾವಿ ಸಿದ್ಧತೆಯನ್ನು ಮಾಡಿಕೊಳ್ಳಲಾಗುತ್ತದೆ. ಶತಮಾನಗಳ ಹಿಂದೆ ಸರಿದು ನೋಡುವುದಾದರೇ, ಭಿತ್ತಿ ಶಿಲ್ಪಗಳನ್ನು ಹಗೂ ಏಕ ಶಿಲಾಕೃತಿಗಳನ್ನು ಸಮೂಹ ಕಲಾವಿದರು ಸೇರಿ ರಚಿಸುವುದು ತಿಳಿದು ಬರುತ್ತದೆ. ಅನುಭವಿ ಕಲಾವಿದ ತನ್ನ ಅಡಿಯಲ್ಲಿ ಮಾರ್ಗದರ್ಶನ ಪಡೆಯುವ ಕಲಾವಿದರೊಂದಿಗೆ ಶಿಲ್ಪಗಳನ್ನು ರಚನೆ ಮಾಡುವುದಾಗಿರುತ್ತಿತ್ತು. ಅಲ್ಲದೇ ಒಂದು ಮನೆತನದ ಕೃತಿಗಳಾಗಿ ರಚನೆಯಾಗುತ್ತಿದ್ದವು. ಈ ತೆರನಾಗಿ ರಚನೆಯಾಗುವ ಶಿಲ್ಪಕಲಾಕೃತಿಗಳು ಒಂದು ಕಡೆಯಿಂದ ಇನ್ನೊಂದು ಕಡೆಯಲ್ಲಿ ಹಲವಾರು ವ್ಯತ್ಯಾಸ ಮತ್ತು ವೈಶಿಷ್ಟ್ಯಗಳಿಂದ ಕೂಡಿರುತ್ತಿದ್ದವು.

ಪ್ರಾಗೈತಿಹಾಸಿಕ ಇತಿಹಾಸದ ಹಂತಗಳಿಂದ ಪರಿಗಣಿಸುತ್ತಾ ಬಂದಾಗ ಮಣ್ಣಿನ ಕೃತಿಗಳನ್ನು ಸರಳವಾಗಿ ರೂಪ ನೀಡಿ ರಚನೆ ಮಾಡುತ್ತಾ ನಂತರ ಮರ, ಶಿಲೆ, ಲೋಹ, ಮಾಧ್ಯಮಗಳಲ್ಲಿ ನೈಪುಣ್ಯತೆಯ ಬದಲಾವಣೆ ಕಂಡು ಬರುತ್ತದೆ. ತದನಂತರದ ರೂಪದಲ್ಲಿ ಸಾಂಪ್ರದಾಯಕ ಕಲಾಕೃತಿಗಳ ರಚನೆಗೆ ಶಾಸ್ತ್ರಿಯತೆ, ಧಾರ್ಮಿಕತೆ ರಚನೆಯ ಕುಶಲತೆಯು ಜೊತೆಯಾಗುತ್ತದೆ. ಸಾಂಪ್ರದಾಯಕ ಕಲಾವಿದರು ಆರಂಭದಲ್ಲಿ ಮಣ್ಣು ಮತ್ತು ಮರದ ಮಾಧ್ಯಮಕ್ಕೆ ನೀಡಿದ ಪ್ರಾಧ್ಯನತೆಯಷ್ಟೇ ಶಿಲೆಯಲ್ಲಿ ರಚನೆ ಮಾಡುವುದರಲ್ಲಿ ಆಸಕ್ತಿ ತೋರುವನು. ಇದಕ್ಕೆ ಪೂರಕವಾಗಿ ರಾಜರು, ರಾಜಗುರುಗಳು, ಸಾಮಂತ ದೊರೆಗಳ ಆಜ್ಞೆಯ ಮೇರೆಗೆ ನಿರ್ಮಿತವಾಗುವ ದೇವಾಲಯ ನಿರ್ಮಾಣಕ್ಕೆ ಸಹಕಾರಿಯಾಗುವ ಉದ್ದೇಶದಿಂದ ಶಿಲೆಯ ಕೃತಿಗಳು ರಚನೆಗೊಳ್ಳುತ್ತಾ ಸಾಗುತ್ತದೆ. ಸುರಕ್ಷತೆಯೆಡೆಗೆ ಹೆಚ್ಚೆಚ್ಚು ಗಮನದಲ್ಲಿಟ್ಟುಕೊಂಡು ಕಲಾವಿದರು ಶಿಲ್ಪ ಕಲಾಕೃತಿಗಳನ್ನು ರಚನೆ ಮಾಡುತ್ತಾರೆ.

ಸಾಂಪ್ರದಾಯಕ ಶಿಲ್ಪಕಲಾಕೃತಿಗಳ ರಚನೆಯು ಆಯಾ ಸ್ಥಳೀಯ ಶಿಲೆಗಳ ಬಳಕೆಯ ಅನುಗುಣವಾಗಿ ಕೆತ್ತನೆಯಾಗುತ್ತಿತ್ತು. ಅರಸರ ಇಚ್ಛಾನುಸಾರವಾಗಿ ಅಮೃತಶಿಲೆ, ಕಪ್ಪುಶಿಲೆಗಳನ್ನು ಬೇರೆಡೆಯಿಂದ ಆಮದು ಮಾಡಿಕೊಂಡು ಸೂಕ್ಷ್ಮ, ಅಲಂಕಾರಿಕ ಕೃತಿಗಳನ್ನು ಸ್ಥಳೀಯ

ಕಲಾವಿದರು ರಚನೆ ಮಾಡುತ್ತಿದ್ದರು. ಬಹಳ ವರ್ಷಗಳವರೆಗೆ ಸುರಕ್ಷಿತವಾಗಿ ಇರಬೇಕೆಂಬ ದೃಷ್ಟಿಯಿಂದ ಶಿಲೆಯ ಮಾಧ್ಯಮದಲ್ಲಿ ರಚನೆಯಾಗುತ್ತದೆ.

ಸಾಂಪ್ರದಾಯಕ ಶಿಲ್ಪಕಲಾಕೃತಿಗಳ ಎಲ್ಲಾ ರೀತಿಯ ವಿಷಯಗಳಿಂದ ಕೂಡಿದ ನೇರ ಭಾಷೆಯ ರಚಿತವಾಗಿರುತ್ತವೆ. ಜನಸಾಮಾನ್ಯರ ದಿನನಿತ್ಯ ಚಟುವಟಿಕೆಗಳು, ಸಾಂಸ್ಕೃತಿಕ ಮೇಳ, ಹಬ್ಬ, ಕ್ರೀಡೆ, ಸೈನ್ಯದಳ, ಅರಸು ಮನೆತನ, ದೇವ–ದೇವತೆಗಳ ಕಥಾಧಾರಿತ ವಿಷಯಗಳನ್ನು ತುಂಬಾ ಅಲಂಕಾರಿಕವಾಗಿ ರಚನೆಗೊಂಡಿವೆ. ಅತಿಯಾದ ಅಲಂಕಾರಿಕತೆ, ಆಭರಣ, ವಿನ್ಯಾಸಗಳಿಂದ ಕೂಡಿರುತ್ತವೆ. ಸೂಕ್ಷ್ಮ ಮತ್ತು ಕುಶಲತೆ ಓರೆಯಾಗಿಟ್ಟುಕೊಂಡು ಕೆತ್ತುವ ಪದ್ಧತಿಯಿತ್ತು ಹಾಗೂ ಈಗಲೂ ಮುಂದುವರೆದುಕೊಂಡು ಬಂದಿದೆ. ಇಲ್ಲಿ ಅಂದರೆ ಸಾಂಪ್ರದಾಯಕ ಕಲಾಕೃತಿಗಳಲ್ಲಿ ಪ್ರಾದೇಶಿಕ ಶೈಲಿಯಲ್ಲಿ ರಚನೆ ಮಾಡುತ್ತಾರೆ. ಹಲವಾರು ಕಲಾಕೃತಿಗಳು ಒಂದನ್ನೊಂದು ಹೋಲುವ ಅನುಸರಿಸುವಂತೆ ಭಾಸವಾಗುತ್ತವೆ. ಕಲಾವಿದನ ತಂತ್ರಗಾರಿಕೆ, ವಿನ್ಯಾಸದ ಪದ್ಧತಿ, ಆಕಾರಗಳ ಪೂರ್ವ ಸಿದ್ಧತೆಯಂತೆ ಶಿಲ್ಪಗಾರನು ಮನದಾಳದ ವಿಷಯಗಳಿಗೆ ರೂಪ ಕೊಡುತ್ತಾನೆ. ನಿರ್ದಿಷ್ಟವಾದ ಅಳತೆ, ಭಾವ, ಭಂಗಿ, ಆಯಾಮಗಳಲ್ಲಿ ರಚನೆಕಾರನ ಶ್ರೇಷ್ಠತೆಯುಳ್ಳ ಕೆತ್ತನೆಯ ಅನುಭವವನ್ನು ಬಿಂಬಿಸುತ್ತವೆ. ಇಂತಹ ಕುಶಲತೆ ಕೇವಲ ಶಿಲೆಯ ಮಾಧ್ಯಮಗಳವಾಗಿರದೇ ಲೋಹ, ಮರದ ಕೃತಿಗಳಲ್ಲೂ ಕಂಡು ಬರುತ್ತವೆ. ಭಾರತೀಯ ಸಾಂಪ್ರದಾಯಕ ಶಿಲ್ಪ–ಚಿತ್ರಗಳಲ್ಲಿ ಅಷ್ಟಾಗಿ ಭಿನ್ನತೆ ಕಾಣಿಸುವುದಿಲ್ಲ. ಅತಿಯನಿಸುವಷ್ಟು ಅಲಂಕಾರಿಕವಾದ ಆಭರಣಗಳ ವಿನ್ಯಾಸ, ಕೇಶಾಲಂಕಾರ ಮತ್ತು ಹೂ ಬಳ್ಳಿಗಳ ಚಿತ್ರಣವಿರುತ್ತದೆ. ಆದರೆ ನಿರಾಭರಣವಾದ ನಗ್ನ ಶಿಲ್ಪಗಳು ಸರಳ ಸುಂದರ ಹಾವ–ಭಾವ ದಿಂದ ಕೃತಿಗಳು ನಮಗೆ ಇನ್ನಷ್ಟು ಕಲಾವಿದನ ಕಲ್ಪನೆ, ವಿಷಯದ ಸ್ಪಷ್ಟತೆಯನ್ನು ನಮಗೆ ಸಾಮಿಪ್ಯತೆಯ ಅರಿವು ಸಿಗುತ್ತದೆ.

ವಿಜಯನಗರ, ಬದಾಮಿ, ಪಟ್ಟದ ಕಲ್ಲು, ಐಹೊಳೆಯ ಭಿತ್ತಿ ಶಿಲ್ಪಗಳು ಒರಟು ಕಲ್ಲಿನ ಕೆತ್ತನೆಯ ಕೃತಿಗಳಾಗಿವೆ. ಇಲ್ಲಿ ಸೂಕ್ಷ್ಮತೆ ಮತ್ತು ಅಲಂಕಾರಿಕ ವಿನ್ಯಾಸಕ್ಕೆ ಹೆಚ್ಚು ಅವಕಾಶವಿರದೇ ಇದ್ದುದರಿಂದಲೇ ಆಕೃತಿಗಳಲ್ಲಿನ ಭಾವನೆ, ಚಲನೆ, ಕ್ರಿಯೆ ಎಲ್ಲವೂ ಸರಳವಾಗಿ ಬಿಂಬಿತವಾಗಿ ಗೋಚರಿಸುತ್ತವೆ. ಹೊಯ್ಸಳ, ಚೋಳರ ಕಾಲದ ಶಿಲ್ಪಗಳಲ್ಲಿ ಅಲಂಕಾರಿಕವಾಗಿ

ವೈಭವೀಕರಣೆಯನ್ನು ನೋಡುತ್ತೇವೆ. ಇವರು ಬಳಸಿದ ಶಿಲೆ ಕಪ್ಪು ಮರಳು ಶಿಲ್ಪಗಳು ಮತ್ತು ಬಳಪದ ಶಿಲೆಯಷ್ಟು ಮೃದು ಕೆತ್ತನೆಗೆ ಸಹಕಾರಿಯಾಗುವುದಕ್ಕೆ ಕಾರಣೀಯವಾಗುತ್ತದೆ. ಇವರ ಸಾಂಪ್ರದಾಯಕ ಮಾನವಾಕೃತಿಗಳ ರಚನೆಯಲ್ಲಿ ವಿಶಾಲವಾದ ಎದೆ, ನೀಳವಾದ ಮೂಗು, ಕಿರಿದಾದ ತುಟಿಗಳು, ಭಿನ್ನ ಭಿನ್ನವಾದ ಅಲಂಕಾರಿಕ ಕೇಶವಿನ್ಯಾಸ, ಕಿರಿದಾದ ನಡು(ಸೊಂಟ) ನೀಳವಾದ ಆಕೃತಿಗಳು ನಮಗೆ ಮೇಲ್ನೋಟಕ್ಕೆ ಕಂಡರೂ ಮುಖಚಹರೆಯಲ್ಲಿ ವಿಷಯಕ್ಕೆ ತಕ್ಕ ಹಾಗೆ ಭಾವನೆ, ಹಿನ್ನಲೆಯ ಚಿತ್ರತವಾಗಿರುತ್ತವೆ.

ಶಿಲ್ಪ ಕಲಾಕೃತಿಗಳು ಕಲೆಯು ಅನುಭವ ಆನಂದ ನೋಡುಗನಿಗೆ ದೊರೆಯುತ್ತದೆ. ಅನೇಕ ಗುಣ ವೈಶಿಷ್ಟತೆ ಹೊಂದಿದ ಪ್ರಯೋಗಗಳು ಸಾಂಕೇತಿಕವಾಗಿ ಪ್ರತಿಮೆಯಲ್ಲಿ ಸಿರಿತನ ತೋರಿದರೆ, ದೃಶ್ಯದಲ್ಲಿನ ಪರಂಪರೆ, ವಿವರಣೆಯ ವೈವಿಧ್ಯತೆಯಿಂದ ಕೂಡಿದ ಸೊಗಸಾದ ಭಿನ್ನತೆಯ ಭಾವ-ಭಂಗಿಗಳಾಗಿರುತ್ತದೆ. ರೂಪ, ತಂತ್ರಗಾರಿಕೆ, ಶೈಲಿಯಲ್ಲಿ ಕಾಲಕ್ಕನುಗುಣವಾಗಿ ಸಾಮ್ಯತೆಯನ್ನು ಒಂದು ಪರಿಕಲ್ಪನೆಯಾಗಿ ಮುಂದುವರೆಸಿಕೊಂಡು ಬರುತ್ತಿದೆ.

ಇನ್ನು ಆಧುನಿಕ ಶಿಲ್ಪಕಲಾಕೃತಿಗಳಲ್ಲಿ ಈ ಎಲ್ಲಾ ಅಂಶಗಳು ಸಾಂದರ್ಭಿಕವಾಗಿ ಬಳಸಿಕೊಳ್ಳವುದಾಗಿ ಆಂಗ್ಲರ ಆಡಳಿತವಾಧಿಯಲ್ಲಿ ಭಿನ್ನವಾದ ಬದಲಾವಣೆಯನ್ನು ಶಿಲ್ಪಿ ಕಲಾಕೃತಿಗಳಲ್ಲಿ ಮೂಡಿ ಬರುತ್ತದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಸಹಜವಾಗಿ ಭಾರತೀಯ ಸಾಂಪ್ರದಾಯಕ ಕಲೆಯಿಂದ ಪಾಶ್ಚಿಮಾತ್ಯದ ಕಲೆಯ ಪ್ರಭಾವಕ್ಕೆ ಒಳಗಾಗುತ್ತಾರೆ. ಪಾಶ್ಚತ್ಯ ಚಿತ್ರ ಶಿಲ್ಪಗಳ ನೈಜತೆ, ಸರಳತೆಯ ನೆರಳಿಗೆ ದೇಶಿ ಕಲಾವಿದರು ಪ್ರಭಾವಿತರಾಗುತ್ತಾರೆ. ಭಾರತೀಯ ಸಾಂಪ್ರದಾಯಕ ಕೃತಿಗಳ ರಚನೆಯನ್ನು ಬದಿಗಿಟ್ಟು ನೂತನವಾದ ಶಿಲ್ಪ ಕಲಾಕೃತಿಗಳ ಶೈಲಿ, ಸಮಕಾಲೀನ ವಿಚಾರ, ವಸ್ತು, ಕಲ್ಪನೆಯ ಅಭಿವ್ಯಕ್ತಿಸುವ ಪರಿಯನ್ನು ಮೈಗೂಡಿಸಿಕೊಳ್ಳುತ್ತಾರೆ. ಇದು ನಮಗೆ ತದ್ವಿರುದ್ಧವಾದರೂ, ವೈವಿಧ್ಯತೆಯುಳ್ಳ ಹೊಸತನ ಮಾರ್ಗವಾಗುತ್ತದೆ. ಭಾವಚಿತ್ರ, ವ್ಯಕ್ತಿ ಚಿತ್ರದಲ್ಲಿ ಕೆತ್ತನೆಯ ಹಾವ-ಭಾವ, ಉಡುಗೆ ತೊಡುಗೆ, ನೈಜತೆ ಸತ್ಯತೆಯುಳ್ಳ ಸಂಯೋಜನೆಯನ್ನು ಕಲಾವಿದ ಒಲಿಸಿಕೊಳ್ಳುತ್ತಾನೆ.

ಶತಶತಮಾನಗಳಿಂದ ಭಾರತೀಯ ಶಿಲ್ಪ-ಚಿತ್ರಗಳಲ್ಲಿ ಸುಂದರತೆ ಸೌಂದರ್ಯವೆನ್ನುವದು ಹೀಗೆ ಇರಬೇಕೆಂಬ ಪರಿಭಾಷೆಯನ್ನಿಟ್ಟುಕೊಂಡಿದ್ದರು. ಅಂತಹ ಮಾನಸಿಕ ಸ್ಥಿರತೆಯಿಂದ ಆಧುನಿಕ ಕಲೆಯ ಇನ್ನೊಂದು ತೆರನಾದ ಸೌಂದರ್ಯಾನುಭವದ ಅನಾವರಣಗೊಳ್ಳುವುದು ಹತ್ತೊಂಬತ್ತನೆಯ ಶತಮಾನದ ಮಧ್ಯಕಾಲದಲ್ಲಿ ಆಧುನಿಕ ಶಿಲ್ಪಗಳಲ್ಲಿ ಕಲ್ಪನೆಯ ಸುಂದರತೆ, ರೂಪ, ಅಮೂರ್ತರೂಪ, ವಿಕೃತರೂಪಗಳು ಭಾರತೀಯ ದೃಶ್ಯ ಮಾಧ್ಯಮದಲ್ಲಿ ಹೊರಹೊಮ್ಮುತ್ತವೆ. ಆಧುನಿಕ ಶಿಲ್ಪಗಳ ವಿಚಾರ ಹಾಗೂ ಕಲ್ಪನೆಗಳು ಉದ್ದೇಶಿತವಾಗಿರುತ್ತವೆ. ಸಾಂಪ್ರದಾಯಕ ರಚನಾ ಶೈಲಿ, ಪದ್ಧತಿಯಿಂದ ಬಿಡಿಸಿಕೊಂಡು ಬೇರೊಂದು ಚಿಂತನೆ, ಕಲ್ಪನೆ, ಶೈಲಿಯನ್ನು ಮೈಗೂಡಿಸಿಕೊಳ್ಳುವುದೇ ಭಾರತೀಯ ದೃಶ್ಯ ಕ್ಷೇತ್ರಕ್ಕೆ ಹೊಸ ಆಯಾಮ ವನ್ನಾಗಿಸುತ್ತದೆ.

ಆಧುನಿಕ ದೃಶ್ಯಕಲೆಯು ಮೂರ್ತ-ಅಮೂರ್ತ ಕಲೆಯೆಡೆಗೆ ಸೂಚಿಯಾಯಿತು. ವೈಯಕ್ತಿಕ ಅನುಭವ, ಅನಿಸಿಕೆ ಸಂವೇದನಾ ಶೀಲಾ ಅಭಿವ್ಯಕ್ತಿಯ ವಿಧಾನಗಳ ಪ್ರಯೋಗಗಳು ದೇಶದ ವಿವಿದೆಡೆ ಆರಂಭವಾಯಿತು. ಸಮಕಾಲೀನ ಆಧುನಿಕ ಶಿಲ್ಪಗಳು ಕೇವಲ ಮಣ್ಣು, ಮರ,ಲೋಹ,ಶಿಲೆಗಳಿಗೆ ಸೀಮಿತವಾಗಿರದೇ ಮಿಶ್ರ ಮಾಧ್ಯಮವಾಗಿ, ಅಕ್ರಲಿಕ್, ಫೈಬರ್ ಲೋಹದ ತಗಡು, ಸಿದ್ಧವಸ್ತುಗಳು, ಕಚ್ಚಸಾಮಗ್ರಿಗಳಲ್ಲದೆ, ಲೋಹದ ಪಾತ್ರೆಗಳು ಸಹಿತ ಮಾಧ್ಯಮದಂತೆ ಬಳಕೆಯಾಗುತ್ತಿದೆ. ಜಾನಪದ, ಸಾಂಪ್ರದಾಯಕ ಮತ್ತು ಆಧುನಿಕ ಕಲೆಯ ಸಮೀಕರಣದಂತಹ ಹೊಸ ಪ್ರಯೋಗಗಳು ನಡೆದಿವೆ-ನೆಡೆಯುತ್ತಿವೆ. ವೈವಿಧ್ಯಮಯ ವಿಚಾರಗಳು ಅಭಿವ್ಯಕ್ತಿಯಾಗಿ, ಹೊರನೋಟ ಮೂರ್ತವಲ್ಲದ ಆಕಾರಗಳು ವಾಸ್ತವಿಕೆಯ ಚಿತ್ರಣವನ್ನು, ಆಂತರಿಕ ಭಾವನೆಗಳನ್ನು ಬಿಂಬಿಸುವುದರಿಂದ ಕೂತೂಹಲ ಮೂಡಿಸುತ್ತವೆ.

ಆಧುನಿಕ ಶಿಲ್ಪಕಲಾಕೃತಿಗಳಿಗೆ ನಿರ್ದಿಷ್ಟವಾದ ಸ್ಥಳವನ್ನು (ವಿಷಯಕ್ಕೆ ಸ್ಪಂದಿಸುವ ಹೊರ ವಲಯದಲ್ಲಿ) ಆಯ್ಕೆ ಮಾಡಿಕೊಂಡು ಕೃತಿಯನ್ನು ಪ್ರತಿಷ್ಠಾಪಿಸುವುದು ಪ್ರಕ್ರಿಯೆಯಾಗಿದೆ. ಭಿತ್ತಿಶಿಲ್ಪ ಪ್ರಕೃತಿ ಶಿಲ್ಪಗಳು ಸುತ್ತಲಿನ ಪರಿಸರದ ಹೊಂದಾಣಿಕೆಯ ರೀತಿಯಲ್ಲಿ ಇಡಲಾಗುತ್ತದೆ. ಸುತ್ತಲಿನ ಪರಿಸರ ಮತ್ತು ಕಲಾಕೃತಿ ಹೊಂದಿರುತ್ತದೆ. ಕೆಲವು ಸಲ ನೋಡುಗ, ಪ್ರಕೃತಿ ಮತ್ತು ಕೃತಿಗಳು

ಒಟ್ಟಾಗಿ ದೃಶ್ಯ ಭಾಷೆಯನ್ನಾಗಿಸುವ ಹಲವಾರು ಪ್ರಯತ್ನ ನಡೆಯುತ್ತಿವೆ. ಸರಳವಾಗಿ ವಿವರಿಸುವುದಾದರೆ ರಚಿಸಿದ ಕೃತಿಯನ್ನು ಪಿ.ಓ.ಪಿ (ಪ್ಲಾಸ್ಟರ ಆಫ್ ಪ್ಯಾರೀಸ್) ಶಿಲೆ, ಮಿಶ್ರಲೋಹ, ಫೈಬರ್, ಟೇರಾಕೋಟ್ ಮಾಧ್ಯಮಗಳಲ್ಲಿ ರಚಿತವಾಗುತ್ತಿವೆ.

ಭಾರತೀಯ ಅನೇಕ ಕಲಾವಿದರು ಸಂಪ್ರದಾಯದಿಂದ ಆಧುನಿಕತೆಯೆಡೆಗೆ ಒಲವು ತೋರಿದವರಾಗಿದ್ದಾರೆ. ಜಾನಪದ, ಸಾಂಪ್ರದಾಯಕ ಶೈಲಿ ಪದ್ಧತಿಯನ್ನು ಶಿಲ್ಪಗಳಲ್ಲಿ ಅಳವಡಿಸಿಕೊಳ್ಳುವ ಮೂಲಕ ದೇಶಿಯತೆಯ ಸೊಗಡನ್ನು ಬಿಂಬಿಸುವಲ್ಲಿ ಯಶಸ್ವಿಯಾಗಿ ಸಹಕಾರಿಯಾಗಿವೆ. ಕೆ.ಜಿ. ಸುಬ್ರಮಣ್ಯಂ, ಸೋಮನಾಥ ಹೊರ್, ರಾಮಕಿಂಕರ್ ಬೈಜ್, ಬಾಲನ ನಂಬಿಯಾರ, ನಂದಗೋಪಾಲ, ರವಿಂದ್ರ ರಡ್ಡಿ, ಎಲ್.ಪಿ. ಆಂಚನ್.ಮೀರಾ ಮುಖರ್ಜಿಯವರ ಶಿಲ್ಪ ಕಲಾಕೃತಿಗಳಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತಿದೆ.

ದೇಶಿಯ ಸಾಂಪ್ರದಾಯಕ ಕೃತಿಗಳು ಮನೆತನ, ಅರಸರ ಆಜ್ಞೆ, ರಾಜಗುರುಗಳ ಆಶಯದಂತೆ ಧಾರ್ಮಿಕ, ಪೌರಾಣಿಕ ಹಾಗೂ ಆಡಳಿತದ ವೈಭವಿಕರಿಸುವಂತಹ ವಿಷಯಾಧಾರಿತ ಕೃತಿಗಳು ಹೆಚ್ಚಾಗಿ ರಚಿತಗೊಂಡಿವೆ. ದೇವಾಲಯ, ಅರಮನೆಯಂತಹ ಸ್ಥಳದಲ್ಲಿ ರಚಿತವಾದ ಕೃತಿಗಳಲ್ಲಿ ಎಲ್ಲಾ ವಿಷಯಗಳು ಬದುಕಿನ ಚಿತ್ರಣದಿಂದ ಕೂಡಿರುತ್ತವೆ. ಒಂದು ನೆಲೆಯಿಂದ ಇನ್ನೊಂದು ನೆಲೆಗೆ ಬೇರೆ ಬೇರೆ ಶೈಲಿ, ರಚನಾ ಪದ್ಧತಿ ಇರುತ್ತದೆ.

ಸಮಕಾಲೀನ ಶಿಲ್ಪ ಕಲಾಕೃತಿಗಳಲ್ಲಿ ಜೀವನ ವಿಡಂಬನೆ , ವೈಭವತೆ, ನೋವು–ನಲಿವು, ನಿಸರ್ಗ, ಪ್ರಾಣಿ–ಪಕ್ಷಿಗಳಲ್ಲದೇ ಧಾರ್ಮಿಕ ಹಿನ್ನಲೆಯುಳ್ಳ ಕೃತಿಗಳು ವಿಷಯವಾಗಿರುತ್ತದೆ. ಆಧುನಿಕ ಶಿಲ್ಪಕಾರ ತನ್ನ ಅಂತರಂಗ ಭಾವನೆ ಇಂತಹುದೇ ಶೈಲಿ, ಆಕಾವಿರುವುದಿಲ್ಲ.ಪಾಶ್ಚತ್ಯದ ಪ್ರಭಾವದ ಹಿನ್ನಲೆಯಲ್ಲಿ ಒಂದು ಪಂಥದ ಅನುಕರಣೆಯೊಂದಿಗೆ ದೇಶಿಯ ವಿಷಯಗಳು, ತಂತ್ರಗಾರಿಕೆಯಲ್ಲಿ ಭಾವನೆಗಳ–ನೋಟದ ದರ್ಶನವಾಗುತ್ತದೆ.

ಅಧ್ಯಾಯ-ಆರು

ಕರ್ನಾಟಕದ ಶಿಲ್ಪಕಲಾವಿದೆಯರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

ಕರ್ನಾಟಕದ ಶಿಲ್ಪಕಲೆ ಸ್ಥಳೀಯ ಗಡಿಗಳನ್ನು ಮೀರಿ ಭಾರತೀಯ ಶಿಲ್ಪಕಲೆಯ ಸಂಪ್ರದಾಯ ಸೊಗಸಿನ ಜೊತೆ ಜೊತೆಗೆ ಬೆಳೆದು-ಉಳಿದು ಹೊಸ ಆಯಾಮಗಳನ್ನು ಕಾಲಕಾಲಕ್ಕೆ ಪಡೆದುಕೊಳ್ಳುತ್ತ ಬಂದಿದೆ. ನಮ್ಮ ಶಿಲ್ಪ ನಮ್ಮ ಜನರ ಸಂಸ್ಕೃತಿಯ ಒಂದು ಮುಖವಾಗಿ ಅರಳಿದ ಸಂಪ್ರದಾಯ, ಅದು ಆಧುನಿಕ ಪಶ್ಚಿಮ ಹಾಗೂ ಯುರೋಪಿನ ಕಲಾವಿದರ ವೈಯಕ್ತಿಕ ದೃಶ್ಯಾತ್ಮಕ ಅಭಿವ್ಯಕ್ತಿಯಂತಲ್ಲ. ಆದರೆ 2007ರ ಸಮಕಾಲೀನ ಸಂದರ್ಭದ ನಮ್ಮ ಶಿಲ್ಪಗಳು ಮುಂದೆ ಹೋಗಿ ಹಿಂದಿನಿಂದಲೂ ಗಣನೀಯವಾಗಿರುವ, ಪಶ್ಚಿಮ ಹಾಗೂ ಯುರೋಪ ರಾಷ್ಟ್ರಗಳ ಶಿಲ್ಪಿಗಳ ಸ್ವಯಂ ವೈಭವದ ವೈಯಕ್ತಿಕ ಅಭಿವ್ಯಕ್ತಿಯ ದೃಷ್ಟಿಯೊಂದಿಗೆ ಸ್ಪರ್ಧಿಸುವಂತೆಯೇ ಏಕೆ, ತಮ್ಮದೆ ಆದ ಅನನ್ಯ ಗ್ರಹಿಕೆಗಳಿಂದ ಅಭಿವ್ಯಕ್ತಿಸಿದ್ದಾರೆ. ಈ ಹಿಂದೆ ಪಶ್ಚಿಮದ ಕಲಾ ಇತಿಹಾಸಕಾರರೊಬ್ಬರು ರೋಡಿನ್ ಶಿಲ್ಪವೊಂದರ ಪಕ್ಕದಲ್ಲಿ ಭಾರತೀಯ ಶಿಲ್ಪವೊಂದನ್ನು ಇಟ್ಟರೆ ಹೇಗಿರುತ್ತದೆ? ಎಂದು ವಿಮರ್ಶಿಸಿದ್ದು ನಮ್ಮ ಸಮಕಾಲೀನ ಸಂದರ್ಭದ ಶಿಲ್ಪಗಳನ್ನು ನೋಡಿಲ್ಲದ ಸಂದರ್ಭದಲ್ಲಿ 'ಅವರವರ ಭಾವಕ್ಕೆ, ಅವರವರ ಭಕುತಿಗೆ' ತಕ್ಕಂತೆಯೇ ಇದೆ. ಪ್ಯಾರಿಸ್‌ನಲ್ಲಿ ನೆಲೆಸಿರುವ ಭಾರತೀಯ ಅನೀಶ್ ಕಪೂರ್ ನಮ್ಮ ಬೇರುಗಳ ಸತ್ವ ಹೊಂದಿದ ತಮ್ಮ ಶಿಲ್ಪಗಳ ವಿಶಿಷ್ಟ ಅಭಿವ್ಯಕ್ತಿಯಿಂದ ಇಂಥವರಿಗೆಲ್ಲ ಅಲ್ಲಿಯೇ ಉತ್ತರಿಸುತ್ತಿರುವಂತೆ

ಕಾಣುತ್ತಿದ್ದಾರೆ. ನಮ್ಮ ಶಿಲ್ಪಕಲೆಯ 'ಸಂಪ್ರದಾಯ' ಎಂದರೆ ನಮ್ಮ ಇಂದಿನ ಸಮಕಾಲೀನ ದೃಶ್ಯಕಲೆಗೆ ಬೇರುಗಳು ಇದ್ದಂತೆ, ಸಮಕಾಲೀನ ಶಿಲ್ಪಕಲೆಯ ಪ್ರಕಾರದ ಕಾಂಡ-ಚಿಗುರು, ಹೂ ಹಣ್ಣುಗಳೆಲ್ಲಾ 'ಬೇರುಗಳ' ಸತ್ವದಿಂದಲೇ ಮೂಡಿ ಬಂದಿರುವುದು ಸಹಜವೇ ಆಗಿದೆ.

ನಮ್ಮ ರಾಜ್ಯದಲ್ಲಿ ಇಡೀ ರಾಷ್ಟ್ರವೇ ಅಚ್ಚರಿ ಪಡುವಂತಹ 8-10 ಅಡಿಗಳ ಎತ್ತರದ ಇತಿಹಾಸ ಪೂರ್ವ ಮಾನವ ರೂಪಗಳ ಶಿಲ್ಪಗಳಿವೆ. ರಾಯಚೂರು ಜಿಲ್ಲೆಯ ಕುಮತಿಯ ಗ್ರಾನೈಟ್ ಶಿಲ್ಪಗಳು ಪೂರ್ಣ ಪ್ರಮಾಣದ ಆದರೆ ಚಪ್ಪಟೆ ಕಲ್ಲಿನ ನಿರ್ವಹಣೆ ಹೊಂದಿದೆ. ನೋಡುಗರಿಗೆ ಇತಿಹಾಸ ಪೂರ್ವಕಾಲದ ಈ ಶಿಲ್ಪಗಳು ಹತ್ತಿರದಿಂದ ಹಲವು ಕೋನಗಳಲ್ಲಿ ಹೆನ್ರಿಮೂರನ್ 'ಸರಳ ಸೌಂದರ್ಯ'ದ ಶಿಲ್ಪಗಳನ್ನು ನೆನಪಿಸಿಬಲ್ಲವು. 'ಆದಿಮ ಸತ್ವ'ದ ಪರಕಾಷ್ಠೆ ಈ ಶಿಲ್ಪಗಳು, ಈ ಹೆಗ್ಗಳಿಕೆಯ ನಮ್ಮ ಶಿಲ್ಪಕಲಾ ಇತಿಹಾಸ ಅರ್ಥಪೂರ್ಣವೇ ಸರಿ. ನಂತರದ ಚಾಲುಕ್ಯ, ಹೊಯ್ಸಳ, ವಿಜಯನಗರದ ಶಿಲ್ಪಕಲೆಯ ಪರಂಪರೆಯು ಇದೆ. ಇವೆಲ್ಲವುಗಳ ನಡುವೆ ಜಾನಪದ ಶಿಲ್ಪ ಸಂಪತ್ತು ಅಸಾಮಾನ್ಯ ರೀತಿಯ ಪ್ರಭಾವವನ್ನು ಬೀರಿದೆ. ನಮ್ಮ ರಾಜ್ಯದ ಹಲವು ಪ್ರದೇಶಗಳ ಪ್ರತಿ ಹಳ್ಳಿಯೂ ತಾನೇ ಒಂದು ಪರಿಪೂರ್ಣ ಮ್ಯೂಸಿಯಂನಂತೆ ಕಾಲದ ಹೊಡೆತಕ್ಕೆ ಮೀರಿ ನಿಂತಿವೆ. ಗುಲಬರ್ಗಾ ಸುತ್ತಮುತ್ತಲ ಹಲವು ಹಳ್ಳಿಗಳು ಈ ಮಾಹಿತಿಗೆ ನಿದರ್ಶನವಾಗಿವೆ. ಅಲ್ಲಿನ ಹಾಗೂ ಹಲವು ಜಿಲ್ಲೆಗಳಲ್ಲಿನ ಸ್ಥಳೀಯ ಸೊಗಡಿನ ವಾಸ್ತುಶಿಲ್ಪ, ಗೃಹ ಅಲಂಕಾರ, ಶಿಲ್ಪ ಸಂಸ್ಕೃತಿ ಬೆರಗು ಮೂಡಿಸುವಂತಿವೆ. ದಕ್ಷಿಣ ಕನ್ನಡದ ಮೆಕ್ಕೆಕಟ್ಟು, ಗಡಿಮಾರಿ ಶಿಲ್ಪಗಳು, ಗುಲಬರ್ಗಾ, ಬೆಳಗಾಂ ಸುತ್ತಮುತ್ತಲ ಹಲವು ರೀತಿಯ ಸಂಪ್ರದಾಯ ಶಿಲ್ಪಿಗಳು ರಾಯಚೂರಿನ ಕಿನ್ನಾಳದ ಗೊಂಬೆಗಳು, ಮೈಸೂರಿನ ಚನ್ನಪಟ್ಟಣದ ವಿಶಿಷ್ಟ ಗೊಂಬೆಗಳು ಇಂದು ಜಾಗತೀಕರಣದ ಹಿನ್ನೆಲೆಯಲ್ಲಿ ಸ್ಥಳೀಯ ಕಲೆಗಳು ಅಚ್ಚರಿಯ ಕಾರಣಗಳಿಗಾಗಿ ಬಹುದೊಡ್ಡ ರೀತಿಯಲ್ಲಿ ದೇಶ ವಿದೇಶಗಳಲ್ಲಿ ಹೆಸರಾಗಿವೆ. ಜಾನಪದ ಶಿಲ್ಪಕಲೆಗೆ ಸಮಾಜ ಸರ್ಕಾರಗಳೂ ಹೆಚ್ಚಿನ ಗಮನ ನೀಡುತ್ತಿರುವಂತೆ ಕಾಣುತ್ತಿದೆ. ಈ ಎಲ್ಲವುಗಳ ಕಾರಣದ ಹಿನ್ನೆಲೆಯಲ್ಲಿ ಇಂಥ ಪ್ರಕಾರದ ಶಿಲ್ಪಗಳ ಪ್ರದರ್ಶನ ಮಾರಾಟಗಳು ಹೆಚ್ಚಿವೆ. ಶಿಲ್ಪಗಳಿಗೂ ಮನ್ನಣೆ ಸಿಗುತ್ತಿರುವುದು ಗಣನೀಯ.

1992-93ರ ನಡುವೆ ಹಾಗೂ 2011ರಲ್ಲಿ ಗುಲಬರ್ಗಾದಲ್ಲಿ ನಡೆದ ಅಂತರಾಷ್ಟ್ರೀಯ ಶಿಲ್ಪಿಗಳ ಸಿಂಪೋಸಿಯಂನಲ್ಲಿ ಕನಕಾಮೂರ್ತಿಯವರು ಪಾಲ್ಗೊಂಡಿದ್ದರು. ಮೊದಲನೆಯದು ಉಪ್ಪಿನ್‌ರವರ ತೋಟದ ಮನೆಯಲ್ಲಿ ನಡೆದರೆ ಎರಡನೆಯದು ದಿ ಐಡಿಯಲ್ ಫೈನ್ ಆರ್ಟ್ಸ್‌ನ ಖ್ಯಾತ ವಾಸ್ತುಶಿಲ್ಪಿ ಕಾನಡೆಯವರು ವಿನ್ಯಾಸ ಮಾಡಿದ್ದ ಕಟ್ಟಡದಲ್ಲಿ ನಡೆಯಿತು. ಸಹಜವಾಗಿಯೇ ದೇಶ ವಿದೇಶಗಳ ಶಿಲ್ಪಿಗಳು ಪಾಲ್ಗೊಂಡು ಶಿಲ್ಪ ಸೃಷ್ಟಿಗಳಲ್ಲಿ ತಲ್ಲೀನರಾಗಿದ್ದರು. ನಮ್ಮ ಬಗ್ಗೆ ಸಾಕಷ್ಟು ಗೊತ್ತಿಲ್ಲದ ಹಲವು ಪೂರ್ವಾಗ್ರಹಗಳ ಬಿಂಬಗಳಂತಹ ಆ ಶಿಲ್ಪಿಗಳು ನಮ್ಮ ರಾಜ್ಯದ ಸಾಂಸ್ಕೃತಿಕ ಶ್ರೀಮಂತಿಕೆಗೆ ಬೆರಗುಗೊಂಡತ್ತಿತ್ತು. ಮಿಶ್ರಮಾಧ್ಯಮಗಳಲ್ಲಿ ಬಹುತೇಕ ಶಿಲೆಗಳೇ ಅಲ್ಲದೆ ಸಿಮೆಂಟ್ ಮಾಧ್ಯಮದಲ್ಲಿ ತಮ್ಮ ಅಭಿವ್ಯಕ್ತಿಗಳಿಗೆ ರೂಪ ನೀಡಿದರು. ಅವರೊಂದಿಗೆ ನಮ್ಮ ದೇಶದ ಹಲವರೊಂದಿಗೆ ರಾಜ್ಯದ ಕೆಲವರು ಪಾಲ್ಗೊಂಡರು ವಿದೇಶಿ ಶಿಲ್ಪಿಗಳ ನಡುವೆ ನಮ್ಮವರು ತಮ್ಮದೇ ಆದ ರೀತಿಯಲ್ಲಿ ಅಭಿವ್ಯಕ್ತಿಸಿದ್ದು ಗಣನೀಯ ಸಂಪ್ರದಾಯ ಸಮಕಾಲೀನತೆಗಳ ಸಂಗಮದಂತಹ ಸಿಂಪೋಸಿಯಂ ಅದು. ಅವರೊಂದಿಗೆ ಮಾತುಕತೆಯ ಸಂದರ್ಭವೊಂದರಲ್ಲಿ ನನ್ನೊಂದಿಗೆ ಅಮೇರಿಕೆಯ ಶಿಲ್ಪಿಯೊಬ್ಬರು ನಿಮಗೆ ಸಾವಿರಾರು ವರ್ಷಗಳ ಇತಿಹಾಸದ ಸಂಕೋಲೆ ಇದೆ; ಅದು ನಿಮ್ಮನ್ನು ಮುಂದೆ ಹೋಗಲು ಬಿಡದೇ ಹಿಂದಕ್ಕೆ ಜಗುತ್ತಿದೆ. ನಮಗೆ ಅಂತಹ ಸಂಕೋಲೆಗಳಾವುವು ಇಲ್ಲ' ಎಂಬ ಅಭಿಪ್ರಾಯ ವ್ಯಕ್ತಿಪಡಿಸಿದರು. ನಮ್ಮ ಸಂಸ್ಕೃತಿಯ ಸುದೀರ್ಘ ಇತಿಹಾಸಕ್ಕೆ ಅವರು ಬೆಚ್ಚಿದರು. ನಮ್ಮ ಅಜಂತ, ಎಲ್ಲೋರಾ, ಬಾದಾಮಿಗಳೇ ಅಲ್ಲದೆ ಹತ್ತಿರದ ಹಂಪೆಯ ಭಿತ್ತಿಚಿತ್ರ ಪರಂಪರೆಯ ಬಗ್ಗೆ ಅವರಿಗೆ ಗೊತ್ತೇ ಇರಲಿಲ್ಲ. ನಮ್ಮ ಪರಂಪರೆಯ ಚಿತ್ರ –ಶಿಲ್ಪ ಸಂಪ್ರದಾಯ ಬಹಳ ಶಕ್ತಿಯುತವಾಗಿರುವುದರಿಂದಲೇ ನಮ್ಮ ಶಿಲ್ಪಕಲೆ ತನ್ನ ಆಯಾಮಗಳನ್ನು ಹಲವು ರೀತಿಗಳಲ್ಲಿ ವಿಸ್ತರಿಸಿಕೊಳ್ಳುವುದು ಸಾಧ್ಯವಾಗಿದೆ.

ಸಂಪ್ರದಾಯದ ಬೇರುಗಳನ್ನು ಬಳಸಿಕೊಂಡು ಸಮಕಾಲೀನ ಜೀವದ್ಧನಿಗೆ ಪೂರಕವಾಗಿ ಹೊಸ ಹೊಸ ಸೃಷ್ಟಿಗಳು, ಹೊಸ ಹೊಸ ಶೈಲಿಗಳು ಕಾಲಕಾಲಕ್ಕೆ ಕಾಣಿಸಿಕೊಳ್ಳುತ್ತಲೇ ಇರುತ್ತವೆ. ಅದು ಸಹಜ. ಒಬ್ಬ ಶಿಲ್ಪಿಯು ತನ್ನ ಸಂದರ್ಭದ ವಿಶಿಷ್ಟ ಜೀವದ್ಧನಿ, ಧೋರಣೆ, ಸವಾಲುಗಳಿಗೆ

ತನ್ನನ್ನು ಅರ್ಪಿಸಿಕೊಂಡು ಅವುಗಳನ್ನು ಅರಗಿಸಿಕೊಂಡು ಅಭಿವ್ಯಕ್ತಿಸುತ್ತಾಳೆ. ಇಂತಹ ಶಿಲ್ಪ ಅಭಿವ್ಯಕ್ತಿಗಳಲ್ಲಿ ಅವರ ಆ ಸಂದರ್ಭ ಕುರಿತ ಪ್ರತಿಕ್ರಿಯಾತ್ಮಕ ಅಥವಾ ಒಂದು ನಿರ್ದಿಷ್ಟ ನಿಲುವು ಘನೀಭವಿಸಿರುತ್ತದೆ. ಹಾಗಾಗಿಯೇ ದೃಶ್ಯಕಲೆಯಲ್ಲಿ ಹಲವು ಪಲ್ಲಟಗಳು ಘಟಿಸುವಿಕೆ. ಅಭಿವ್ಯಕ್ತಿಯಲ್ಲಿ ಸಮಕಾಲೀನತೆಯ ಪ್ರಸ್ತುತತೆ ಅಗತ್ಯವಾಗಿ ಇರಲೇಬೇಕಾದ ಒಂದು ಮೌಲ್ಯ. ಪಿಕಾಸೋ ಹೇಳಿರುವ 'There is no past or future in art, if a work of art cannot always live in the present it must not be considered at all' ಮಾತುಗಳಲ್ಲಿ ಈ ಮಹತ್ವದ ಅಂಶ ಹೇಗೆ ಹಾಸುಹೊಕ್ಕಿದೆ ನೋಡಿ.

ಇಂದಿನ ಕರ್ನಾಟಕದ ಸಮಕಾಲೀನ ಶಿಲ್ಪಕಲೆಯ ಇತಿಹಾಸ ಎಂದರೆ ಪಶ್ಚಿಮದ ಪ್ರಭಾವದ ಅಡಿ ನಮ್ಮತನವನ್ನು ಕಂಡುಕೊಂಡ ಇತಿಹಾಸ. ಇಂಥ ಸಮಕಾಲೀನ ಸಿಲ್ಪದಲ್ಲಿ ಕುಶಲತೆ, ಹೊರ ಅಲಂಕಾರಗಳಿಗಿಂತಲು ಆಂತರಿಕ ಭಾವಕ್ಕೆ ಪ್ರಾಮುಖ್ಯತೆ; ಹೊರ ರೂಪು ಅತ್ಯಂತ ಸರಳ, ಸಂಕ್ಷಿಪ್ತ, ಯಾವುದೇ ವ್ಯಕ್ತಿ ಮತ್ತು ಸಂದರ್ಭದ ಅಥವಾ ವಸ್ತುವಿನ ಗುಣಗಳಿಗೆ ಕಲವಿದನ ಪ್ರತಿಕ್ರಿಯಾ ರೂಪದ ಅಭಿವ್ಯಕ್ತಿಯಾಗಿ ಇಂದಿನ ಶಿಲ್ಪ ಮೂಡಿಬರುತ್ತದೆ. ಈ ಬೆಳವಣಿಗೆಯ ಹಿಂದೆ ಪಿಕಾಸೋ, ಹೆನ್ರಿಮೂರ್, ಜಿಯಾಕೊಮೆಟ್ಟಿ, ಅರ್ಮಿಟೇಜ್‌ರಂಥವರಿದ್ದಾರೆ. ಇಂದಿನ ಶಿಲ್ಪ ಹಿಂದಿನಂತೆ ಕೇವಲ ಮಣ್ಣು, ಮರ, ಶಿಲೆ ಅಥವಾ ಲೋಹಗಳಿಂದ ಮಾತ್ರ ಆಗುವುದಿಲ್ಲ. ಇವೆಲ್ಲವುಗಳೊಂದಿಗೆ ಫೈಬರ್‌ಗಾಜು, ಸಿಮೆಂಟ್ ಕಾಂಕ್ರಿಟ್, ಕಾಗದ, ಬೂದಿ, ಇದ್ದಿಲು, ಮರಳು, ಉಪ್ಪು, ಪ್ಲಾಸ್ಟಿಕ್, ಸುತ್ತಲಿನ ಕಸ, ಚಿಂದಿ, ಏನಾದರೂ ಆಗಬಹುದು. ಅದರ ಅಗತ್ಯ ಶಿಲ್ಪಿಗೆ ಕಾಣಬೇಕಷ್ಟೇ.[೨]

೧೯೫೦ರ ಹೊತ್ತಿಗೆ ಪಶ್ಚಿಮ ರಾಷ್ಟ್ರಗಳ ಸಾಂಸ್ಕೃತಿಕ ಪ್ರಭಾವ ಚಿತ್ರ, ಶಿಲ್ಪ, ಪ್ರಿಂಟ್ ಮಾಧ್ಯಮಗಳಿಗೆ ಸಂಬಂಧಿಸಿದಂತೆ ಅಂತಾರಾಷ್ಟ್ರೀಕರಣಗೊಂಡಿತು. ಅಲ್ಲಿಯವರು ಪೂರ್ವವನ್ನು ಹಲವು ವಿಷಯಗಳಲ್ಲಿ ಅವಲಂಬಿಸಿರುವಂತೆ ಇಲ್ಲಿಯವರು ಏಕೆ ಪಶ್ಚಿಮದ ಚಿಂತನೆರೂಪ, ನಿರ್ವಹಣೆ ಇತ್ಯಾದಿಗಳನ್ನು ದುಡಿಸಿಕೊಳ್ಳಬಾರದು ಎಂಬ ಧೋರಣೆಯ ಕಲಾವಿದರು

...ರ ಕಲೆಗಳು – ಡಾ. ಕೆ.ವಿ.ಸುಬ್ರಹ್ಮಣ್ಯಂ. ಕ-ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. ಪು.ಸಂ. ೨೬೯

ಪೆಟ್ಟಿಕೊಂಡ ಸಂದರ್ಭವಿದು. ಪಶ್ಚಿಮ–ಪೂರ್ವ, ಪ್ರಭಾವ ಇತ್ಯಾದಿಗಳನ್ನು ಹೇಳುವ, ಅಗತ್ಯವಿಲ್ಲವೆಂದೂ ವಿಶ್ವದ ಕಲೆ ಎಲ್ಲವೂ ಒಂದೇ, ವಿಶ್ವಾತ್ಮಕ ಎಂದು ಪರಿಗಣಿಸಬೇಕೆಂಬ ದೃಷ್ಟಿ ಇವರದು. ಪುಷ್ಪಮಾಲಾ, ಲಲಿತಾಶಂಕರ್‌ರವರುಗಳನ್ನು ಈ ದೃಷ್ಟಿಯಿಂದ ಹೆಸರಿಸಬಹುದು. ಈ ದೃಷ್ಟಿಯ ಬಹುತೇಕರಿಗೆ ವಿಶ್ವದ ಕಲಾಕೇಂದ್ರ ಕಲಾವಿದರೊಂದಿಗೆಯಿರುವ ಸಂಪರ್ಕಗಳೂ ಗಮನಾರ್ಹ. ೧೯೮೫ರ ಹಿಂದಿನವರು ಪಶ್ಚಿಮದ ಶಿಲ್ಪಗಳ ರೂಪಗಳನ್ನು ತಮ್ಮ ಅಭಿವ್ಯಕ್ತಿಗಳಿಗೆ ಬಳಸಿಕೊಂಡರೆ ೧೯೯೫ರ ನಂತರದವರು ಇಡೀ ವಿಶ್ವದ ಕಲೆ ಒಂದೇ ಎಂಬ ದೃಷ್ಟಿಯಿಂದ ಪಶ್ಚಿಮದ ಕಲೆಯ ರೂಪಗಳನ್ನು ಧಾರಾಳವಾಗಿ ದುಡಿಸಿಕೊಳ್ಳತೊಡಗಿದಂತೆ ಕಾಣತೊಡಗಿದ್ದರ ಹಿಂದೆ 'ಆರ್ಥಿಕ ಲಿಬರಲೈಝೇಶನ್' ಕಾರಣದಿಂದ ಉಂಟಾಗಿರುವ 'ಅಲ್ಲಿ–ಇಲ್ಲಿ' ಎಂಬ ವ್ಯತ್ಯಾಸ ಕಾಣದಂತಾಗಿರುವ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ರಾಜಕಾರಣದ ಅಂಶಗಳು ಕೆಲಸಮಾಡಿರಬೇಕು. ಆದರೆ ಹೊರನೋಟಕ್ಕೆ ಹಾಗೆ ಒಂದೇ ಎಂಬಂತೆ ಎಲ್ಲ ರಾಷ್ಟ್ರಗಳ ಜನರ ಹೊರರೂಪ, ಉಡುಪು, ಭಾಷೆ, ಬ್ರಾಂಡ್ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಕಾಣಿಸಿದರೂ ವಿವಿಧ ದೇಶ, ಮಣ್ಣುಗಳ ಜನಾಂಗೀಯ ವ್ಯತ್ಯಾಸ, ಆಳದ ಸಾಂಸ್ಕೃತಿಕ ನಮ್ಮ ನೆಲ, ಜನರ ವಾಸನೆಯ ಹೊಳಹುಗಳು ಇದ್ದೆ ಇರುತ್ತದೆ.

"ಪುಷ್ಪಮಾಲಾರ ಅಭಿವ್ಯಕ್ತಿ ಪಶ್ಚಿಮದ ಪ್ರಭಾವದ ಅಲೆಗೆ ಸಿಲುಕಿ ನಮ್ಮ ನೆಲದ ವಾಸನೆಯನ್ನು ಮೈಗೂಡಿಸಿಕೊಂಡ ಕೆ.ಜಿ.ಸುಬ್ರಮಣಿಯನ್ ಬೂಪೇನ್ ಖಖ್ಖರ್‌ರವರುಗಳ ಪ್ರಭಾವಗಳನ್ನು ಅರಗಿಸಿಕೊಂಡು ತನ್ನದೇ ಆದ ಗುರುತನ್ನು ಛಾಪಿಸಿರುವ ರೀತಿ ಗಮನಾರ್ಹ. ಕೃಷ್ಣಕುಮಾರ್, ರವೀಂದ್ರ ರೆಡ್ಡಿ, ಅಲೆಕ್ಸ್ ಮ್ಯಾಥ್ಯೂ, ತೃಪ್ತಿ ಪಟೇಲ್‌ರವರುಗಳ ನಡುವೆ ಅರಳಿದ ಪುಷ್ಪಮಾಲಾ, ಟೆರಾಕೋಟಾ ಮಾಧ್ಯಮದ ಅವರ Pig girl with shell, the voyage, the last game, container, ೧೯೯೫ರಲ್ಲಿ ಸಹಮತ್ ಸಾದರ ಪಡಿಸಿದ Post cards for Gandhi ಪ್ರದರ್ಶನದಲ್ಲಿ ಅವರ ಅಭಿವ್ಯಕ್ತಿ ೧೯೯೭ರ Body as container, ಇತ್ಯಾದಿಗಳು ನಮ್ಮ ಸಮಕಾಲೀನ ಬುದಕಿನ ವಿರುದ್ಧ ಧ್ವನಿಯಂತೆ ಮೂಡಿಬಂದಿವೆ. ಸಶಕ್ತವಾಗಿವೆ. ಸುಮಿತ್ರಕುಮಾರ್ ಶ್ರೀನಿವಾಸನ್‌ರ ಮಾತುಗಳಲ್ಲಿ 'ಸಾಂಪ್ರದಾಯಿಕ ಕ್ಲೀಷೆಗಳ ವಿರುದ್ಧ ಭುಗಿಲೆದ್ದ

ಸಿಟ್ಟು' ಇವರ ಅಭಿವ್ಯಕ್ತಿ. ಪುಷ್ಪಮಾಲರ ಶಿಲ್ಪಗಳು ಹೊರನೋಟಕ್ಕೆ ತೋರುವ ಉದಾಸೀನತೆ ಮತ್ತು ಆಕರ್ಷಕವಾದ ವ್ಯಂಗ್ಯದ ನಡುವೆಯೆ ಈ ಅನುಭವ ತರುವುದು ಅಸಾಮಾನ್ಯ.

ಲಲಿತಾ ಶಂಕರ್ ಮತ್ತು ಅರ್ಚನಾ ಹೆಬ್ಬಾರ್‌ರವರುಗಳ ಸೃಷ್ಟಿಗಳು ಪಶ್ಚಿಮದ ಪ್ರಭಾವಗಳನ್ನು ಅರಗಿಸಿಕೊಂಡು ಪೂರ್ವದ ಸತ್ವಗಳನ್ನು ತುಂಬಿಕೊಂಡ ಅಭಿವ್ಯಕ್ತಿ ರೂಪಗಳು. ಇಲ್ಲಿ ಲಲಿತಾಶಂಕರ್ ತಮ್ಮ ಸಂಸ್ಕೃತಿಯನ್ನು ಅರ್ಚನಾ ಹೆಬ್ಬಾರ್ ಜಪಾನೀಯ ಸಂಸ್ಕೃತಿಯನ್ನು ವಿಶಿಷ್ಟವಾಗಿ ತಂದುಕೊಂಡಿದ್ದಾರೆ. ಶಿಲ್ಪ ಹಾಗೂ ಇನ್ಸ್ಟಾಲೇಷನ್‌ಗಳೆರಡನ್ನೂ ಸಮರ್ಥವಾಗಿ ದುಡಿಸಿಕೊಂಡ ಅಭಿವ್ಯಕ್ತಿ ಈ ಇಬ್ಬರದು. ಲಲಿತಾಶಂಕರ್‌ರ ಭಾರತೀಯ ಅನುಭವದ 'ಪ್ರಾಣ' ಶಿಲ್ಪಮಾಲೆ ಇಲ್ಲಿ ಗಮನಾರ್ಹ. ಹಾಗೆಯೇ ಅವರ 'ಸಪ್ತಪದಿ' ಸಹ. ಕ್ರಿಸ್ಟೋರವರ 'Package' ೧೯೬೨ ಮತ್ತು 'Wrapped dressmaker's dummy on a roff rack ' ೧೯೬೨ ರೂಪಗಳಿಗೆ ಹೋಲಿಸಬಹುದಾಗಿದೆ. ಅರ್ಚನಾ ಹೆಬ್ಬಾರರು 'Pop, Earth art, Neo-expressionist' ದೃಷ್ಟಿಗಳನ್ನು ಜಪಾನಿನ ಸಂಸ್ಕೃತಿಯ ಕಸಿ ಮಾಡಿರುವ ರೀತಿ ಸುಂದರ, ಇನ್‌ಸ್ಟಾಲೇಷನ್ ಪ್ರಕಾರಕ್ಕೆ ಹತ್ತಿರವಾಗಿರುವ ಈ ಅಭಿವ್ಯಕ್ತಿಗಳಲ್ಲಿ 'Tatami Tents and Torri' ಉಲ್ಲೇಖಿಸಬಹುದು. ಸ್ತ್ರೀಸಂವೇದನೆಗೆ ಪೂರಕವಾಗಿ ಜಪಾನಿನ ಕರಕುಶಲ ಕಲೆಇಲ್ಲಿ ಸಮಕಾಲೀನ ಕಲೆಯಾಗಿದೆ.

ಯಾವುದೇ ಕಾಲಕ್ಕೆ ನಿಲುಕದ ರೀತಿಯಲ್ಲೂ ವೀಕ್ಷಕನು ಶಿಲ್ಪಕೃತಿಯ ಮುಂದೆ ಹಿಂದೆ ನಡೆದಾಡುತ್ತ ಚಿತ್ರಕೃತಿಯ ಮುಂದೆ ನಿಂತು ಅನುಭವಿಸುತ್ತ ಅಂದಿನ ಸಂದರ್ಭದ ವರ್ಣನಾತೀತ ಯಾವುದೋ ಜೀವಧ್ವನಿಯ ಆಲಾಪನೆಯನ್ನು ಕೇಳುವ ಸ್ಥಿತಿ ಹಾಗೆಯೇ ಪಿಕಾಸೋನೇ ಹೇಳಿರುವ " ಬದಲಾಗುವ ಶೈಲಿಗಳ ಅಭಿವ್ಯಕ್ತಿ ದೃಶ್ಯಕಲೆಯದು; ನಿಂತ ನೀರಿನ ಸ್ಥಿತಿ ಅಲ್ಲ. ಸದಾ ಬದಲಾಗುವ ದೃಶ್ಯಧ್ಯಾನದ ಗತಿ ಅದು. ಆಗ ಮೂಡಿಬರುವ ಹೊಸ ಸಂವೇದನೆಯ ಗ್ರಹಿಕೆಗಳ ಅಭಿವ್ಯಕ್ತಿಗೆ ಆ ನಿರ್ದಿಷ್ಟ ಕಾಲವೂ ಹೇಗೆ ಪೋಷಕ ಪಾತ್ರ ವಹಿಸುತ್ತದೆಂದರೆ, ಕಾರಣವಾಗುತ್ತದೆಂದರೆ ತನ್ನ ಕಾಲದ ಧ್ವನಿಗೆ ಹೊಂದುವ, ತನ್ನ ಕಾಲದ ಶೈಲಿಗೆ ಹೊಂದುವ ಹೊಸ ಮಾಧ್ಯಮವನ್ನು ಹೊಂದಿಸಿಕೊಡುತ್ತದೆ; ಸಾಮಗ್ರಿಗಳನ್ನು ರೂಪಿಸಿಕೊಡುತ್ತದೆ.

ಹಾಗಾಗಿಯೇ ಇತಿಹಾಸ ಪೂರ್ವಕಾಲದ ಪ್ರಾಣಿಗಳ ರಕ್ತ, ಕೊಬ್ಬು, ಮಣ್ಣಿನ ಬಣ್ಣಗಳಿಂದ ಪ್ರಾರಂಭವಾಗಿದ್ದು ಮೊದಲ ದೃಶ್ಯಕಲೆಯ ಪುಟಗಳು 2007ರಸಂದರ್ಭದಲ್ಲಿ ಅಂದರೆ ಹಲವು ಸಾವಿರ ವರ್ಷಗಳ ನಂತರ ಅಕ್ರಿಲಿಕ್, ಫೈಬರ್‌ಗಾಜು, ಮಲ್ಟಿಮೀಡಿಯಾ, ಶಬ್ದ, ಬೆಳಕು, ಇತ್ಯಾದಿಗಳೆಲ್ಲಾ ನಮ್ಮ ಶಿಲ್ಪಿಗಳ ಅಭಿವ್ಯಕ್ತಿಗೆ ಪೂರಕವಾಗಿರುವುದು ಕಾಲದ ವಿಶಿಷ್ಟ ಸಾಮರ್ಥ್ಯದಿಂದಲೇ, ಯಾವುದೋ ಒಂದು ಶೈಲಿ, ಮಾಧ್ಯಮ, ಪರಂಪರೆ ಇತ್ಯಾದಿಗಳು ಸಶಕ್ತವಾಗಿದ್ದರೆ, ಸಮಾಜಕ್ಕೆ ಅಗತ್ಯವೆನ್ನಿಸಿದರೆ ಅವು ಉಳಿದು ಬೆಳೆದೇ ಬೆಳೆಯುತ್ತವೆಯಲ್ಲದೆ. ಈ ಮೊದಲೇ ಸೂಚಿಸಿರುವಂತೆ, ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತವೆ, ಇಲ್ಲದಿದ್ದಲ್ಲಿ ಅವು ಉಳಿಯದೆ ನಶಿಸಿ ಹೋಗುತ್ತವೆ; ಇಲ್ಲವೆ ಮ್ಯೂಸಿಯಂನ ಸಂಗ್ರಹದಲ್ಲಿ ಉಳಿದುಕೊಳ್ಳುತ್ತವೆ ಅಷ್ಟೇ. ದೃಶ್ಯಕಲೆಯ ಒಂದು ಅಂಗವಾದ ಶಿಲ್ಪಕೃತಿಗಳು ಒಬ್ಬ ಶಿಲ್ಪಿಯಿಂದ ಮೂಡಿಬಂದಾಗ ಬಹುತೇಕ ಸಂದರ್ಭದಲ್ಲಿ ಅವು ವೈಯಕ್ತಿಕ ಅಭಿವ್ಯಕ್ತಿಗಳು ಆಗಿರುತ್ತವೆ. ಹೊಸ ಶೈಲಿಗಳನ್ನು ಅನ್ವೇಷಿಸಿಕೊಂಡಿರುತ್ತವೆ. ಹಾಗಾಗಿ ಸಂಪ್ರದಾಯ 'ಮೂಲಬೇರು' ಇದ್ದಂತೆ ಅದು ಹಲವು ಸಂದರ್ಭಗಳಲ್ಲಿ ಹೊಸ ಹೊಸ ನೋಟ–ಆಟ–ಮಾಟಗಳಿಗೆ ದೃಷ್ಟಿ, ಧೋರಣೆಗಳಿಗೆ ಕಾರಣವಾಗುತ್ತವೆ. ಹಾಗಾಗಿಯೇ ಪ್ರತಿಯೊಂದು ಸೃಷ್ಟಿಯೂ ಅದು ಶಿಲ್ಪವಿರಲಿ, ಚಿತ್ರವಿರಲಿ, ಪ್ರಿಂಟ್, ಛಾಯಾಚಿತ್ರವಿರಲಿ, ಇನ್‌ಸ್ಟಾಲೇಷನ್ ಇರಲಿ ಇವೆಲ್ಲಾ ತಾವು ಸೃಷ್ಟಿಗೊಂಡ ಕಾಲ/ಸಂದರ್ಭಕ್ಕೆ ಹೊಚ್ಚ ಹೊಸದೇ ಆಗಿರುತ್ತವೆ. ಈ 'ಹೊಸಹುಟ್ಟು' 'ಹೊಸತನ' 'ನಾವೀನ್ಯ' ಯಾರೋ ಒಬ್ಬರಿಂದ ಯಾವುದೋ ಒಂದು ಸಂದರ್ಭ ಸ್ಥಳದಲ್ಲಿ ದಿಢೀರನೆ ಹುಟ್ಟಿಬಿಡುವುದಿಲ್ಲ. ಪಶ್ಚಿಮ ಹಾಗೂ ಯುರೋಪಿನಲ್ಲಿ ಆಧುನಿಕತೆ ಅಥವಾ ಹೊಸತೆಂಬುದೂ ಅಷ್ಟೇ. ಒಂದೇ ಸಲ ಹುಟ್ಟಿ ಬರಲಿಲ್ಲ. 1890ರ 'ಪೋಸ್ಟ್ ಇಂಪ್ರೆಷನಿಸಂ'ನಿಂದ ಪ್ರಾರಂಭಗೊಂಡ 'ಮಾಡರ್ನ ಆರ್ಟ್' 'ಕ್ಯೂಬಿಸಂ' ನಲ್ಲಿ ತನ್ನ ಶಿಖರ ಮುಟ್ಟಿತು.

ಅಂದರೆ 1890 ರಿಂದ 1935ರ ವರೆಗೆ ಅದರ ನಡೆಗಳಿವೆ. ಬೆಳವಣಿಗೆಯ ಹೊಳಹುಗಳಿವೆ. ಹಲವು ಇಸಂಗಳು ಹಲವು ಕಲಾವಿದ ಕಲಾವಿದೆಯರಿದ್ದಾರೆ. ಆ ಹೊಸತನವನ್ನು ಪಶ್ಚಿಮ ಹಾಗೂ ಯುರೋಪಗಳ ಸಾಹಿತ್ಯ ರಂಗದ ದಿಗ್ಗಜರು

ಚಿತ್ರಕಲಾವಿದರಿಂದಲೇ ಪಡೆದರು. ಇದೊಂದು ಗಮನಾರ್ಹ ಅಂಶ. ಪಶ್ಚಿಮ ಮತ್ತು ಯುರೋಪಿನಲ್ಲಿ ನಡೆದ 'ಮಾಡರ್ನಿಸಂ' ದೃಷ್ಟಿ ವ್ಯಾಪ್ತಿಯ ದೃಶ್ಯಕಲಾ ಚಳುವಳಿ ನಮ್ಮಲ್ಲಿ ನಡೆಯಲಿಲ್ಲ. ಅವರಿಗೆ ಕಾರಣವಿತ್ತು, ನಮಗೆ ಹಾಗಿಲ್ಲ, ಬ್ರಿಟಿಷರು ಕೊಟ್ಟದ್ದನ್ನೆಲ್ಲಾ ವಸಾಹಾತುಶಾಹಿ ಭೂತದ ಭ್ರಮೆಯಲ್ಲಿದ್ದ ನಮ್ಮವರು ಸ್ವೀಕರಿಸಿದರು. ಒಳ್ಳೆಯದು, ಕೆಟ್ಟದ್ದು, ಎಲ್ಲ ಅನಿವಾರ್ಯವಾಗಿ ನಮಗೆ ಅತಿ ಅಗತ್ಯವಾಗಿ ಅವರಿಗೆ ಬೇಕಾಗಿದ್ದ ದೃಶ್ಯಕಲೆಯನ್ನು ಕಲಿಸುವ ಕಲಾಶಾಲೆಗಳು ಸ್ಥಾಪಿಸಲ್ಪಟ್ಟವು. ನಮ್ಮ ಗುರುಕುಲ ಪದ್ಧತಿ ಇಲ್ಲವಾಯಿತು; ಇರಲಿ. ಅಲ್ಲಿ ದೃಶ್ಯಕಲೆಯ ಆಧುನಿಕತೆಯ ಪ್ರಭಾವ ಅಲ್ಲಿನ ಕಾವ್ಯದ ಮೇಲೆ ಬಹುಬೇಗ, ಅದೂ ಗಂಭೀರ ರೀತಿಯಲ್ಲಿ ಆಯಿತು. ಈ ರೀತಿಯಲ್ಲಿ ಕರ್ನಾಟಕದ ಮಹಿಳಾ ಶಿಲ್ಪಕಲಾವಿದರ ಕಲಾಕೃತಿಗಳು ಪ್ರೇರಣೆಗೊಳಪಡುತ್ತವೆ.

'ಪ್ರಭಾವದ ಆತಂಕ'ದ ಜತೆಜತೆಗೇ ಪ್ರಭಾವಕ್ಕೊಳಗಾದ ಕಲಾವಿದರು ತಮ್ಮ ನೆಲದ ಅನುಭವಗಳ ಸತ್ವಗಳನ್ನು ಹದವಾಗಿ ಬೆರೆಸಿ ಜೀವಂತಿಕೆಯಿಂದ ಅಭಿವ್ಯಕ್ತಿಸುವುದು ಸಾಧ್ಯವಾಗಬೇಕು. ಹುಸೇನ್, ಹೆಬ್ಬಾರರಂತೆ, ಆದರೆ ವಸ್ತು ಆಶಯ ನಿರ್ವಹಣೆ ಎಲ್ಲವೂ ಪ್ರಭಾವಗಳ ಗಾಳಿಗೆ ಒಳಗಾದರೆ ಅಂಥ ಸೃಷ್ಟಿಯ ಅಗತ್ಯ ಕಲಾವಿದನಿಗೇಕೆ? ಅನುಕರಣೆ ಕಲೆಯಲ್ಲ. ಅಂಥವನು ಕಲಾವಿದನೂ ಅಲ್ಲ. ಅಂಥ ಸೃಷ್ಟಿಗಳಿಂದ ಶಾಶ್ವತ ಆನಂದ ಸಿಗುವುದು ಸಾಧ್ಯವೇ ಇಲ್ಲ. ಹೊರಗಿನ ಉತ್ತಮ ಅಂಶಗಳನ್ನು ನಮ್ಮದನ್ನಾಗಿಸಿಕೊಂಡು ಹೊಸ ಕಸಿಯನ್ನು ಮಾಡುವಂತಾಗಬೇಕು. ನಮ್ಮ ಸಂಸ್ಕೃತಿಯ ಪರಂಪರೆಯೂ ಇದೇ ಹಾದಿಯನ್ನು ಆರಿಸಿಕೊಂಡಿದೆ. ಪಶ್ಚಿಮದ ಪ್ರಭಾವದ ನೆಲೆಗಳು ಕಲಾವಿದನ ದೃಷ್ಟಿ-ಸೃಷ್ಟಿಗಳೆರಡರಲ್ಲೂ ಕೆಲಸಮಾಡಿರುವುದನ್ನು ನಾವು ಗುರುತಿಸಬಹುದು. ಪಶ್ಚಿಮದ ಕೃತಕ ಯಾಂತ್ರಿಕ ಜೀವನದಿಂದ ಹುಟ್ಟಿಬಂದ ಬಹುತೇಕ ಸೃಷ್ಟಿಗಳಲ್ಲಿ ಹೊರಗಿನ ಆಕಾರ ಬಣ್ಣಗಳಿಗಷ್ಟೇ ಪ್ರಾಮುಖ್ಯ ಒಳಗಿನ ಭಾವವೈಭವ ನೋಟಗಳಿಗಲ್ಲ. ನಮ್ಮ ಪರಂಪರೆಯ ಕಲಾಸೃಷ್ಟಿ ಒಳನೋಟಕ್ಕೂ ಸಮಾನ ಪ್ರಾಧಾನ್ಯ ನೀಡುವಂಥದ್ದು. ಪಶ್ಚಿಮದಿಂದ ಪಡೆದುಕೊಂಡ ತಾಂತ್ರಿಕ ಆವಿಷ್ಕಾರ, ಸಾಧ್ಯತೆಗಳಿಗೆ ನಮ್ಮೊಳಗಿನ ಭಾವ ವೈಭವದ ಪರಕಾಯ ಪ್ರವೇಶದಂಥ ಸೃಷ್ಟಿಗಳು ಸಾಧ್ಯವಾಗಬೇಕು. ಕೇವಲ

ಮೇಲ್ಪದರದ ಆಟಗಳನ್ನು ಸಾಕು ಮಾಡಬೇಕು. ಅನುಕರಣೆ ಬೇಡ. ಇತ್ತೀಚೆಗೆ ಸಮಕಾಲೀನ ಸೌಂದರ್ಯ ಪ್ರಜ್ಞೆಯಿಂದ ಮೂಡಿದ ಗ್ರಹಿಕೆಗಳ ಕಾರಣವಾಗಿ ಆನಂದವನ್ನು ನೀಡುವಂಥ ಸೃಷ್ಟಿಗಳು ಮೂಡಿಬರುತ್ತಿರುವುದು ಪ್ರಭಾವಗಳ ಹಿನ್ನೆಲೆಯಲ್ಲೂ ಸ್ವಾಗತಾರ್ಹ.

ಸಮಾರೋಪ

ಕರ್ನಾಟಕದ ಕಲೆ, ಸಂಸ್ಕೃತಿಗಳು ಭಾರತೀಯ ಇತಿಹಾಸದಲ್ಲಿ ಮಹತ್ವಪೂರ್ಣವಾದಂತಹ ಸ್ಥಾನವನ್ನು ಪಡದಿವೆ. ಇಲ್ಲಿ ಕಂಡುಬರುವಂತಹ ಚಿತ್ರಕಲೆ, ವಾಸ್ತುಕಲೆ, ಶಿಲ್ಪಕಲೆಗಳು ಕರ್ನಾಟಕದ ಕಲಾಪರಂಪರೆಯನ್ನು ಪ್ರಚುರಪಡಿಸುತ್ತವೆ. ಇಲ್ಲಿ ಕಂಡುಬರುವ ವೈವಿಧ್ಯಮಯವಾದಂತಹ ಕಲಾ ಪ್ರಕಾರಗಳು ಮತ್ತು ಶೈಲಿಗಳು ಕಲಾ ಇತಿಹಾಸದ ಭವ್ಯ ಪರಂಪರೆಯನ್ನು ಬಿಂಬಿಸುತ್ತವೆ. ಇವುಗಳಲ್ಲಿ ಪ್ರಾಗೈತಿಹಾಸಿಕ ಕಾಲದಿಂದ ಹಿಡಿದು ಚಿತ್ರ ಮತ್ತು ಶಿಲ್ಪಗಳ ನಿರಂತರ ಬೆಳವಣಿಗೆಯನ್ನು ಗುರುತಿಸಬಹುದು. ಪ್ರತಿಯೊಂದು ಘಟ್ಟದಲ್ಲಿ ತನ್ನದೇ ಆದಂತಹ ವಿಶಿಷ್ಟತೆಯೊಡನೆ ದೃಶ್ಯ, ಸಂವೇದನೆಗಳನ್ನು ಪ್ರಚುರಪಡಿಸುತ್ತವೆ. ಆ ಕಾಲದ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಪರಿವ್ಯಾಪ್ತಿಯ ಚೌಕಟ್ಟಿಗನುಗುಣವಾಗಿಯೇ ಕಲಾ ಚಟುವಟಿಕೆಗಳು ನಡೆದು ಬಂದಿವೆ. ಈ ಚಟುವಟಿಕೆಗಳಿಂದ ಹೊರಹೊಮ್ಮಿದ ಕಲಾಕೃತಿಗಳು ಅಂದಿನ ಸಾಂಸ್ಕೃತಿಕ ಉದಾಹರಣೆಗಳಾಗಿ ಉಳಿದುಕೊಂಡಿವೆ.

ಒಟ್ಟಾರೆಯಾಗಿ ಈ ಕಲೆಯು ಉದ್ದೇಶವನ್ನೆಲ್ಲಾ ನಾವು ಅವಲೋಕಿಸುವುದು ಒಂದೇ ವಿಚಾರ ಅದೇನೆಂದರೆ ನಮ್ಮ ಕಲೆ, ಸಂಸ್ಕೃತಿ ಸಾಹಿತ್ಯ, ನೃತ್ಯ ಭಾಷೆಯು ಹೀಗೆ ಇದ್ದಿರುವುದು ಮತ್ತು ಕೊಡುಗೆಯು ಹೀಗೆ ನೀಡಲಾಗಿದೆ ಎಂಬುದನ್ನು ಕಲೆಯನ್ನು ತೀಕ್ಷ್ಣವಾಗಿ ವೀಕ್ಷಿಸಿದಾಗ ಕಾಣಬರುವ ಒಂದು ಪ್ರಮುಖಾಂಶವಾಗಿದೆ.

ಅಧ್ಯಯನದ ಫಲಿತಗಳು :

- ಕರ್ನಾಟಕದ ಮಹಿಳಾ ಶಿಲ್ಪಕಲಾವಿದೆಯರ ಶಿಲ್ಪಕಲಾಕೃತಿಗಳನ್ನು ಕಲಾತ್ಮಕ, ಸಾಮಾಜಿಕ, ಮನೋವೈಜ್ಞಾನಿಕ ಹಾಗೂ ಇತರ ನೆಲೆಗಳಲ್ಲಿ ಪ್ರತ್ಯೇಕವಾಗಿ ಚರ್ಚಿಸುವ ಅಗತ್ಯವಿದೆ.
- ಸಾಂಪ್ರದಾಯಕ ಶಿಲ್ಪಿಗಳಲಲಿ ಪುರುಷರದೇ ಪ್ರಾಬಲ್ಯವಿದ್ದರೂ ತುಂಬಾ ವಿರಳವಾಗಿ ಮಹಿಳೆಯೂ ಅದರ ರಚನೆಯಲ್ಲಿ ಭಾಗವಹಿಸಿದ್ದೂ ಕಂಡುಬರುತ್ತದೆ.
- ಕರ್ನಾಟಕದ ಮಹಿಳಾ ಶಿಲ್ಪಕಲಾವಿದೆಯರು ಒಟ್ಟಾರೆಯಾಗಿ ಪರಾವಲಂಬಿಯಿಂದ ಸ್ವತಂತ್ರ ಹಾಗೂ ಸೃಜನಾತ್ಮಕ ಸೃಷ್ಟಿಗಳೆಡೆಗೆ ದಾಪುಗಾಲು ಹಾಕಿರುವುದು ಈ ಶತಮಾನದ ವೈಶಿಷ್ಟ್ಯ.
- ಸ್ತ್ರೀ ಸಂವೇದನೆ ಶಿಲಾಗೌಡ, ಪುಷ್ಪಮಾಲಾ, ಅರ್ಚನಾ ಹಂಡೆ, ಶಾಂತಮಣಿ, ಸುರೇಖ, ಸ್ಮಿತಾಕಾರಿಯಪ್ಪ, ರಂಜನಿ ಶೆಟ್ಟರರವರುಗಳು ಹಲವು ಮಾಧ್ಯಮಗಳ ಶಿಲ್ಪ-ಇನಸ್ಟಾಲೇಷನಗಳಲ್ಲಿ ಶಕ್ತಿಯುತ ಗ್ರಹಿಸಲ್ಪಟ್ಟಿದೆ.
- ಪಾಶ್ಚಾತ್ಯ ದೇಶಗಳಲ್ಲಿದ್ದಂತೆ ತೀವ್ರವಾದಿ ಫೆಮಿನಿಷ್ಟರು ಈ ಚಿತ್ರ ಶಿಲ್ಪಕೃತಿಗಳ ಕ್ಷೇತ್ರಗಳಲ್ಲಿ ಕಂಡುಬರುವುದಿಲ್ಲ ಎನ್ನುವುದು ನೀಜಕ್ಕೂ ಕುತೂಹಲಕರ. ಫೆಮಿನಿಷ್ಟ ಕಾಳಜಿಗಳು, ಸೆಳಕುಗಳು ಅಲ್ಲಲ್ಲಿ ಭುಗಿಲೆದ್ದರೂ ಅವು ಸೌಮ್ಯ ರೂಪಗಳಾಗಿ ರೂಪಾಂತರಗೊಂಡಿದೆ. ಈ ಕಾರಣದಿಂದಾಗಿಯೇ ಅವು ಕಲೆಯ ಉತ್ತಮ ಉದಾಹರಣೆಗಳಾಗಿ ನಮ್ಮ ಮುಂದೆ ನಿಂತಿವೆ. ಹೀಗೆ ಒಂದೇ ಮಾತಿನಲ್ಲಿ ಹೇಳುವುದಾದರೆ, ಶತಮಾನಗಳಿಂದ ತುಳಿತಕ್ಕೊಳಗಾಗಿದ್ದ ಭಾವನೆಗಳನ್ನು ಸ್ವತಂತ್ರವಾಗಿ, ಸ್ವಚ್ಛಂದವಾಗಿ ಅಭಿವ್ಯಕ್ತಿಸಿದ್ದು, ಪರಾವಲಂಬಿತನವನ್ನು ವರ್ಜಿಸಿದ್ದು ಹಾಗೂ ಪುರುಷರನ್ನು ಮೀರಿದ ಸಾಧನೆಗಳನ್ನು ಮಾಡಿದ್ದು, ಈ ಶತಮಾನದ ಮಹಿಳಾ ಶಿಲ್ಪಕಲಾವಿದರ ಮುಖ್ಯ ಸಾಧನೆಗಳು ಎಂದು ಸ್ಥೂಲವಾಗಿ ಹೇಳಬಹುದಾಗಿದೆ.

ಪ್ರಾಚೀನ ಕಾಲದಿಂದಲೂ ಇಂದಿನ ಆಧುನಿಕ ಯುಗದವರೆಗೂ ಮೂಡಿಬಂದ ಕಲೆಯಲ್ಲಿಯೂ ಪ್ರತಿಯೊಂದು ಆಕೃತಿಯಲ್ಲೂ ಮತ್ತು ಬರಹಗಾರನ ಕೈಯಲ್ಲಿ ಹೂವಾಗಿ ಹೊಳೆದಂತಹ ಹೊಳಪುಳ್ಳ ಸೌಂದರ್ಯದಂತೆ ಈ ಕಲೆಯು ಕಂಗೊಳಿಸುವಂತಾಗಿದೆ. ಹಾಗೆಯೇ ಉದಾ: ಸಿಂದೂ ನಾಗರೀಕತೆ ಹೀಗೆ ಇತ್ತು ಎಂದುಹೇಳುವುದು, ಈಗಿರುವ ಆಗಿನ ಶಿಲ್ಪಕಲೆಗೆ ಸಾಕ್ಷಿ ಹಾಗೆಯೇ ಬೌದ್ಧ, ಜೈನ ಧರ್ಮಗಳು 6ನೇ ಶತಮಾನದಲ್ಲಿದ್ದವು ಎಂಬುದಕ್ಕೆ ಕಲ್ಲಿನ ಕೆತ್ತಿರುವ ಅವರ ಮೂರ್ತಿ ಶಿಲ್ಪಗಳೇ ಸಾಕ್ಷಿಯಾಗಿವೆ. ಹಾಗೆಯೇ ಪರ್ಶಿಯಾದ ಪ್ರವಾಸಿಗ ಪರ್ಶಿ ಬ್ರೌನ್ ಹೇಳಿದಂತೆ, ಭಾರತವು ಕಲೆಗಳ ಆಗರ, ಹಂಪಿಯೂ ಹಾಳಾಗಿ ಹೋದರೂ ಅದರಲ್ಲಿ ಕಂಗೊಳಿಸುವ ಪ್ರತಿಯೊಂದು ಶಿಲ್ಪಕಲಾಕೃತಿಯು ಅಚ್ಚ ಅಳಿಯದೇ ಇಂದಿಗೂ ಜೀವಂತ ಕರ್ನಾಟಕ ಸಂಸ್ಕೃತಿಯನ್ನು ವಿಜಯನಗರದ ಸಾಮ್ರಾಜ್ಯ ಕೀರ್ತಿಯನ್ನು ಎತ್ತಿ ಹಿಡಿದು ಸಾರಿ ಸಾರಿ ಹೊಗಳಿವೆ.

ಹಾಗೆಯೇ ಕೌಟಿಲ್ಯ ಅರ್ಥಶಾಸ್ತ್ರ ವಾತ್ಸಾಯನ, ಕಾಮಸೂತ್ರ, ಶ್ರವಣಬೆಳಗೋಳ ಬಾಹುಬಲಿ 'ಮೆಗಸ್ತಾನಿಸನ ಇಂಡಿಕಾ' ಪಾಣಿನಿಯ ಅಪ್ಯಾಧ್ಯಾಯ ವರಾಹಿವೀರ 'ಬೃಹತ್ ಸಂಹಿತೆ' ಬಿಜಾಪೂರದ ಗೋಳುಗುಮ್ಮಟ ತಾಜಮಹಲ್ ಹಾಗೂ ಹೈದ್ರಾಬಾದದ ಶಿಲ್ಪಕಲೆ ಕೊಡುಗೆಗಳು ಹೀಗೆ ಹಲವಾರು ರಾಜವಂಶಗಳು ರಾಜ ಮನೆತನಗಳು ಆಳ್ವಿಕೆ ಮಾಡಿ ತಾವು ಅಳಿಸಿ ಹೋದರೂ ನಮ್ಮ ನಾಡಿನ ಕಲೆ ಸಾಹಿತ್ಯ ಸಂಸ್ಕೃತಿ, ಭಾಷೆ ಹಾಗೆಯೇ ಆಚಾರ ವಿಚಾರ ಎಲ್ಲವೂ ಅವರು ಇಲ್ಲಿಯೇ ಶಿಲ್ಪ ಕೆತ್ತನೆಯಲ್ಲಿಯೇ ಕೆತ್ತಿ ತಮ್ಮಲ್ಲಿ ಅಡಗಿರುವ ಸುಪ್ತ ಜ್ಞಾನವನ್ನು ಇಲ್ಲಿಯೆ ಬಿಟ್ಟು ಹೋಗಿದ್ದಾರೆ. ಪಾಶ್ಚಿಮಾತ್ಯರು ಹಾಗೂ ಬೇರೆ ನಾಡಿನವರು ಕೂಡ ಇದರ ಬಗ್ಗೆ ನೋಡಿ ಮನಸೆಳೆಯುವಂತೆ ಮಾಡಿ ನಮ್ಮ ಸಂಸ್ಕೃತಿಯ ಹಾರವನ್ನು ಈ ನಾಡಿನಲ್ಲಿ ಮಾತ್ರವಲ್ಲದೆ ದೇಶ ವಿದೇಶಗಳಲ್ಲೂ ಇದರ ಸುವಾಸನೆ ಹರಿಯುವಂತೆ ಮಾಡಿದ ಕೀರ್ತಿ ನಮ್ಮ ಶಿಲ್ಪ ಕಲಾವಿದರಿಗೆ ದೊರಕಬೇಕು. ಈ ಕೀರ್ತಿಯಲ್ಲಿ ಮಹಿಳಾ ಕಲಾವಿದರ ಪಾತ್ರವೂ ಪ್ರಮುಖವಾಗಿದೆ. ಮಹಿಳಾ ಕಲಾವಿದರು ತಮ್ಮದೇ ಆದ ಶೈಲಿ, ತಂತ್ರಗಳೊಂದಿಗೆ ಗುರುತಿಸಿಕೊಂಡಿದ್ದಾರೆ. ಅವರ ಸಂಕ್ಷಿಪ್ತ ಪರಿಚಯವೂ ಈ ಲೇಖನದಲ್ಲಿದ್ದು ಅವರನ್ನು ಸಮಾಜಕ್ಕೆ ಗುರುತಿಸುವ ಪ್ರಯತ್ನವನ್ನು

ಮಾಡಲಾಗಿದೆ. ಈ ಲೇಖನವು ಎಲ್ಲಾ ಓದುಗರಿಗೂ ಹಿಂದಿನ ಮತ್ತು ಮುಂದಿನ ಕಲಾಭಿಮಾನಿಗಳಿಗೆ ಅರ್ಪಣೆಯಾಗಲಿ ಹಾಗೂ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಕಲಾವಿದರು ಶಿಲ್ಪಕಲೆಯಲ್ಲಿ ತೊಡಗಿಸಿಕೊಳ್ಳಲಿ ಎಂದು ಹಾರೈಸೋಣ.

ಅನುಬಂಧ-೧

ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ ವಿಜೇತ ಮಹಿಳಾ ಶಿಲ್ಪಕಲಾವಿದರು

ಶಿಲ್ಪಕಲಾ ಅಕಾಡೆಮಿ ಗೌರವ ಪ್ರಶಸ್ತಿ ಪುರಸ್ಕೃತರು

1997 ಶ್ರೀಮತಿ ಸಾವಿತ್ರಮ್ಮ ಹಾರನಹಳ್ಳಿ ಶಿವಮೊಗ್ಗ ಜಿಲ್ಲೆ

1998 ಶ್ರೀಮತಿ ಎನ್.ಪುಷ್ಪಮಾಲಾ ಬೆಂಗಳೂರು.

1999 ಶ್ರೀಮತಿ ಕನಕಾಮೂರ್ತಿ ಬೆಂಗಳೂರು.

2004 ಶ್ರೀಮತಿ ಲಲಿತಾ ಶಂಕರ

2007 ಶ್ರೀಮತಿ ಸರೋಜಾದೇವಿ ಆಚಾರ್ಯ, ದೇವನಹಳ್ಳಿ,

2012 ಶ್ರೀಮತಿ ವೈ.ಜಯಮ್ಮ ಮೈಸೂರು

2013 ಶ್ರೀಮತಿ ಶ್ಯಾಮಲ ನಂದೀಶ ಬೆಂಗಳೂರು.

2016 ಶೋಭಾ ಈರಣ್ಣ ಕಂಬಾರ, ಕಲಬುರಗಿ

ಶಿಲ್ಪಕಲಾ ಅಕಾಡೆಮಿ ವಾರ್ಷಿಕ ಶಿಲ್ಪಕಲಾ ಪ್ರದರ್ಶನ ಬಹುಮಾನ ಪುರಸ್ಕೃತರು

2005 ಅರ್ಚನಾ ಸಿಂಗ್ ಸಿ.

2005 – ಬಿ.ಅರ್. ಗೀತಾಂಜಲಿ ಆಚಾರ್

2009 – ಶಕುಂತಲಾ ಎಂ.ಬಡಿಗೇರ

2015 ಗಾಯತ್ರಿ ಎ.ಶಿಲ್ಪಿ

2015 ದೇವಿಪ್ರಿಯಾ ವಿಮಲನಾಥನ್

ಅನುಬಂಧ–೨

ಗ್ರಂಥಋಣ

1) ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ – ಲೇ. ಕೆ.ವಿ.ಸುಬ್ರಹ್ಮಣ್ಯಂ, ಕರ್ನಾಟಕ ಶಿಲ್ಪಕಲಾ 2007 ಅಕಾಡೆಮಿ.

2) ಶಿಲ್ಪಕಲಾ ಪ್ರಪಂಚ –ಸಂ. ಪಿ.ಆರ್. ತಿಪ್ಪೇಸ್ವಾಮಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, 1994

3) ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಸಾಧನಾ ಸಂಚಿಕೆ 2005–2008 ವರದಿ ಸಿದ್ಧಪಡಿಸಿದವರು: ಡಾ. ಪ್ರಮೀಳ ಲೋಚನ

4) ಇನಸ್ಟಾಲೇಷನ್ ಕಲಾ ಪ್ರಪಂಚ– ಲೇ. ಕೆ.ವಿ.ಸುಬ್ರಹ್ಮಣ್ಯಂ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ 2008.

5) ಕರ್ನಾಟಕ ಶಿಲ್ಪಕಲಾ ಅಕಾಡೆಮಿ –ಸಂ. ಮಹಾದೇವಪ್ಪ ಎಸ್.ಶಿಲ್ಪಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿ

6) ಲಲಿತಕಲೆಗಳು ಸಂ. 69, 177 – ಲೇ. ಕೆ.ವಿ.ಸುಬ್ರಹ್ಮಣ್ಯಂ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

7) ಹೌದೇ ಇದು ನಾನೇ! (ಆತ್ಮ ಚರಿತ್ರೆ) – ಲೇ. ಕನಕಾಮೂರ್ತಿ, ಪ್ರ. ಭಾರತೀಯ ವಿದ್ಯಾ ಭವನ, ಎಂ.ಐ. ಬಿರ್ಲಾ ಇನಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ್ ಭವನ್ಸ್ ಪ್ರಿಯಂವದಾ ಬಿರ್ಲಾ ಇನಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ್.

8) ಭಾರತೀಯ ಶಿಲ್ಪಕಲೆ – ಲೇ. ಎನ್. ಮರಿಶಾಮಾಚಾರ್ ಪ್ರ. ಕರ್ನಾಟಕ ಶಿಲ್ಪಕಲಾ ಅಕಾಡೆಮಿ.

9) ಕಲೆ ಮತ್ತು ರಸಾಸ್ವಾದನೆ – ಸಂ. ಪ್ರೊ. ಎಂ.ಎಚ್.ಕೃಷ್ಣಯ್ಯ ಪ್ರ. ಕರ್ನಾಟಕ ಲಲಿತಕಲಾ ಅಕಾಡೆಮಿ

10) ಸಮಕಾಲೀನ ಶಿಲ್ಪಕಲೆ – ಲೇ. ಶಿವಾನಂದ ಎಚ್.ಬಂಟನೂರ, ಪ್ರ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

11) ನೋಟ ಪಲ್ಲಟ – ಸಂ. ಎಚ್.ಎ.ಅನಿಲಕುಮಾರ ಪ್ರ. ಅಭಿನವ

12) ದೃಶ್ಯ – ವಸಾಹತ್ತೋತ್ತರ ದೃಶ್ಯ ಸಂಸ್ಕೃತಿಗೊಂದು ಪರ್ಯಾಯ ಚಿಂತನೆ– ಸಂ. ಎಸ್.ಮಂಜುನಾಥ್ ಪ್ರ. ನಮ್ಮ ಸಂಸ್ಕೃತಿ.

13) ಪ್ರಶಸ್ತಿ ಪ್ರದಾನ ಸಮಾರಂಭ 2006, ಪ್ರ. ಕರ್ನಾಟಕ ಶಿಲ್ಪಕಲಾ ಅಕಾಡೆಮಿ

14) ಗೌರವ ಪ್ರಶಸ್ತಿ ಪುರಸ್ಕೃತರು 2010 ಕರ್ನಾಟಕ ಶಿಲ್ಪಕಲಾ ಅಕಾಡೆಮಿ.

15) ಮಾಟದೊಳಗಿನ ನೋಟ – ಲೇ. ಡಾ.ಶಿವಾನಂದ ಎಚ್.ಬಂಟನೂರ ಪ್ರ. ಯಾಜಿ ಪ್ರಕಾಶನ, ಹೊಸಪೇಟೆ 2013

16) ಹೈದ್ರಾಬಾದ ಕರ್ನಾಟಕ ದೃಶ್ಯಕಲಾ ಪರಂಪರೆ – ಸಂ. ಡಾ. ಮಲ್ಲಿಕಾರ್ಜುನ ಸಿ.ಬಾಗೋಡಿ, ಪ್ರ. ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ/ವಿಕಾಸ ಅಕಾಡೆಮಿ ಗುಲಬರ್ಗಾ.

17) ಪ್ರಶಸ್ತಿ ಪ್ರಧಾನ ಸಮಾರಂಭ 2007, ಪ್ರ. ಕರ್ನಾಟಕ ಶಿಲ್ಪಕಲಾ ಅಕಾಡೆಮಿ.

18) ಕಲಾನ್ವೇಷಣೆ – ಲೇ. ಬಸವರಾಜ ಕಲೆಗಾರ ಪ್ರ. ರೇಖಾಚಿತ್ರ ಪ್ರಕಾಶನ, ಕೊಂಕಲ್.

19) ವಾರ್ಷಿಕ ಶಿಲ್ಪಕಲಾ ಪ್ರದರ್ಶನ 2007, ಕರ್ನಾಟಕ ಶಿಲ್ಪಕಲಾ ಅಕಾಡೆಮಿ.

20) ಕರ್ನಾಟಕ ಕಲಾದರ್ಶನ ಸಂಪುಟ ಒಂದು –ಸಂ. ಪ್ರೊ. ಎಂ.ಎಚ್.ಕೃಷ್ಣಯ್ಯ ಡಾ. ವಿಜಯಾ ಶ್ರೀ ಸಿ.ಆರ್. ಕೃಷ್ಣರಾವ್, ಪ್ರ. ನವಕರ್ನಾಟಕ ಪಬ್ಲೀಕೇಶನ್ ಪ್ರೈ ಲಿಮಿಟೆಡ್.

೨೧) ಕನ್ನಡ ಶಿಲ್ಪಕಲೆ ಸಮಾಕಾಲೀನ ದೃಶ್ಯ, ಲೇ; ಕೆ.ವಿ ಸುಬ್ರಹ್ಮಣ್ಯಂ ಪ್ರ: ಕರ್ನಾಟಕದ ಶಿಲ್ಪಕಲಾ ಅಕಾಡೆಮಿ ಬೆಂಗಳೂರು–೨೦೦೭

೨೨) ಹೈದ್ರಾಬಾದ ಕರ್ನಾಟಕ ಜಾನಪದ ಸಾಧಕರು, ಪ್ರ.ಸಂ. ಡಾ.ಬಸವರಾಜ ಸಬರದ, ಸಂ:ಡಾ.ಬಸವರಾಜ ಪೋಲಿಸ್‌ಪಾಟೀಲ, ಕನ್ನಡ ಅಧ್ಯಯನದ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

೨೩) ಶಿಲ್ಪಕಲಾ ಪ್ರಪಂಚ: ಪ್ರಧಾನ ಸಂಪಾದಕರು, ಪಿ.ಆರ್.ತಿಪ್ಪೇಸ್ವಾಮಿ, ಸಂ.ಅ.ಲ.ನರಸಿಂಹನ, ಎನ್ ಮರಿಶಾಮಾಚಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೨೪) ದೃಶ್ಯಬೆಳಕು ಕನ್ನಡ ಮತ್ತು ಇಂಗ್ಲೀಷ ತ್ರೈಮಾಸಿಕ, ಸಂ: ಡಾ. ಪರಶುರಾಮ.ಪಿ. ಕಲಬುರಗಿ ಸಂಪುಟ–೦೧, ಸಂಚಿಕೆ–೦೧.

೨೫) ಕಲಾಕಂಪು, ಲೇ: ಡಾ.ಮಲ್ಲಿಕಾರ್ಜುನ.ಸಿ.ಭಾಗೋಡಿ, ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ ಸೇಡಮ್.

೨೬) ಸಂಕೀರ್ಣ ವೃತ್ತಿಪದಕೋಶ, ಲೇ: ಡಾ.ಎಸ್.ಎಸ್.ಅಂಗಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೨೭) ದೇಸಿ–೩ ಲೇ: ಡಾ. ವೀರಣ್ಣ ದಂಡೆ, ಪ್ರ: ಸಾಗರ ಪ್ರಕಾಶನ, ನಂ. ೬೯೫, ೧೦ನೇ ಮುಖ್ಯರಸ್ತ, ೮೦ ಅಡಿರಸ್ತೆ, ವಿನಾಯಕ ಬಡಾವಣೆ, ನಾಗರಭಾವಿ ೨ನೇ ಹಂತ, ಬೆಂಗಳೂರು–೫೬೦೦೭೨

೨೮) ಕರ್ನಾಟಕದ ಶಿಲ್ಪ ಕಲಾವಿದರು, ಸಂ. ಡಾ.ಚೂಡಾಮಣಿ ನಂದಗೋಪಾಲ, ಪ್ರ: ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು–೨೦೦೭.

೨೯) ಬಳ್ಳಾರಿ ಜಿಲ್ಲೆಯ ಚಿತ್ರಕಲೆ –ಡಾ.ಎಚ್.ಈ ಬಸವರಾಜಪ್ಪ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ–೨೦೧೬.

೩೦) ಕೊಪ್ಪಳ ಜಿಲ್ಲಾ ದರ್ಶನ – ಸಂ. ಪ್ರೊ.ಅಲ್ಲಮಪ್ರಭು ಬೆಟ್ಟದೂರು, ಶ್ರೀ ಎಚ್.ಎಸ್. ಪಾಟೀಲ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ–೨೦೦೫.

೩೧) ಹೈದ್ರಾಬಾದ ಕರ್ನಾಟಕ ಲಲಿತಕಲಾ ವಿಷಯಕೋಶ, ಸಂ: ಡಾ.ಪಿ.ಕೆ.ಖಂಡೋಬಾ, ಡಾ.ಎಸ್.ಸಿ.ಪಾಟೀಲ್, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ, ೨೦೧೧.

೩೨) ಸಾಂಸ್ಕೃತಿಕ ಅಧ್ಯಯನ ಲೇ: ಡಾ. ರಹಮತ್ ತರೀಕೆರೆ, ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮.

೩೩) ಹೈದ್ರಾಬಾದ ಕರ್ನಾಟಕ ಮಾಧ್ಯಮ, ಲೇ: ಶ್ರೀನಿವಾಸ ಸಿರನೂರಕರ್, ಪ್ರ: ಪಾವನ ಪ್ರಕಾಶನ, ಕಲಬುರಗಿ.

೩೪) ಸುವರ್ಣ ಜಾನಪದ (ಸಂಪುಟ–೧) ಸಂ; ಡಾ.ಹಿ.ಶಿ.ರಾಮಚಂದ್ರೇಗೌಡ, ಡಾ. ಕೃಷ್ಣಮೂರ್ತಿ ಹನೂರು, ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೩೫) ದೃಶ್ಯಧ್ಯಾನ, ಲೇ: ಡಾ.ಪರಶುರಾಮ್.ಪಿ. ಪ್ರ: ಚಿತ್ರಾಲಯ ಪ್ರಕಾಶನ, ಕಲಬುರಗಿ.

೩೬) ವಿಜಯನಗರದ ಗಾರೆ ಶಿಲ್ಪ ಲೇ: ಡಾ.ಸಿ.ಮಹಾದೇವ, ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೩೭) ವ್ಹಿ.ಟಿ.ಕಾಳೆ, ಲೇ: ಡಾ.ಎಸ್.ಸಿ.ಪಾಟೀಲ್ ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ, ಕನ್ನಡ ಭವನ ಬೆಂಗಳೂರು. ೫೬೦೦೦೨

೩೮) ವಿಜಯನಗರ ಶಿಲ್ಪಕಲೆ, ಸಂಪಾದಕರು, ಡಾ.ಎಚ್.ಎಸ್.ಗೋಪಾಲ್ ರಾವ್, ಲೇಖಕರು– ಡಾ.ಅ.ಲ.ನರಸಿಂಹನ್ ಪ್ರ: ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

೩೯) ನಮ್ಮ ಕರಕುಶಲ ವಸ್ತುಗಳು, ಲೇ: ಎಂ.ವಿ.ನಾರಾಯಣರಾವ್, ಪ್ರ: ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ.

40) 2008 An Exhibition of Recent contemporary Sculptures, Catlouge Pub: Contemporary Sculptor's Forum.

೪೧) ನೆನಪಿನ ನೆರಳಲ್ಲಿ ಲೇ: ಡಾ.ವಿ.ಜಿ.ಅಂದಾನಿ ಪ್ರ: ನೀಲಾಂಗುರ್ ಪ್ರಕಾಶನ, ಕಲಬುರಗಿ ೨೦೧೫.

೪೨) ಕರ್ನಾಟಕ ಶಿಲ್ಪ ಸಂಚಲನ, ಸಂ:ಡಾ. ಶಿವಾನಂದ ಎಚ್. ಬಂಟನೂರ್, ಪ್ರ.ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

೪೩) ಬೀದರ ಜಿಲ್ಲಾ ದರ್ಶನ, ಸಂ: ಡಾ. ಸೋಮನಾಥ ಯಾಳವಾರ, ಡಾ.ಪ್ರೇಮಾ ಸಿರ್ಶೆ, ಪು: ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ, ೨೦೦೫.

೪೪) ದೃಷ್ಟಿ ಸೃಷ್ಟಿ, ಲೇ: ಡಾ. ಶಿವಾನಂದ ಎಚ್.ಬಂಟನೂರ, ಪ್ರ: ಅಲಖಾ ಪ್ರಕಾಶನ, ಬೈಸೂರು, ಸಿಂದಗಿ, ೨೦೦೯.

೪೫) ಕರ್ನಾಟಕದ ಜನಪದ ಚಿತ್ತಾರಗಳು ಹಾಗೂ ಶಿಲ್ಪಗಳು ಮಹಾದೇವ ಜಗತಾಪ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು-೨೦೦೪.

೪೬) ಕಲೆ ಮತ್ತು ಮನುಷ್ಯ ಸಂಸ್ಕೃತಿ; ಜ್ಯೋತಿ ಹೊಸೂರ (ಸಂ), ಕಾಲಗತಿ ಗ್ರಂಥಮಾಲೆ, ಬೆಂಗಳೂರು-೧೯೯೦.

೪೭) ಗ್ರಾಮೀಣ ಚಿತ್ರಗಳು, ಎಸ್.ಕೆ.ರಾಮಚಂದ್ರರಾವ, ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು-೧೯೯೯.

೪೮) ಕುಂಬಾರಿಕೆ ವೃತ್ತಿ ಪದಕೋಶ, ಬಸವರಾಜ ಕುಂಚುರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫.

೪೯) ಪಾಂಚಾಳ ವೃತ್ತಿ ಪದಕೋಶ, ಡಾ.ಡಿ.ಪಾಂಡುರಂಗ ಬಾಬು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೨.

೫೦) ದಲಿತ ಚಿಂತನೆ: ಮೊಗಳ್ಳಿ ಗಣೇಶ: ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೫೧) ಕರಕುಶಲ ಕಲೆಗಳು-ಸಂ: ಕರೀಗೌಡ ಬೀಚನಳ್ಳಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೫೨) ಜಾನಪದ ಶಿಷ್ಟಪದ: ಡಾ.ಪಿ.ಕೆ.ರಾಜೇಂದ್ರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೫೩) ಸಾಂಸ್ಕೃತಿಕ ಸಂವೇದನೆ ಒಂದು ಮುನ್ನೋಟ, ಡಾ. ತಾಳ್ತಜೆ ವಸಂತಕುಮಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೫೪) ಪಾರಂಪರಿಕ ಶಿಲ್ಪ ನೆನ್ನೆ-ನಾಳೆ, ಡಾ. ಜ್ಞಾನಾನಂದ, ಸಾಂಸ್ಕೃತಿಕ ಸಾಹಿತ್ಯ ಪ್ರತಿಷ್ಠಾನ, ೨೦೦೫,

೫೫) ಗಿರಿಜನ ಸಂಸ್ಕೃತಿ, ಸಂ. ಪ್ರೊ. ಕಾಳೇಗೌಡ ನಾಗವಾರ, ಎನ್ ಹುಚ್ಚಪ್ಪ ಮಾಸ್ತರ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೨.

೫೬) ಬಿದರಿ ಕಲೆ, ಲೇ: ಡಾ.ರೆಹಮಾನ್ ಪಟೇಲ್, ಪ್ರ: ಇಂಡಿಯನ್ ರಾಯಲ್ ಅಕಾಡೆಮಿ ಆಫ್ ಆರ್ಟ್ ಆಂಡ್ ಕಲ್ಚರ್, ಕಲಬುರಗಿ.

ಅನುಬಂಧ –೩

ಸಂಕ್ಷೇಪಗಳು

- ಕ.ಶಿ.ಅ.ಬೆಂ – ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು
- ಕ.ವಿ.ವಿ.ಧಾ – ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
- ಕ.ವಿ.ವಿ.ಹಂ – ಕನ್ನಡ ವಿಶ್ವವಿದ್ಯಾಲಯ ಹಂಪಿ
- ಗು.ವಿ.ಕ – ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ
- ಪ್ರ – ಪ್ರಕಾಶನ, ಪ್ರಕಾಶಕರು,
- ಲೇ – ಲೇಖಕರು
- ಸಂ. – ಸಂಪಾದಕರು
- ಕ.ಲ.ಕ.ಅ. – ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು
- ಜ. ಶಿ – ಜನಪದ ಶಿಲ್ಪಿ
- ಜಾ.ಲೋ – ಜಾನಪದ ಲೋಕ
- ಹೈ.ಕ – ಹೈದ್ರಾಬಾದ ಕರ್ನಾಟಕ
- ಕ.ಗ್ರಂ – ಕನ್ನಡ ಗ್ರಂಥಗಳು
- ಪು.ಸಂ – ಪುಟ ಸಂಖ್ಯೆ

ಅನುಬಂಧ –೪

ಛಾಯಾಚಿತ್ರ ಋಣ

- ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು
- ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಂಗಳೂರು
- ದೃಶ್ಯಕಲಾ ಅಧ್ಯಯನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ
- ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆ, ಕಲಬುರಗಿ
- ಶ್ರೀ ಗುರುನಾಥ ಎಲ್.ಚವ್ಹಾಣ, ಕಲಬುರಗಿ
- ಶ್ರೀ ಮಾನಯ್ಯ ನಾ. ಬಡಿಗೇರ್, ಕಲಬುರಗಿ

ಅನುಬಂಧ –೫

ಮಹಿಳಾ ಶಿಲ್ಪಕಲಾವಿದರ ವಿಳಾಸ

1) ಗಾಯತ್ರಿ ಎ. ಶಿಲ್ಪಿ

ಕೇರಾಫ್ ಅಶ್ವಿನಕುಮಾರ್ ಎಂ. ಪೊದ್ದಾರ,

ನಂ. 11–421/22, 'ಸ್ವರಾಲಯ' ಸಮತಾ ಕಾಲೋನಿ

ಬ್ರಹ್ಮಪೂರ, ಗುಲಬರ್ಗಾ 585103

ದೂರವಾಣಿ: 9845965029/9844932610

2) ಗೀತಾಂಜಲಿ ಬಿ.ಆರ್.

'ಡಾಲಿ' 79/2

ಐದನೇ ಅಡ್ಡರಸ್ತೆ, ರಾಜೇಂದ್ರನಗರ

ಮೈಸೂರು,

ದೂರವಾಣಿ: 9886282894

3) ದೇವಿಪ್ರಿಯಾ ವಿಮಲನಾಥನ್

ನಂ. 33/7–ಜಿ, 2ನೇ ಅಡ್ಡರಸ್ತೆ,

2ನೇ ಮುಖ್ಯರಸ್ತೆ, ಹುಳಿಮಾವು ಬಡಾವಣೆ

ಬನ್ನೆರುಘಟ್ಟ ರಸ್ತೆ,

ದೂರವಾಣಿ: 9844827276

4) ಬಸಮ್ಮ ಮಾ.ನರಗುಂದ

ಎ.ಎಂ ನರಗುಂದ

ವಿದ್ಯಾನಗರ, 4ನೇ ಅಡ್ಡರಸ್ತೆ, ಬಾದಾಮಿ–587201

ದೂರವಾಣಿ: 9686973625

5) ಶಕುಂತಲಾ ಬಡಗೇರ್

ಕೇರಾಫ್ ನಾಡೋಜ ನಾಗಣ್ಣ ಬಡಿಗೇರ ಶಿಲ್ಪಕೇಂದ್ರ

ನಂ. ಟಿ–11–366/67 ಎ

ಮೋರೆ ಕಾಂಪ್ಲೇಕ್ಸ್ ಬಳಿ

ಹೊಸ ರಾಘವೇಂದ್ರ ಕಾಲೋನಿ, ಕಲಬುರಗಿ–585103

ದೂರವಾಣಿ: 9845975754

6) ಲಲಿತಾ ಶಂಕರ

ನಂ. 290:10, 8ನೇ ಮುಖ್ಯರಸ್ತೆ, 4ನೇ ಬ್ಲಾಕ್,

ಜಯನಗರ, ಬೆಂಗಳೂರು–560011

ದೂರವಾಣಿ: 080–26544950, 26657277

7) ಶ್ರೀಮತಿ ನಾಗರತ್ನ ಎ ಸಾಹು.

ಪದ್ಮಪಾಣಿ, ನಂ. 319/ಎ

ಜಿ.ಡಿ.ಎ. ಲೇಔಟ್, ಕಲಬುರಗಿ – 585105

ದೂರವಾಣಿ: 9480272927

8) ಮಾಧುರಿ.ಎಂ. ಗೋನಾಲ

ನಂ. ಟಿ–11–366/67 ಎ

ಮೋರೆ ಕಾಂಪ್ಲೇಕ್ಸ್ ಬಳಿ

ಹೊಸ ರಾಘವೇಂದ್ರ ಕಾಲೋನಿ, ಕಲಬುರಗಿ–585103

ದೂರವಾಣಿ: 9845975754

9) ತಬ್ಬು ತಬ್ಬಸ್ಸುಮ

ಅಂಭಾಭವಾನಿ ದೇವಸ್ಥಾನ ಹತ್ತಿರ

ಚಪ್ಪರದಳ್ಳಿ, 27ನೇ ವಾರ್ಡ

ಹೊಸಪೇಟೆ – 583201

ಬಳ್ಳಾರಿ, ದೂರವಾಣಿ: 9886450323

10) ಸುಮಲತಾ ವ್ಹಿ. ಕವಲೂರ

ಸಾ॥ ಲಕ್ಕುಂಡಿ ತಾ.ಜಿ.ಗದಗ

ದೂರವಾಣಿ: 9886290158

